ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 19 ಶನಿವಾರ 2024

ಸಂಪುಟ: 45 | ಸಂಚಿಕೆ: 183 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4


ಇಡಿ ಹಿಡಿತದಲ್ಲಿ ಮುಡಾ

ಶಸ್ತ್ರಸಜ್ಜಿತ ಸಿಆರ್‌ಪಿಎಫ್ ಸಿಬ್ಬಂದಿ ಭದ್ರತೆಯಲ್ಲಿ 12 ಮಂದಿ ಇಡಿ ಅಧಿಕಾರಿಗಳಿಂದ ದಾಖಲೆ ಪರಿಶೀಲನೆ; ಸಿಎಂ ಸಿದ್ದರಾಮಯ್ಯ ಪತ್ನಿ ಬಿ.ಎಂ.ಪಾರ್ವತಿಯವರಿಗೆ 14 ನಿವೇಶನ ಮಂಜೂರು ಸೇರಿದಂತೆ ಶೇ. 50:50ರ ಅನುಪಾತದಡಿ 6,000 ನಿವೇಶನಗಳ ಹಂಚಿಕೆ ಸಂಬಂಧ ದಾಖಲಾತಿ ಶೋಧನೆ; 2 ದಿನ ಇಡಿ ವಶದಲ್ಲಿ ಮುಡಾ ಕಚೇರಿ; ಸಾರ್ವಜನಿಕರಿಗೆ ಪ್ರವೇಶ ನಿಷೇಧ

ಮೈಸೂರು, ಅ. 18(ಆರ್‌ಕೆ)– ನಿಯಮ ಬಾಹಿರವಾಗಿ ಶೇ. 50:50ರ ಅನುಪಾತದಡಿ ನಿವೇಶನಗಳನ್ನು ಮಂಜೂರು ಮಾಡಿ ಭಾರೀ ಹಗರಣದ ಕೇಂದ್ರವಾಗಿರುವ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಈಗ ಇಡಿ ಹಿಡಿತದಲ್ಲಿದೆ. ಇಂದು ಜಾರಿ ನಿರ್ದೇಶನಾಲಯ (ಇಡಿ)ದ ಅಧಿಕಾರಿಗಳು ಮುಡಾ ಕಚೇರಿ ಮೇಲೆ ದಾಳಿ ನಡೆಸಿದ್ದಾರೆ.

ಇಂದು ಬೆಳಗ್ಗೆ 10.45 ಗಂಟೆಗೆ ಮೈಸೂರಿನ ಜೆಎಲ್‌ಬಿ ರಸ್ತೆಯ ಮುಡಾ ಕಚೇರಿ ಪ್ರವೇಶ ದ್ವಾರದಲ್ಲಿ ದಿಢೀರ್ ಪ್ರತ್ಯಕ್ಷರಾದ 12 ಮಂದಿ ಇಡಿ ಅಧಿಕಾರಿಗಳು. 'ನಾವು ಇಡಿಯಿಂದ ಬಂದಿದ್ದೇವೆ' ಎಂದು ಸೆಕ್ಯೂರಿಟಿ ಸಿಬ್ಬಂದಿಗೆ ತಿಳಿಸುತ್ತಿದ್ದಂತೆ, ಮಾಹಿತಿ ಪಡೆದ ಮುಡಾ ಆಯುಕ್ತ ಎ.ಎನ್. ರಘುನಂದನ್ ಹಾಗೂ ಕಾರ್ಯದರ್ಶಿ ಪ್ರಸನ್ನಕುಮಾರ್ ದೌಡಾಯಿಸಿ ಬಂದು, ಆಯುಕ್ತರ ಛೇಂಬರ್‌ಗೆ ಕರೆದೊಯ್ದರು. 10 ನಿಮಿಷಗಳ ಕಾಲ ಅಲ್ಲಿ ಸಮಾಲೋಚನೆ ನಡೆಸಿದ ಇಡಿ ಅಧಿಕಾರಿಗಳು, ನಂತರ ಮುಡಾ ಕಚೇರಿ ಸಭಾಂಗಣದಲ್ಲಿ ಅಧಿಕಾರಿಗಳು, ಸಿಬ್ಬಂದಿಗಳಿಂದ ಶೇ. 50:50ರ ಅನುಪಾತದಡಿ ನಿವೇಶನ ಹಂಚಿಕೆ ಹಗರಣ ಸಂಬಂಧ ನಿರಂತರವಾಗಿ ರಾತ್ರಿ ಬಹು ಹೊತ್ತಿನವರೆಗೂ ದಾಖಲೆಗಳ ಪರಿಶೀಲನೆ ನಡೆಸಿದರು. ಮಧ್ಯಾಹ್ನ ಊಟ ತರಿಸಿಕೊಂಡ ಇಡಿ ಅಧಿಕಾರಿಗಳು, ಅಭಿಲೇಖಾಲಯ (ದಾಖಲೆಗಳ ಕೊಠಡಿ)ದಿಂದ ತಮಗೆ ಅಗತ್ಯವಿರುವ ಕಡತಗಳನ್ನು ತರಿಸಿಕೊಂಡು ಪರಿಶೀಲಿಸಿದರು. ಈ ವೇಳೆ ಮುಡಾ ಆಯುಕ್ತ ಎ.ಎನ್. ರಘುನಂದನ್, ಕಾರ್ಯದರ್ಶಿ ಪ್ರಸನ್ನ ಕುಮಾರ್, ವಿಶೇಷ ಭೂಸ್ವಾಧೀನಾಧಿಕಾರಿ, ಸೂಪರಿಂಟೆಂಡಿಂಗ್ ಇಂಜಿನಿಯರ್, ನಗರ ಯೋಜಕ ಸದಸ್ಯ, ಮುಖ್ಯ ಲೆಕ್ಕಾಧಿಕಾರಿ, ಎಕ್ಸಿಕ್ಯೂಟಿವ್ ಇಂಜಿನಿಯರ್, ವಿಶೇಷ ತಹಸೀಲ್ದಾರರು, ಎಲ್ಲಾ ವಲಯಾಧಿಕಾರಿಗಳು, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ■6ನೇ ಪುಟಕ್ಕೆ







ಶಸ್ತ್ರಸಜ್ಜಿತ ಸಿಆರ್‌ಪಿಎಫ್ ಸಿಬ್ಬಂದಿ ಭದ್ರತೆ ನಡುವೆ ಮುಡಾ ಕಚೇರಿಯಲ್ಲಿ ಇಡಿ ಅಧಿಕಾರಿಗಳು ದಾಖಲೆ ಪರಿಶೀಲನೆ ನಡೆಸುತ್ತಿದ್ದಾರೆ. ಬಲಚಿತ್ರದಲ್ಲಿ ದಾಖಲೆಗಳ ಕಡತಗಳನ್ನು ಪರಿಶೀಲನೆಗೆ ಅಣಿಗೊಳಿಸಿರುವುದು.

ಇಡಿ ಅಧಿಕಾರಿಗಳಿಗೆ ಮಾಹಿತಿ ನೀಡಿ ಸಹಕರಿಸುತ್ತೇವೆ

ಮುಡಾ ಕಾರ್ಯದರ್ಶಿ ಪ್ರಸನ್ನಕುಮಾರ್ ಪ್ರತಿಕ್ರಿಯೆ

ಮೈಸೂರು, ಅ. 18(ಆರ್‌ಕೆ)– ಇಡಿ ಅಧಿಕಾರಿಗಳು ಕೇಳುವ ದಾಖಲೆ, ಮಾಹಿತಿ ನೀಡಿ ತನಿಖೆಗೆ ಸಹಕರಿಸುತ್ತೇವೆ ಎಂದು ಮುಡಾ ಕಾರ್ಯದರ್ಶಿ ಪ್ರಸನ್ನ ಕುಮಾರ್ ತಿಳಿಸಿದ್ದಾರೆ.



ಇಂದು ಬೆಳಗ್ಗೆ ಇಡಿ ಅಧಿಕಾರಿಗಳು ಮುಡಾ ಕಚೇರಿ ಮೇಲೆ ದಿಢೀರ್ ದಾಳಿ ನಡೆಸಿದ ಬಳಿಕ, ಕಚೇರಿ ಪ್ರವೇಶ ದ್ವಾರದಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯೆ ನೀಡಿದ ಅವರು, ಈಗ ತಾನೇ ಇಡಿ ಅಧಿಕಾರಿಗಳು ಬಂದಿದ್ದಾರೆ. ನಿವೇಶನ ಹಂಚಿಕೆ ಸಂಬಂಧ ಅವರು ಕೇಳಿದ ಮಾಹಿತಿ, ದಾಖಲೆಗಳನ್ನು ನೀಡುತ್ತೇವೆ. ಎರಡು ದಿನ ತನಿಖೆ ನಡೆಯಲಿದ್ದು, ನಾವೆಲ್ಲರೂ ಸಹಕರಿಸುತ್ತೇವೆ ಎಂದರು.

ಸದ್ಯಕ್ಕೆ ಯಾವುದೇ ಮಾಹಿತಿ ಇಲ್ಲ, ತನಿಖೆ ಮುಗಿದ ಬಳಿಕ ಮುಡಾ ಹಿರಿಯ ಅಧಿಕಾರಿಗಳು ಮಾಧ್ಯಮ ಪ್ರತಿನಿಧಿಗಳಿಗೆ ಮಾಹಿತಿ ನೀಡಲಿದ್ದಾರೆ. ತನಿಖೆಗೆ ದಯಮಾಡಿ ಸಹಕರಿಸಿ ಎಂದು ಮನವಿ ಮಾಡಿದರು.

ಮೈಸೂರು ತಾಲೂಕು ತಹಶೀಲ್ದಾರ್ ಕಚೇರಿಯಲ್ಲೂ ದಾಖಲೆ ಪರಿಶೀಲನೆ

ಮೈಸೂರು, ಅ. 18(ಆರ್‌ಕೆ)– ದೇಶದಲ್ಲೇ ಸದ್ದು ಮಾಡಿರುವ ಮುಡಾ ಬ್ರಹ್ಮಾಂಡ ಭ್ರಷ್ಟಾಚಾರ ಸಂಬಂಧ ತನಿಖೆ ಆರಂಭಿಸಿರುವ ಜಾರಿ ನಿರ್ದೇಶನಾಲಯದ (ಇಡಿ) ಅಧಿಕಾರಿಗಳು ಇಂದು ಏಕಕಾಲದಲ್ಲಿ ಮೈಸೂರು ನಜರ್‌ಬಾದ್‌ನ ಮಿನಿ ವಿಧಾನಸೌಧದಲ್ಲಿರುವ ಮೈಸೂರು ತಾಲೂಕು ತಹಶೀಲ್ದಾರ್ ಕಚೇರಿಯಲ್ಲೂ ದಾಖಲಾತಿಗಳ ಜಾಲಾಡಿದ್ದಾರೆ.

ಶುಕ್ರವಾರ 11.30 ಗಂಟೆಗೆ ಕೇಂದ್ರ ಭದ್ರತಾ ಪಡೆ ಸಿಬ್ಬಂದಿಯೊಂದಿಗೆ ದಾಳಿ ನಡೆಸಿದ ಇಡಿ ಅಧಿಕಾರಿಗಳು, ನೇರವಾಗಿ ಕಂದಾಯ ಶಾಖೆಗೆ ■6ನೇ ಪುಟಕ್ಕೆ



ಮೈಸೂರು ತಹಶೀಲ್ದಾರ್ ಕಚೇರಿ ಮುಂದೆ ನಜರ್‌ಬಾದ್ ಠಾಣೆ ಪೊಲೀಸರು ಹಾಗೂ ಸಿಐಎಸ್‌ಎಫ್ ಸಿಬ್ಬಂದಿ ಬಂದೋಬಸ್ತ್.


ಮುಡಾದ ಒಂದೂ ಕಡತ ನಾನು ತಂದಿಲ್ಲ...!

ಬೆಂಗಳೂರು, ಅ.18(ಕೆಎಂಶಿ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಕಚೇರಿಯಿಂದ ಬಿಡಿ ನಿವೇಶನಗಳ ಹಂಚಿಕೆಗೆ ಸಂಬಂಧಿಸಿದಂತೆ ಒಂದೂ ಕಡತ ತೆಗೆದುಕೊಂಡು ಬಂದಿಲ್ಲ ಎಂದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಇಂದಿಲ್ಲಿ ಸ್ಪಷ್ಟಪಡಿಸಿದ್ದಾರೆ. ನನ್ನ ಮೇಲೆ ಈ ಆರೋಪ ಮಾಡಿರುವ ಕೇಂದ್ರ ಸಚಿವ ಕುಮಾರಸ್ವಾಮಿ, ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿಯೇ ಕಡತಗಳನ್ನು ತೆಗೆದುಕೊಂಡು ಹೋಗಿರಬಹುದು. ಬೇಕಿದ್ದರೆ ಯಾವುದೇ ದೇವರ ಮುಂದೆ ■6ನೇ ಪುಟಕ್ಕೆ



ಬೈರತಿ ಸುರೇಶ್

ಭಕ್ತಿ–ಭಾವದ ನಡುವೆ ವಿಜೃಂಭಣೆಯಿಂದ ನೆರವೇರಿದ ಚಾಮುಂಡೇಶ್ವರಿ ತೆಪ್ಪೋತ್ಸವ



ಚಾಮುಂಡಿಬೆಟ್ಟದ ದೇವಿಕೆರೆಯಲ್ಲಿ ಶ್ರೀ ಚಾಮುಂಡೇಶ್ವರಿ ದೇವಿಯ ತೆಪ್ಪೋತ್ಸವ ವಿಜೃಂಭಣೆಯಿಂದ ನೆರವೇರಿತು.

ಮೈಸೂರು, ಅ.18(ಎಂಕೆ)– ಮೈಸೂರಿನ ಚಾಮುಂಡಿಬೆಟ್ಟದ ದೇವಿಕೆರೆಯಲ್ಲಿ ನಾಡಿನ ಅಧಿದೇವತೆ ಶ್ರೀ ಚಾಮುಂಡೇಶ್ವರಿ ದೇವಿಯ ತೆಪ್ಪೋತ್ಸವ ಶುಕ್ರವಾರ ಸಂಜೆ ನೂರಾರು ಭಕ್ತರ ಸಮ್ಮುಖದಲ್ಲಿ ಶ್ರದ್ಧಾ–ಭಕ್ತಿಯೊಂದಿಗೆ ವಿಜೃಂಭಣೆಯಿಂದ ನೆರವೇರಿತು.

ತೆಪ್ಪೋತ್ಸವದ ಹಿನ್ನಲೆಯಲ್ಲಿ ಬೆಳಗ್ಗೆಯಿಂದಲೇ ಚಾಮುಂಡೇಶ್ವರಿ ದೇವಿಯ ಸನ್ನಿದಿಯಲ್ಲಿ ಧಾರ್ಮಿಕ ವಿಧಿ–ವಿಧಾನಗಳು ಆರಂಭಗೊಂಡವು. ಅಮ್ಮನವರ ಪಲ್ಲಕ್ಕಿ ಉತ್ಸವವು ಪೂಜಾ ಕೈಂಕರ್ಯದೊಂದಿಗೆ ದೇವಸ್ಥಾನದಿಂದ ಹೊರಟು ರಥದ ಬೀದಿಯ ಮೂಲಕ ಸಾಗಿ ದೇವಿಕೆರೆ ಅಂಗಳಕ್ಕೆ ಮೆರವಣಿಗೆ ಮೂಲಕ ಬಂದು ತಲುಪಿತು. ನಂತರ ಸಂಜೆಯವರೆಗೂ ವಿವಿಧ ಪೂಜಾ ಕೈಂಕರ್ಯದೊಂದಿಗೆ ಅವಭೃತ ತೀರ್ಥಸ್ನಾನ ಮಾಡಿಸಲಾಯಿತು. ಸಂಜೆ 6.45ರ ವೇಳೆಗೆ ವಿದ್ಯುತ್ ದೀಪಾಲಂಕಾರದಿಂದ ಕಂಗೊಳಿಸುತ್ತಿದ್ದ ತೆಪ್ಪದಲ್ಲಿ ತಾಯಿ ಚಾಮುಂಡೇಶ್ವರಿ ಉತ್ಸವ ಮೂರ್ತಿಯನ್ನಿರಿಸಿ, 7.30ರವರೆಗೂ ದೇವಿಕೆರೆಯಲ್ಲಿ 3 ಸುತ್ತು ಪ್ರದಕ್ಷಿಣೆ ಹಾಕಿಸಲಾಯಿತು. ಈ ವೇಳೆ ಆಗಮಿಸಿದ್ದ ಸಾವಿರಾರು ಭಕ್ತರು ಚಾಮುಂಡೇಶ್ವರಿ ದರ್ಶನ ಪಡೆದರಲ್ಲದೆ ಪಟಾಕಿ ಸಿಡಿಸಿ ಸಂಭ್ರಮಿಸಿದರು. ಇದರ ನಡುವೆ ಪೊಲೀಸ್ ಬ್ಯಾಂಡ್, ■6ನೇ ಪುಟಕ್ಕೆ

ಮೈಸೂರು ಮಿತ್ರ ಶನಿವಾರ 19 ಅಕ್ಟೋಬರ್ 2024

ಏಷ್ಯಾ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ಮೈಸೂರಿನ ಅವ್ನಿಸಿಂಗ್



ಮೈಸೂರು, ಅ. 18–ಮೈಸೂರಿನ ಎಸ್‌ಪಿಎಸ್‌ಐನ ವಿದ್ಯಾರ್ಥಿನಿ, 4 ವರ್ಷ 10 ತಿಂಗಳಿನ ಅವ್ನಿಸಿಂಗ್ ಭಾರತದ ಏಷ್ಯಾ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ಪ್ರಸಿದ್ಧ ಗ್ರಾಂಡ್ ಮಾಸ್ಟರ್ ಶ್ರೇಣಿಯನ್ನು ಗಳಿಸಿದ್ದಾರೆ. 15 ನಿಮಿಷ 25 ಸೆಕೆಂಡ್ ಮತ್ತು 44 ಮಿಲಿ ಸೆಕೆಂಡ್‌ಗಳಲ್ಲಿ 10 ಬಾರಿ ಎರಡು ಸ್ಲೈಡಿಂಗ್ ಫಜಲ್‌ಗಳನ್ನು ಪರಿಹರಿಸುವ ಗಮನಾರ್ಹ ಸಾಧನೆ ಮಾಡಿದ್ದಾರೆ. ಈಕೆ ಸೌರಬ್ ಸಿಂಗ್, ಜಿ.ಎಸ್. ಸ್ಫೂರ್ತಿ ದಂಪತಿ ಪುತ್ರಿ.

ಇಷಾನ್ ಇಂಡಿಯನ್ ಬುಕ್ ಆಫ್ ರೆಕಾರ್ಡ್ಸ್ ದಾಖಲು

ಮೈಸೂರು, ಅ. 18– ಮೈಸೂರಿನ ಮೂರು ವರ್ಷದ ಇಷಾನ್ ಇಂಡಿಯನ್



ಬುಕ್ ಆಫ್ ರೆಕಾರ್ಡ್ಸ್ ದಾಖಲಿಸಿದ್ದಾರೆ. ಈತ ಕೇರಳದ 14 ಜಿಲ್ಲೆಗಳ ಹೆಸರು, ವಿಶ್ವದ 7 ಖಂಡಗಳು, 39 ಸಾಮಾನ್ಯ ಪ್ರಶ್ನೆಗಳಿಗೆ ಉತ್ತರ, 50 ಗೃಹೋಪಯೋಗಿ ವಸ್ತುಗಳು, 7 ಮಂದಿ ಗಣ್ಯ ವ್ಯಕ್ತಿಗಳನ್ನು ಗುರುತಿಸುವುದು, 10 ಮಂದಿ ಮಹಾನ್ ವ್ಯಕ್ತಿಗಳು, 13 ಬಣ್ಣಗಳನ್ನು ಗುರುತಿಸುವುದು, 13 ಪ್ರಾಣಿಗಳು, 14 ತರಕಾರಿಗಳು, 17 ಹಣ್ಣುಗಳು, 10 ಲೇಖನ ಸಾಮಗ್ರಿಗಳು, 6 ಜಲಚರ ಪ್ರಾಣಿಗಳು, 36 ಆಹಾರ ಪದಾರ್ಥಗಳು, ಎ ಯಿಂದ ಜಡ್‌ವರೆಗೆ ಇಂಗ್ಲಿಷ್ ಅಕ್ಷರಗಳು, 1 ರಿಂದ 10 ರವರೆಗೆ ನಂಬರ್‌ಗಳು, 3 ಇಂಗ್ಲಿಷ್ ಪದ್ಯಗಳು, ದೇಹದ 12 ಭಾಗಗಳು, 20 ವಾಹನಗಳು, 6 ಪ್ರಾಣಿಗಳ ಧ್ವನಿ ಅನುಕರಿಸುವುದು ಮತ್ತು ವಾರದ ದಿನಗಳನ್ನು ಪಠಿಸುವ ಮೂಲಕ ಇಂಡಿಯನ್ ಬುಕ್ ಆಫ್ ರೆಕಾರ್ಡ್ಸ್‌ಗೆ ದಾಖಲಿಸಿದ್ದಾರೆ. ಈತ ಎಂ. ಅಮಲ್‌ಜಿತ್ (ಭಾರತೀಯ ಸೇನೆಯಲ್ಲಿ ಕೆಲಸ) ಮತ್ತು ತೇಜಸ್ವಿನಿ ಅಮಲ್ (ಶಿಕ್ಷಕಿ) ದಂಪತಿ ಪುತ್ರ

ಸರ್ಕಾರಿ ಶಾಲೆಗಳ ಕಲಿಕಾ ಮಟ್ಟ ಸುಧಾರಣೆಗೆ ಶಿಕ್ಷ ಕೋ–ಪೈಲಟ್ ಯೋಜನೆ ಜಾರಿ

ಆಯ್ದ 750ಕ್ಕೂ ಅಧಿಕ ಶಾಲೆಯ ಶಿಕ್ಷಕರಿಗೆ ಕೃತಕ ಬುದ್ಧಿಮತ್ತೆ ಚಾಲಿತ ಡಿಜಿಟಲ್ ನೆರವು

ಬೆಂಗಳೂರು, ಅ.18(ಕೆಎಂಶಿ)– ಸರ್ಕಾರಿ ಶಾಲೆಗಳಲ್ಲಿ ಕಲಿಕಾ ಫಲಿತಾಂಶ ಸುಧಾರಿಸುವ ಗುರಿಯೊಂದಿಗೆ ಶಿಕ್ಷ ಕೋ–ಪೈಲಟ್ ಯೋಜನೆ ಜಾರಿಗೆ ತರಲಾಗಿದೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ತಿಳಿಸಿದ್ದಾರೆ.

ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಸಚಿವರು, ಸ್ಥಳೀಯ ಪಠ್ಯಕ್ರಮ, ಭಾಷೆ ಮತ್ತು ಸಂದರ್ಭ ಆಧರಿಸಿ ಸಮಗ್ರ ಬೋಧನಾ ಸಂಪನ್ಮೂಲ ಮತ್ತು ಕಲಿಕಾ ಅನುಭವ ರಚಿಸಲು ಶಿಕ್ಷ ಕೋ–ಪೈಲಟ್ ಯೋಜನೆ ಶಿಕ್ಷಕರನ್ನು ಸಶಕ್ತಗೊಳಿಸುತ್ತದೆ ಎಂದರು. ನಗರ ಮತ್ತು ಗ್ರಾಮೀಣ ಭಾಗಗಳ ಎಲ್ಲಾ ಶೈಕ್ಷಣಿಕ ಜಿಲ್ಲೆಗಳಲ್ಲಿ 750ಕ್ಕೂ ಹೆಚ್ಚು ಸರ್ಕಾರಿ ಶಾಲೆಗಳಿಂದ ಆಯ್ದ 1,000 ಶಿಕ್ಷಕರಿಗೆ ಶಿಕ್ಷ ಕೋ–ಪೈಲಟ್‌ನ ಕೃತಕ ಬುದ್ಧಿಮತ್ತೆ ಚಾಲಿತ ಡಿಜಿಟಲ್ ಸಹಾಯ ನೀಡಲಾಗುವುದು.

ಶಿಕ್ಷ ಕೋ–ಪೈಲಟ್ ಉತ್ತಮ ಗುಣ



ಮಟ್ಟದ ವೈಯಕ್ತೀಕರಿಸಿದ ವಿಷಯ ರಚಿಸಲು ಶಿಕ್ಷಕರನ್ನು ಸಬಲೀಕರಣಗೊಳಿಸುತ್ತದೆ. ಶಿಕ್ಷಕರ ಹಿಮ್ಮಾಹಿತಿ ಆಧಾರದ ಮೇಲೆ ಚಟುವಟಿಕೆಗಳು, ಮೌಲ್ಯಮಾಪನಗಳು, ನೈಜ–ಪ್ರಪಂಚದ ಉದಾಹರಣೆಗಳು, ಅನ್ವಯಗಳು, ಕಿರು ವಿಡಿಯೋಗಳು ಮತ್ತು ಸಮಗ್ರ ಪಾಠ ಯೋಜನೆಗಳಂತಹ ಬೋಧನಾ ಸಂಪನ್ಮೂಲಗಳನ್ನು ರಚಿಸಲು ಶಿಕ್ಷ ಕೋ–ಪೈಲಟ್ ಸಹಾಯ ಮಾಡುತ್ತದೆ. ಇದು ಸ್ವಯಂ ಕಲಿಕೆ ಮತ್ತು ಸಂವಾದಾತ್ಮಕ ವಿಷಯ ರಚನೆಗಾಗಿ ಶಿಕ್ಷಕರಿಗೆ ಚಾಟ್–ಬಾಟ್ ಸಹ ಒದಗಿಸುತ್ತದೆ ಎಂದರು.

ಗಾಯನ ಕಾರ್ಯಕ್ರಮ



ಮೈಸೂರು ಶ್ರೀ ಸುತ್ತೂರು ಮಠದಲ್ಲಿ ನಡೆದ 272ನೇ ಬೆಳದಿಂಗಳ ಸಂಗೀತ ಕಾರ್ಯಕ್ರಮದಲ್ಲಿ ಪಂ. ಸಿದ್ರಾಮಪ್ಪ ಪಾಟೀಲ್ ಅವರು ಗಾಯನ ಪ್ರಸ್ತುತಪಡಿಸಿದರು. ಪಕ್ಕವಾದ್ಯದಲ್ಲಿ ಪಂ. ರಮೇಶ ಪಿ.ಧನ್ನೂರ್, ಪಂ. ವೀರಭದ್ರಯ್ಯ ಎಸ್. ಹಿರೇಮಠ ಸಹಕಾರ ನೀಡಿದರು.

ಬಲಿಜ ವಧು–ವರರ ಸಮಾವೇಶ

ಮೈಸೂರು, ಅ.18(ಜಿಎ)–ಮೈಸೂರಿನ ಬಲಿಜ ಸಂಘದ ವತಿಯಿಂದ ಡಿ.12 ರಂದು ಬೆಳಗ್ಗೆ 10ಕ್ಕೆ ಸಂಘದ ಆವರಣದಲ್ಲಿ ಬಲಿಜ ವಧು–ವರರ ಸಮಾವೇಶ ಆಯೋಜಿಸಲಾಗಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಘದ ಕಾರ್ಯದರ್ಶಿ ಆರ್. ಮಂಜುನಾಥ್ ಈ ವಿಷಯ ತಿಳಿಸಿ, ಆಸಕ್ತ ವಧು–ವರರ ಪೋಷಕರು ಸದುಯೋಗಪಡಿಸಿಕೊಳ್ಳಲು ನ.24ರೊಳಗೆ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ ಉಪಾಧ್ಯಕ್ಷ ಕೆ. ಲಿಂಗರಾಜು (9008912444) ಅಥವಾ ನೇರವಾಗಿ ಸಂಘದ ಕಚೇರಿಯನ್ನು ಸಂಪರ್ಕಿಸಿ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಉಪಾಧ್ಯಕ್ಷ ಕೆ. ಲಿಂಗರಾಜು, ಎಂ.ಎಸ್. ದಾಮೋದರ, ಎಂ.ಎಸ್. ಯೋಗೀಶ್ ಉಪಸ್ಥಿತರಿದ್ದರು.

ನಿಧನ

ಹೆಚ್.ಸಿ.ವೀರಭದ್ರಸ್ವಾಮಿ




ಮೈಸೂರು, ಅ.18–ಕಳೆದ ಆರೇಳು ದಶಕಗಳಿಂದ ಜೆಎಸ್‌ಎಸ್ ಮಹಾವಿದ್ಯಾಪೀಠದ ನಿಷ್ಠ ಸೇವಾಕರ್ತರಾಗಿದ್ದ ಹೆಚ್.ಸಿ. ವೀರಭದ್ರಸ್ವಾಮಿ(89) ಇಂದು ಶುಕ್ರವಾರ ಮುಂಜಾನೆ ಮೈಸೂರಿನ ರಾಮಕೃಷ್ಣನಗರದ ತಮ್ಮ ನಿವಾಸದಲ್ಲಿ ನಿಧನರಾದರು. ಮೃತರು ಪತ್ನಿ ಲಲಿತಮ್ಮ, ಪುತ್ರ, ಇಬ್ಬರು ಪುತ್ರಿಯರು, ಅಪಾರ ಬಂಧು–ಮಿತ್ರರ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಇಂದು ಲಲಿತಾದ್ರಿಪುರಂನ ವೀರಶೈವ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶ್ರದ್ಧಾಂಜಲಿ: ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಶುಕ್ರವಾರ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳ ಸಾನ್ನಿಧ್ಯದಲ್ಲಿ 2025ರ ಸುತ್ತೂರು ಜಾತ್ರಾ ಮಹೋತ್ಸವ ಪೂರ್ವಸಿದ್ಧತೆಗಾಗಿ ಸೇರಿದ್ದ ಸಂಚಾಲಕರ ಸಭೆಯಲ್ಲಿ ವೀರಭದ್ರಸ್ವಾಮಿ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಪ್ರೊ.ಹೆಚ್.ಬಿ.ದೇವಣ್ಣನವರು ವ್ಯಕ್ತಿತ್ವದ ಪರಿಚಯ ಮಾಡಿಕೊಟ್ಟರು. ಸುತ್ತೂರಿನ ಜಾತ್ರಾ ಮಹೋತ್ಸವದ ಎಲ್ಲಾ ಕಾರ್ಯಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುತ್ತಿದ್ದರು.

ದಾಸೋಹ ವಿಭಾಗದ ವ್ಯವಸ್ಥೆಗಳನ್ನು ಜತನದಿಂದ ನಿರ್ವಹಿಸುತ್ತಿದ್ದರು. ಅತ್ಯುತ್ತಮ ಕಲಾವಿದರಾಗಿದ್ದರು. ಶ್ರೀ ಶಿವರಾತ್ರೀಶ್ವರ ಕಲಾಮಂಟಪದ ಮೂಲಕ ಶ್ರೀ ಶಿವರಾತ್ರೀಶ್ವರ ವಿಜಯ ಮೊದ ಲಾದ ಹಲವಾರು ನಾಟಕಗಳಲ್ಲಿ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿ ಜನ ಮೆಚ್ಚುಗೆ ಗಳಿಸಿದ್ದರು ಎಂದು ಗುಣಗಾನ ಮಾಡಿದರು. ಸಭೆಯಲ್ಲಿ ಎರಡು ನಿಮಿಷ ಮೌನಾಚರಣೆ ಮಾಡಿ, ಅವರ ಆತ್ಮಕ್ಕೆ ಶಾಂತಿಯನ್ನು, ಕುಟುಂಬದ ಸದಸ್ಯರಿಗೆ ದುಃಖವನ್ನು ಭರಿಸುವ ಶಕ್ತಿಯನ್ನು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳು ಅನುಗ್ರಹಿಸಲೆಂದು ಪ್ರಾರ್ಥಿಸಲಾಯಿತು.

ವೈ.ಕೆ.ಶೇಷಾದ್ರಿ




ಮೈಸೂರು, ಅ.18– ನಗರದ ರಾಮಕೃಷ್ಣನಗರದ ಹೆಚ್ ಬ್ಲಾಕ್ ನಿವಾಸಿ, ನೀರಾವರಿ ಇಲಾಖೆ ನಿವೃತ್ತ ಎಕ್ಸಿಕ್ಯೂಟಿವ್ ಇಂಜಿನಿಯರ್ ವೈ.ಕೆ.ಶೇಷಾದ್ರಿ(83) ಅವರು ಶುಕ್ರವಾರ ತೀವ್ರ ಹೃದಯಾಘಾತದಿಂದ ನಿಧನರಾದರು. ಇವರು ಮೂಲತಃ ಚಾಮರಾಜನಗರ ಜಿಲ್ಲೆ ಯಳಂದೂರಿನವರು. ಮೃತರು ಪತ್ನಿ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಚಾಮುಂಡಿಬೆಟ್ಟ ತಪ್ಪಲಿನ ಹರಿಶ್ಚಂದ್ರ ಘಾಟ್‌ನಲ್ಲಿ ಶನಿವಾರ ಬೆಳಗ್ಗೆ 9.30ಕ್ಕೆ ಅಂತ್ಯಕ್ರಿಯೆ ನಡೆಯಲಿದೆ ಎಂದು ಅವರ ಕುಟುಂಬದ ಮೂಲಗಳು ತಿಳಿಸಿವೆ.

ಟಿ.ಎನ್.ಚಂದ್ರಶೇಖರ್



ಮೈಸೂರು, ಅ.18– ಮೈಸೂರಿನ ವಿವೇಕಾನಂದನಗರ ನಿವಾಸಿ ಟಿ.ಎನ್.ಚಂದ್ರಶೇಖರ್(74) ಅವರು ಅನಾರೋಗ್ಯದಿಂದಾಗಿ ನಗರದ ಖಾಸಗಿ ಆಸ್ಪತ್ರೆಯಲ್ಲಿ ಶುಕ್ರವಾರ ಮಧ್ಯಾಹ್ನ ನಿಧನರಾದರು. ಇವರು ಪತ್ನಿ, ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ವಿದ್ಯಾರಣ್ಯಪುರಂನಲ್ಲಿರುವ ವೀರಶೈವ ರುದ್ರಭೂಮಿ ಯಲ್ಲಿ ಶನಿವಾರ ಬೆಳಗ್ಗೆ 11 ಗಂಟೆಗೆ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಡಿ.ಸಿ.ನಾಗೇಂದ್ರ



ಮೈಸೂರು, ಅ.18– ಮೈಸೂರಿನ ಅಗ್ರಹಾರ ರಾಮಾನುಜ ರಸ್ತೆ ನಿವಾಸಿ ಡಿ.ಸಿ.ನಾಗೇಂದ್ರ(80) ಶುಕ್ರವಾರ ರಾತ್ರಿ ನಿಧನರಾದರು.

ಮೃತರು ಪತ್ನಿ ಹೆಚ್.ಎಸ್.ಪದ್ಮ, ಪುತ್ರ ಪ್ರಶಾಂತ್ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ(ಅ.19) ಮಧ್ಯಾಹ್ನ 2 ಗಂಟೆಗೆ ಅವರ ಸ್ವಗ್ರಾಮವಾದ ಚಾಮರಾಜನಗರ ಜಿಲ್ಲೆಯ ದೇಶವಳ್ಳಿ ಗ್ರಾಮದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನಮ್ಮೆಲ್ಲರ ಆರೋಗ್ಯ ಕಾಪಾಡುವ ಪೌರಕಾರ್ಮಿಕರ ಆರೋಗ್ಯವೂ ಮುಖ್ಯವಲ್ಲವೇ?

ಶಾಸಕ ಜಿ.ಟಿ.ದೇವೇಗೌಡರ ಕಳಕಳಿ



ಪೌರ ಕಾರ್ಮಿಕರ ಆರೋಗ್ಯ ತಪಾಸಣಾ ಶಿಬಿರಕ್ಕೆ ಶಾಸಕ ಜಿ.ಟಿ.ದೇವೇಗೌಡರು ಚಾಲನೆ ನೀಡಿದರು.

ಮೈಸೂರು, ಅ.18–ನಗರವನ್ನು ಸ್ವಚ್ಛಗೊಳಿಸುವ ಮೂಲಕ ಜನರ ಆರೋಗ್ಯ ಕಾಪಾಡುವ ಪೌರಕಾರ್ಮಿಕರ ಆರೋಗ್ಯವೂ ಮುಖ್ಯವಲ್ಲವೇ? ಈ ವಿಷಯದಲ್ಲಿ ಅವರು ನಿರ್ಲಕ್ಷ್ಯ ತೋರದೆ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕು ಎಂದು ಶಾಸಕ ಜಿ.ಟಿ. ದೇವೇಗೌಡ ಹೇಳಿದರು.

ಮೈಸೂರಿನ ಹೂಟಗಳ್ಳಿ ನಗರಸಭೆ ಆವರಣದಲ್ಲಿ ಸಮೃದ್ಧಿ ಟ್ರಸ್ಟ್, ಅನ್ನಪೂರ್ಣ ಕಣ್ಣಿನ ಆಸ್ಪತ್ರೆ, ಎನ್‌ಪಿ ಆಸ್ಪತ್ರೆ ಹಾಗೂ ಬಯೋಸ್ನೇಹಿ ಸಹಯೋಗದೊಂದಿಗೆ ಪೌರ ಕಾರ್ಮಿಕರಿಗೆ ಆಯೋಜಿಸಿದ್ದ ಉಚಿತ ಕಣ್ಣಿನ ಹಾಗೂ ಆರೋಗ್ಯ ತಪಾಸಣಾ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು. ಪೌರಕಾರ್ಮಿಕರು ನಗರವನ್ನು ಸ್ವಚ್ಛವಾಗಿಡುತ್ತಿರುವ ಕಾರಣ ಇಂದು ನಮ್ಮೆಲ್ಲರ ಆರೋಗ್ಯ ಉತ್ತಮವಾಗಿದೆ. ಪೌರ ಕಾರ್ಮಿಕರ ಆರೋಗ್ಯವನ್ನು ಕಾಪಾಡುವ ಸಲುವಾಗಿ ಆರೋಗ್ಯ ತಪಾಸಣೆ ಮಾಡಿಸಲಾಗುತ್ತಿದೆ. ಕೆಲಸದ ಒತ್ತಡದಲ್ಲಿ ಮಾಡುವ ಕೆಲವೊಂದು ನಿರ್ಲಕ್ಷ್ಯತನ ದಿಂದ ನಮ್ಮ ಆರೋಗ್ಯ ಹಾಳಾಗುತ್ತಿದೆ. ಪೌರಕಾರ್ಮಿಕರು ಆರೋಗ್ಯ ತಪಾಸಣೆ ಶಿಬಿರಗಳಿಗೆ ಸೀಮಿತವಾಗದೇ ನಿತ್ಯ ಆರೋಗ್ಯದ ಕಡೆಗೆ ಗಮನ ಹರಿಸಬೇಕು ಎಂದು ಹೇಳಿದರು. ಪೌರಕಾರ್ಮಿಕರು ಆರೋಗ್ಯವಾಗಿದ್ದರೆ ಇಡೀ ನಗರ ಆರೋಗ್ಯವಾಗಿರುತ್ತದೆ. ಮಾತ್ರವಲ್ಲ ನಗರದ ಸ್ವಚ್ಛತೆಯನ್ನು ಕಾಪಾಡಿ ಎಲ್ಲರ ಆರೋಗ್ಯವೂ ಸಾಧ್ಯವಾಗುತ್ತದೆ. ಆದ್ದರಿಂದ ಅವರು ಇಂತಹ ಆರೋಗ್ಯ ಶಿಬಿರಗಳನ್ನು ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ನಗರಸಭೆ ಆಯುಕ್ತ ಚಂದ್ರಶೇಖರ್, ಸಹಾಯಕ ಕಾರ್ಯಪಾಲಕ ಅಭಿಯಂತರ ಗಿರಿಜಾ, ಸಮೃದ್ಧಿ ವಾರ್ತೆ ಪತ್ರಿಕೆಯ ಸಂಪಾದಕಿ ಸಹನಗೌಡ, ಒಂದು ಹೆಜ್ಜೆ ರಕ್ತದಾನಿಗಳ ಬಳಗದ ಅಧ್ಯಕ್ಷ ಮಂಜು, ಅನ್ನಪೂರ್ಣ ಕಣ್ಣಿನ ಆಸ್ಪತ್ರೆ ಎಂ.ಡಿ.ಅಶ್ವತ್ ಕುಮಾರ್, ಎನ್‌ಪಿ ಆಸ್ಪತ್ರೆ ವೀರಪ್ಪ, ಹೆಲ್ತ್ ಇನ್ಸ್‌ಪೆಕ್ಟರ್‌ಗಳಾದ ಶಂಕರ್ ಲಿಂಗೇಗೌಡರು, ಶಿವಪ್ರಸಾದ್, ನೇತ್ರಾವತಿ, ಪುಷ್ಪಲತಾ ಮತ್ತು ಬಯೋಸ್ನೇಹಿ ಮನು ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಜನತೆಗೆ ಪೌರ ಕಾರ್ಮಿಕರ ಶ್ರಮದ ಅರಿವಿರಲಿ

● ಶಾಸಕ ಹರೀಶ್‌ಗೌಡರ ಕಿವಿಮಾತು ● ಪೌರಕಾರ್ಮಿಕರಿಗೆ ಸಮವಸ್ತ್ರ, ಸಿಹಿ ವಿತರಣೆ



ಪೌರ ಕಾರ್ಮಿಕರಿಗೆ ಶಾಸಕ ಕೆ. ಹರೀಶ್‌ಗೌಡರು ಸಮವಸ್ತ್ರ ಹಾಗೂ ಸಿಹಿ ವಿತರಿಸಿದರು.

ಮೈಸೂರು,ಅ.18–ಪೌರ ಕಾರ್ಮಿಕರು ಸೂರ್ಯೋದಯ ಆಗುವಷ್ಟರಲ್ಲೇ ಕೆಲಸ ಶುರು ಮಾಡುತ್ತಾರೆ. ನಗರ ಸ್ವಚ್ಛ ಮಾಡುತ್ತಾರೆ. ಕಸ ತಂದು ಕಂಡ ಕಂಡಲ್ಲಿ ಹಾಕುವ ಮುನ್ನ ಪೌರ ಕಾರ್ಮಿಕರ ಶ್ರಮವನ್ನು ಅರ್ಥ ಮಾಡಿಕೊಳ್ಳಬೇಕು. ಅವರು ನಗರದ ನಿಜವಾದ ಆರೋಗ್ಯ ರಕ್ಷಕರು ಎಂದು ಶಾಸಕ ಹರೀಶ್‌ಗೌಡ ಹೇಳಿದರು.

ಮೈಸೂರಿನ ದೇವರಾಜ ಮೊಹಲ್ಲಾ ಬಿಡಾರ ಕೃಷ್ಣಪ್ಪ ರಸ್ತೆಯಲ್ಲಿರುವ ಉದ್ಯಾನವನದಲ್ಲಿ ದಸರಾ ಯಶಸ್ವಿಯಾದ ಹಿನ್ನೆಲೆಯಲ್ಲಿ ವಾರ್ಡ್ ನಂಬರ್ 23ರ ಸ್ವಚ್ಛತಾ ಸೇನಾನಿಗಳಾದ ಪೌರಕಾರ್ಮಿಕರು, ಒಳಚರಂಡಿ ವಿಭಾಗದ ಕಾರ್ಮಿಕರು, ನೀರು ಸರಬರಾಜು ಸಿಬ್ಬಂದಿಗಳಿಗೆ ಸಮವಸ್ತ್ರ ಹಾಗೂ ಸಿಹಿ ವಿತರಿಸಿ ಮಾತನಾಡಿದ ಅವರು, ಪೌರಕಾರ್ಮಿಕರು ಪ್ರತಿ ವರ್ಷದಂತೆ ಈ ಬಾರಿ ದಸರಾ ಸಂದರ್ಭದಲ್ಲಿ ನಗರವನ್ನು ಸ್ವಚ್ಛತೆಗೊಳಿಸುವ ಮೂಲಕ ಮೈಸೂರಿನ ಸೌಂದರ್ಯವೃದ್ಧಿಗೆ ಶ್ರಮಿಸಿದರು.

ಬೆಳಗ್ಗೆ ಸ್ವಚ್ಛ ಮಾಡಿದ್ದರೂ, ಸಂಜೆ ಅಷ್ಟರಲ್ಲಿ ಮತ್ತೆ ಕಸ ತುಂಬಿರುತ್ತದೆ. ಸ್ವಚ್ಛತೆಯ ಬಗ್ಗೆ ನಾಗರಿಕರಲ್ಲಿ ಇನ್ನಷ್ಟು ಅರಿವು ಮೂಡಬೇಕು. ನಗರ ಸ್ವಚ್ಛವಾಗುವುದರ ಜೊತೆಗೆ ನಮ್ಮ ಮನಸ್ಥಿತಿಯಲ್ಲೂ ಬದಲಾವಣೆ ತಂದುಕೊಳ್ಳಬೇಕು. ನಗರದ ಸ್ವಚ್ಛತೆ ಕಾಪಾಡುವಲ್ಲಿ ನಮ್ಮ ಪಾತ್ರವೇನು ಎಂದು ಪರಾಮರ್ಶೆ ಮಾಡಿಕೊಳ್ಳಬೇಕು ಎಂದರು. ಕನ್ನಡ ಹಿತ ರಕ್ಷಣಾ ವೇದಿಕೆ ಅಧ್ಯಕ್ಷ ವಿನಯ್, ಕಾಂಗ್ರೆಸ್ ಮುಖಂಡರಾದ ರಾಜೀವ್, ಮಂಜುನಾಥ್, ನವೀನ್, ಆನಂದ್, ಜ್ಞಾನೇಶ್ ರವಿಚಂದ್ರ, ಗುರುರಾಜ್, ನಿತಿನ್, ಮಂಜುಳಾ, ಶಾಂತ ಮಂಗಳ, ಲೀಲಾ, ಪವನ್, ನಂಜುಂಡಿ, ಹರೀಶ್ ಗೌಡ, ಈರೇಗೌಡ, ಪ್ರಜ್ವಲ್, ಹರ್ಷ, ಎಸ್.ಎನ್.ರಾಜೇಶ್ ಉಪಸ್ಥಿತರಿದ್ದರು.

ಅಪ್ಪ, ಮಗಳಿಗೆ ಈಜು ಪ್ರಶಸ್ತಿ



ಮೈಸೂರು, ಅ.18–ಇತ್ತೀಚೆಗೆ ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ನಡೆದ 2024–25ನೇ ಸಾಲಿನ ಮೈಸೂರು ಜಿಲ್ಲಾ ಮಟ್ಟದ ದಸರಾ ಸಿಎಂ ಕಪ್ ಕ್ರೀಡಾಕೂಟದಲ್ಲಿ ಈಜು ತರಬೇತುದಾರ ವಿ. ಜಗದೀಶ್ ಭಾಗವಹಿಸಿ 2 ಕಂಚಿನ ಪದಕಗಳನ್ನು ಪಡೆದಿದ್ದಾರೆ. ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ) ವತಿಯಿಂದ ಮೈಸೂರಿನ ಜೆ.ಪಿ. ನಗರದ ಈಜುಕೊಳದಲ್ಲಿ ನಡೆದ ಪದವಿಪೂರ್ವ ಕಾಲೇಜುಗಳ ಕ್ರೀಡಾಕೂಟದಲ್ಲಿ ಮರಿಮಲ್ಲಪ್ಪ ದ್ವಿತೀಯ ಪಿಯುಸಿ ವಿದ್ಯಾರ್ಥಿನಿ ಜೆ. ಭೂಮಿಕ 500 ಮೀಟರ್ ಬ್ಯಾಕ್‌ಸ್ಟ್ರೋಕ್‌ನಲ್ಲಿ ಬೆಳ್ಳಿ ಪದಕ ಪಡೆದುಕೊಂಡಿದ್ದಾರೆ.


ನಾಳೆ 'ಮಲೆಯೂರು ಮಂದಾರ' ಕೃತಿ ಲೋಕಾರ್ಪಣೆ

ಮೈಸೂರು, ಅ.18(ಜಿಎ)–ಪ್ರೊ. ಮಲೆಯೂರು ಗುರುಸ್ವಾಮಿ ಪ್ರತಿಷ್ಠಾನ ಹಾಗೂ ಸಂವಹನ ಪ್ರಕಾಶನದ ವತಿಯಿಂದ ಅ.20ರ ಭಾನುವಾರ ಸಂಜೆ ಊಟಿ ರಸ್ತೆಯ ಜೆಎಸ್‌ಎಸ್ ಕಾಲೇಜು ಸುವರ್ಣ ಮಹೋತ್ಸವ ಸಭಾಂಗಣದಲ್ಲಿ 'ಮಲೆಯೂರು ಮಂದಾರ' ಕೃತಿ ಲೋಕಾರ್ಪಣೆ ಹಾಗೂ 'ಪ್ರೊ. ಮಲೆಯೂರು ಗುರುಸ್ವಾಮಿ' ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿಸಲಾಗಿದೆ ಎಂದು ವಿಶ್ರಾಂತ ಪ್ರಾಚಾರ್ಯ ಪ್ರೊ. ಮೊರಬದ ಮಲ್ಲಿಕಾರ್ಜುನ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರು ಸಾನ್ನಿಧ್ಯ ವಹಿಸುವರು, ಡಾ.ಶರತ್‌ಚಂದ್ರ ಸ್ವಾಮೀಜಿ ಸಮ್ಮುಖ ವಹಿಸುವರು, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅಧ್ಯಕ್ಷತೆ ವಹಿಸುವರು, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಸಮಾರಂಭ ಉದ್ಘಾಟಿಸುವರು. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಸಿ.ಸೋಮಶೇಖರ್ ಕೃತಿ ಲೋಕಾರ್ಪಣೆಗೊಳಿಸಲಿದ್ದಾರೆ ಎಂದರು. ಕಾರ್ಯಕ್ರಮದಲ್ಲಿ ಸಾಹಿತಿ ಹಾಗೂ ಚಿಂತಕರಾದ ಪ್ರೊ.ಹೆಚ್.ಎಸ್.ಶಿವಪ್ರಕಾಶ್ ಅವರಿಗೆ ಮ.ಗು.ಪ್ರಶಸ್ತಿ ಪ್ರದಾನ ಮಾಡಲಾಗುವುದು. ನಂತರ ಮ.ಗು. ಬದುಕು ಮತ್ತು ಸಾಹಿತ್ಯ–ಒಂದು ಚಿಂತನೆ ವಿಷಯ ಕುರಿತು ಡಾ.ಸಿ. ನಾಗಣ್ಣ ಮಾತನಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್, ಜಯಂತಿ ಮಲೆಯೂರು ಗುರುಸ್ವಾಮಿ ಆಗಮಿಸಲಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸಂವಹನ ಪ್ರಕಾಶನದ ಡಿ.ಎನ್.ಲೋಕಪ್ಪ, ಆರ್. ಪೂರ್ಣಾನಂದ, ಎನ್.ಶಿವಮೂರ್ತಿ, ಹೆಚ್.ಆರ್. ಕಾಂತರಾಜು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

19.10.2024 ಶನಿವಾರ, ಮಳೆ ನಕ್ಷತ್ರ: ಚಿತ್ತ, 10.10.2024ರಿಂದ 23.10.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಯುಜ ಮಾಸ, ಕೃಷ್ಣ ಪಕ್ಷ,
ತಿಥಿ: ಬಿದಿಗೆ, ನಕ್ಷತ್ರ: ಭರಣಿ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ವಿಶ್ವ ವಿಷ್ಣು ಸಹಸ್ರನಾಮ ಸಂಸ್ಥಾನ, ವಿಶ್ವಾಸ್ ಕರ್ನಾಟಕ ಸತ್ಸಂಗ, ವಿಶ್ವಾಸ್ ಗ್ಲೋಬಲ್ ಟೀಂ:** ಮೈಸೂರು ಸತ್ಸಂಗಗಳ ವಾರ್ಷಿಕ ಕಾರ್ಯಕ್ರಮ, ಬೆಳಗ್ಗೆ 8ಕ್ಕೆ ಪ್ರಾರ್ಥನೆ, 8.05ಕ್ಕೆ ಶ್ರೀ ವಿಷ್ಣು ಸಹಸ್ರನಾಮ ಪಾರಾಯಣ, 8.45ಕ್ಕೆ ಡಾ. ಟಿ.ಜೆ. ಶ್ರೀಧರನ್ ಅವರಿಂದ ಅತಿಥಿಗಳ ಸ್ವಾಗತ, ಮುಖ್ಯ ಅತಿಥಿಗಳು : ಶಂಕರ ಮಠ ಧರ್ಮಾಧಿಕಾರಿ ಹೆಚ್.ರಾಮಚಂದ್ರ, ಹಿಂದೂಸ್ಥಾನಿ ಶಾಸ್ತ್ರೀಯ ಗಾಯಕಿ ವಿದುಷಿ ವೀಣಾ ಪಂಡಿತ್, ಅಂತರರಾಷ್ಟ್ರೀಯ ಅಥ್ಲೀಟ್ ಎಂ.ಪಿ. ಚಂದ್ರಶೇಖರ್, ಪ್ರಾಸ್ತಾವಿಕ ಭಾಷಣ : ಡಾ. ರಾಘವೇಂದ್ರ ಶರ್ಮ, ಸ್ಥಳ: ಶೃಂಗೇರಿ ಶಂಕರ ಮಠ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಮೂತ್ರಪಿಂಡ (ಕಿಡ್ನಿ) ಮತ್ತು ಗರ್ಭಾಶಯದ ಫೈಬ್ರಾಯ್ಡ್‌ಗಳ ವೈದ್ಯಕೀಯ ಪ್ರತ್ಯೇಕ ತಪಾಸಣಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9ರಿಂದ ಸಂಜೆ 4.30 ರವರೆಗೆ.

■ **ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನ ವಾಣಿಜ್ಯ, ನಿರ್ವಹಣಾ ಶಾಸ್ತ್ರ ವಿಭಾಗ, ಐಕ್ಯುಎಸಿ :** ಸ್ಟ್ರಾಟೆಜಿಕ್ ಎಂಟರ್‌ಪ್ರಿನರ್‌ಶಿಪ್–ಎ ಕೀ ಫಾರ್ ಸಸ್ಟೈನಬಲ್ ಡೆವಲಪ್‌ಮೆಂಟ್ ಕುರಿತ ರಾಷ್ಟ್ರೀಯ ವಿಚಾರ ಸಂಕಿರಣ, ಉದ್ಘಾಟನೆ : ಮೈಸೂರು ವಿವಿ ಕುಲಸಚಿವ ಪ್ರೊ.ಎನ್. ನಾಗರಾಜ, ಪ್ರಾಸ್ತಾವಿಕ ಭಾಷಣ : ಚಾಣಿಕ್ಯ ವಿವಿಯ ಡೀನ್ ಪ್ರೊ.ದಿನೇಶ್ ಶೆಣೈ, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಗೌರವ ಅಧ್ಯಕ್ಷ ಗುಂಡಪ್ಪಗೌಡ, ಮುಖ್ಯ ಅತಿಥಿಗಳು : ಪಿ.ವಿಶ್ವನಾಥ್, ಶ್ರೀಶೈಲರಾಮಣ್ಣನವರ್, ಟಿ.ನಾಗರಾಜು, ಡಾ.ಎಸ್.ಮರಿಗೌಡ, ಸ್ಥಳ: ಕಾಲೇಜಿನ ಪಿ.ಎಂ. ಚಿಕ್ಕಬೋರಯ್ಯ ಸಭಾಂಗಣ, ಬೆಳಗ್ಗೆ 9.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಯುವರಾಜ ಕಾಲೇಜು :** ಸುವರ್ಣ ಕರ್ನಾಟಕ 50 : ಸಂಭ್ರಮಾಚರಣೆ, ಒಂದು ದಿನದ ರಾಜ್ಯ ಮಟ್ಟದ ವಿಚಾರ ಸಂಕಿರಣ, ಉದ್ಘಾಟನೆ : ಹಿರಿಯ ಪತ್ರಕರ್ತ ಅಂಶಿಪ್ರಸನ್ನ ಕುಮಾರ್, ಮುಖ್ಯ ಅತಿಥಿಗಳು : ಸಿಂಡಿಕೇಟ್ ಸದಸ್ಯ ಡಾ. ಸಿ. ಬಸವರಾಜು ಜೆಟ್ಟಿಹುಂಡಿ, ಅಧ್ಯಕ್ಷತೆ : ಯುವರಾಜ ಕಾಲೇಜು ಪ್ರಾಂಶುಪಾಲ ಪ್ರೊ.ಹೆಚ್. ಸೋಮಶೇಖರಪ್ಪ, ಮುಖ್ಯ ಭಾಷಣ : ಧ್ವನಿ ಫೌಂಡೇಷನ್ ಸಂಸ್ಥಾಪಕರಾದ ಡಾ. ಶ್ವೇತಾ ಮಡಪ್ಪಾಡಿ, ಉಪಸ್ಥಿತರು : ಕಾಲೇಜು ಆಡಳಿತಾಧಿಕಾರಿ ಪ್ರೊ. ಎಂ.ಕೆ. ಮಹೇಶ್, ಪರೀಕ್ಷಾ ನಿಯಂತ್ರಣಾಧಿಕಾರಿ ಪ್ರೊ ಕೆ. ಅಜಯ್‌ಕುಮಾರ್, ಸಂಚಾಲಕ ಪ್ರೊ ಬಿ.ಎಂ. ವೆಂಕಟೇಶ್, ಸ್ಥಳ: ಅಮೃತ ಮಹೋತ್ಸವ ಸಭಾಂಗಣ, ಯುವರಾಜ ಕಾಲೇಜು, ಬೆಳಗ್ಗೆ 10.30 ರಿಂದ.

■ **ಹಿರಿಯ ನಾಗರಿಕರ ಮಂಡಳಿ, ಹಿರಿಯ ನಾಗರಿಕರ ವಿಶ್ವಸ್ಥ ಮಂಡಳಿ:** ವಿಶ್ವ ಹಿರಿಯ ನಾಗರಿಕರ ದಿನಾಚರಣೆ, ಉದ್ಘಾಟನೆ : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಮುಖ್ಯ ಅತಿಥಿಗಳು : ಮೈಸೂರು ವಿವಿ ನಿವೃತ್ತ ವಿಜ್ಞಾನ ಸಂಪಾದಕ ಎಸ್. ರಾಮಪ್ರಸಾದ್, ಹಿರಿಯ ನಾಗರಿಕರ ವಿಶ್ವಸ್ಥ ಮಂಡಳಿ ಛೇರ್ಮನ್ ಎಸ್.ವಿ. ಗೌಡಪ್ಪ, ಅಧ್ಯಕ್ಷತೆ : ಹಿರಿಯ ನಾಗರಿಕರ ಮಂಡಳಿ ಅಧ್ಯಕ್ಷ ಡಾ. ಹೆಚ್.ಎಂ. ನಾಗರಾಜು, ಉಪಸ್ಥಿತರು : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಚಿಗುರು ಆಶ್ರಮ ಸಂಸ್ಥಾಪಕರಾದ ಶ್ರೀಮತಿ ಸುಷ್ಮಾ ರವಿಕುಮಾರ್, ಸ್ಥಳ: ಸರಸ್ವತಿ ಸಮುದಾಯ ಭವನ, ಹಿರಿಯ ನಾಗರಿಕರ ಮಂಡಳಿ, ಜಯಲಕ್ಷ್ಮಿಪುರಂ, ಬೆಳಗ್ಗೆ 11ಕ್ಕೆ.

■ **ಆಶೋದಯ ಸಮಿತಿ :** ಎಸ್‌ಸಿ ಲೈಂಗಿಕ ಕಾರ್ಯಕರ್ತರು ಮತ್ತು ಇತರ ಅಪಾಯದ ಅಂಚಿನಲ್ಲಿರುವ ಮಹಿಳೆಯರ ಸಮ್ಮಿಲನ ಕಾರ್ಯಕ್ರಮ, ಅಧ್ಯಕ್ಷತೆ : ರಾಷ್ಟ್ರೀಯ ಪರಿಶಿಷ್ಟ ಜಾತಿಗಳ ಆಯೋಗದ ಅಧ್ಯಕ್ಷ ಕಿಶೋರ ಬಾಯಿ ಮಕ್ವಾನಾ, ಸ್ಥಳ: ಹೋಟೆಲ್ ಸದರನ್ ಸ್ಟಾರ್, ಬೆಳಗ್ಗೆ 11ಕ್ಕೆ.

■ **ವಿದ್ಯಾ ವಿಕಾಸ್ ಇನ್‌ಸ್ಟಿಟ್ಯೂಟ್ ಆಫ್ ಲೀಗಲ್ ಸ್ಟಡೀಸ್ ಸೆಂಟರ್ :** ಪ್ರೊ. ಸಿಕೆಎನ್ ರಾಜಾ ಸ್ಮರಣಾರ್ಥ ರಾಜ್ಯ ಮಟ್ಟದ ಅಂತರ ಕಾಲೇಜು ಕನ್ನಡ, ಇಂಗ್ಲಿಷ್ ಚರ್ಚಾ ಸ್ಪರ್ಧೆ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು : ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಇ.ಎಸ್. ಇಂದಿರೇಶ್, Legal Education-Assesing its role and efficacy in the globalised world' ಪುಸ್ತಕ, ಬಹುಮಾನ ವಿತರಣೆ : ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ರವಿ ವಿ. ಹೊಸಮನಿ, ಅಧ್ಯಕ್ಷತೆ : ವಿದ್ಯಾವಿಕಾಸ್ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಕವೀಶ್‌ಗೌಡ, ಉಪಸ್ಥಿತರು : ವಿದ್ಯಾ ವಿಕಾಸ್ ಕಾನೂನು ಅಧ್ಯಯನ ಸಂಸ್ಥೆಯ ಕಾನೂನು ಶಿಕ್ಷಣ ಸಲಹೆಗಾರ ಹಾಗೂ ವಿಶ್ರಾಂತ ಉಪಕುಲಪತಿ ಪ್ರೊ.ಪಿ. ಈಶ್ವರ್ ಭಟ್, ಪ್ರೊ. ಸಿಕೆಎನ್ ರಾಜಾ ಅವರ ಪುತ್ರ ಶ್ರೀಕಂಠಪ್ರಸಾದ್, ಸ್ಥಳ: ಲಲಿತ ಸ್ಮಾರಕ ಭವನ, ವಿದ್ಯಾವಿಕಾಸ ಇಂಜಿನಿಯರಿಂಗ್ ಕಾಲೇಜು ಆವರಣ, ಬನ್ನೂರು ರಸ್ತೆ, ಮಧ್ಯಾಹ್ನ 3ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 CFTRI ಶೋಧ– ಅನುಶೋಧ– ಪ್ರಾಯೋಜಿತ ಬಾನುಲಿ ಸರಣಿ, ಪ್ರಾಯೋಜಕರು : CSIR, CFTRI, Mysuru, 6.40 ಅರಿವಿನ ಶಿಖರ : ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ –ಡಾ. ಎಂ. ಎ. ಜ್ಯೋತಿ, ನಿತಿನ್ ರಾಜಾರಾಂಶಾಸ್ತ್ರಿ, ವ್ಯಾಖ್ಯಾನ–ಕೆ.ಎಲ್.ಪದ್ಮಿನಿ ಹೆಗಡೆ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಹಾದಿಯಲ್ಲಿ ಕಂಡ ಮುಖ–ಬಾನುಲಿ ಸರಣಿ, ಪ್ರಸ್ತುತಿ: ಅಬ್ದುಲ್ ರಶೀದ್, 9.00 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಡಾ. ಕೆ. ಜೆ. ಯೇಸುದಾಸ್–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ 'ನಮ್ಮೂರ್ ಹೆಸರು', ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.30 ಆಯುಷ್ ವಾಣಿ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು : ಆಯುಷ್ ಇಲಾಖೆ, ಕರ್ನಾಟಕ ಸರ್ಕಾರ, 12.35 ದೇವರನಾಮ–ಕೆ. ಎಲ್. ಯತಿರಾಜ್, 12.45 ಜನಪದ ಸಂಗೀತ, 1.20 ಭಾವಗೀತೆಗಳು–ಹೆಚ್.ಕೆ. ನಾರಾಯಣ, 2.40 ಹಿಂದಿ ಚಿತ್ರಗೀತೆಗಳು, 3.00 ಹಳ್ಳಿ ಹಾಡು, 3.30 ಮಕ್ಕಳ ಮಂಟಪ : ಶ್ರೀರಂಗಪಟ್ಟಣ ತಾಲೂಕು ಶ್ರೀಶಾರದಾದೇವಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 4.00 ನಾಟಕ, 4.30 ನೆನಪಿನಂಗಳ (ಧ್ವನಿ ಭಂಡಾರದಿಂದ), 6.50 ಕೃಷಿರಂಗ : ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, ಬೆಳೆ ಸಮೀಕ್ಷೆ ಹಾಗೂ ಕೃಷಿ ಇಲಾಖೆ ಯೋಜನೆಗಳು ಈ ಕುರಿತು ಚಾಮರಾಜನಗರ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರಾದ ಎಸ್.ಎಸ್. ಅಬಿದ್ ಅವರೊಂದಿಗೆ ಸಂದರ್ಶನ. ಸಂದರ್ಶಕರು : ಎನ್. ಕೇಶವಮೂರ್ತಿ, 8.00 ಯುವವಾಣಿ, 9.30 ಸವಿನೆನಪು–ಹಳೆಯ ಕನ್ನಡ ಚಿತಗೀತೆಗಳು, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ : ಸಂಸ್ಕೃತಿ ಮತ್ತು ಪ್ರಕೃತಿ ವಹನೆ–ಯುಗಳ ಸಿತಾರ್ ಮತ್ತು ಸಂತೂರ್ ವಾದನ

■ **ಕುರುಬಾರಹಳ್ಳಿ ಶ್ರೀ ಬನ್ನಿಮಹಾಕಾಳೇಶ್ವರಿ ಮತ್ತು ಆಯರಳ್ಳಿ ಮಾಕಮ್ಮನವರ ದೇವಸ್ಥಾನದ ಟ್ರಸ್ಟ್ :** ಶ್ರೀ ಬನ್ನಿಮಹಾಕಾಳೇಶ್ವರಿ ಶ್ರೀ ಆಯರಳ್ಳಿ ಮಾಕಮ್ಮ ಮತ್ತು ಶ್ರೀ ಮಾಲಮ್ಮ ದೇವರ ಜಾತ್ರಾ ಮಹೋತ್ಸವ, ಮಜ್ಜಣ ಪೂಜೆ, ಉಪಸ್ಥಿತರು : ಮುಖ್ಯಮಂತ್ರಿ ಸಿದ್ದರಾಮಯ್ಯ, ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಶಾಸಕರಾದ ಎ.ಎಚ್. ವಿಶ್ವನಾಥ್, ತನ್ವೀರ್ ಸೇಠ್, ಟಿ.ಎಸ್. ಶ್ರೀವತ್ಸ, ಕೆ. ಹರೀಶ್‌ಗೌಡ, ಡಿ. ರವಿಶಂಕರ್, ಯತೀಂದ್ರ ಸಿದ್ದರಾಮಯ್ಯ, ಮಾಜಿ ಶಾಸಕರಾದ ಮಂಜುನಾಥ್, ಎಂ.ಕೆ. ಸೋಮಶೇಖರ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಸ್ಥಳ: ಕುರುಬಾರಹಳ್ಳಿ ಶ್ರೀ ಬನ್ನಿಮಹಾಕಾಳೇಶ್ವರಿ ಮತ್ತು ಆಯರಳ್ಳಿ ಮಾಕಮ್ಮನವರ ದೇವಸ್ಥಾನದ ಟ್ರಸ್ಟ್ ಆವರಣ, ಸಿದ್ದಾರ್ಥನಗರ, ಸಂಜೆ 4ಕ್ಕೆ.

■ **ರಾಮ್‌ಸನ್ಸ್ ಪ್ರತಿಷ್ಠಾನ, ಭಾರತ ವಿಕಾಸ ಪರಿಷದ್ :** ದಸರಾ ಬೊಂಬೆ ಪ್ರದರ್ಶನ ಸ್ಪರ್ಧೆ ಬಹುಮಾನ ವಿತರಣಾ ಸಮಾರಂಭ, ಉದ್ಘಾಟನೆ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಬಹುಮಾನ ವಿತರಣೆ : ಪ್ರವಾಸೋದ್ಯಮ ಇಲಾಖೆ ಜಂಟಿ ನಿರ್ದೇಶಕರಾದ ಶ್ರೀಮತಿ ಎಂ.ಕೆ.ಸವಿತಾ, ಮುಖ್ಯ ಅತಿಥಿಗಳು : ರಾಮ್‌ಸನ್ಸ್ ಬೊಂಬೆಮನೆ ಆರ್.ಜಿ. ಸಿಂಗ್, ಭಾರತ ವಿಕಾಸ ಪರಿಷದ್ ಪ್ರಾಂತ್ಯಾಧ್ಯಕ್ಷ ಆರ್. ನಾಗಭೂಷಣ, ಅಧ್ಯಕ್ಷತೆ : ಭಾರತ ವಿಕಾಸ ಪರಿಷದ್ ಅಧ್ಯಕ್ಷ ಡಾ. ಬಿ.ಎನ್. ರಂಗನಾಥರಾವ್, ಸ್ಥಳ: ರಾಮ್‌ಸನ್ಸ್ ಹ್ಯಾಂಡಿಕ್ರಾಫ್ಟ್ ಸೇಲ್ಸ್ ಎಂಪೋರಿಯಂ, ಮೃಗಾಲಯದ ಎದುರು, ಇಟ್ಟಿಗೆಗೂಡು, ಸಂಜೆ 4.30ಕ್ಕೆ.

■ **ಕಲಾಸುರುಚಿ :** ಕಥೆ ಕೇಳೋಣ ಬನ್ನಿ – 850 ವಿಶೇಷ ಸಂಚಿಕೆ, ಕಥೆ ಹೇಳುವವರು: ಕೆ ಪಿ ಪುತ್ತೂರಾಯ, ವಿಶ್ರಾಂತ ನಿರ್ದೇಶಕರು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಖ್ಯಾತ ಸಾಹಿತಿ, ವಾಗ್ಮಿ, ಚಿಂತಕ, ಶಿಕ್ಷಣ ತಜ್ಞ ಹಾಗೂ ಅಂಕಣಕಾರ, ಬೆಂಗಳೂರು, ಸ್ಥಳ: ಸುರುಚಿ ರಂಗಮನೆ, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30ಕ್ಕೆ.

■ **ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು ಜಿಲ್ಲಾ ಮತ್ತು ನಗರ ಘಟಕ, ಕದಳಿ ಮಹಿಳಾ ವೇದಿಕೆ :** ಡಾ.ಸಿ.ಎನ್. ಮೃತ್ಯುಂಜಯಪ್ಪ ಆದರ್ಶ ವೈದ್ಯ ಸೇವಾ ಪ್ರಶಸ್ತಿ ಪ್ರದಾನ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ: ವಿದ್ಯಾವರ್ಧಕ ಕಾಲೇಜು ನಿವೃತ್ತ ಪ್ರಾಧ್ಯಾಪಕ ಪ್ರೊ.ಜಿ.ಚಂದ್ರಶೇಖರ್, ಅಧ್ಯಕ್ಷತೆ: ಲೇಖಕ ಪ್ರೊ.ಸಿ.ನಾಗಣ್ಣ, ಪ್ರಶಸ್ತಿ ಪುರಸ್ಕೃತರು: ನಿವೃತ್ತ ಪ್ರಾಧ್ಯಾಪಕರಾದ ಡಾ.ಪ್ರೇಮಾ ಧನರಾಜ್, ಸ್ಥಳ:ರಾಜೇಂದ್ರ ಭವನ, ಜೆಎಸ್‌ಎಸ್ ಆಸ್ಪತ್ರೆ ಆವರಣ, ಸಂಜೆ 4.30ಕ್ಕೆ

■ **ಡಾ. ಕೆ. ಕೃಷ್ಣಮೂರ್ತಿ ಸಂಶೋಧನಾ ಪ್ರತಿಷ್ಠಾನ ಮತ್ತು ಉತ್ತಿಷ್ಠ ಭಾರತ ಪ್ರತಿಷ್ಠಾನ :** ಆದಿಗುರು ಶ್ರೀ ಶಂಕರಾಚಾರ್ಯರ ಮೋಹ ಮುದ್ಗರ ಕುರಿತು ಸಂಸ್ಕೃತ ವಿದುಷಿ ಡಾ. ಕೆ. ಲೀಲಾಪ್ರಕಾಶ್ ಅವರಿಂದ ಪ್ರವಚನ ಕಾರ್ಯಕ್ರಮ, ಉದ್ಘಾಟನೆ : ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಅಧ್ಯಕ್ಷತೆ : ಸರ್ಕಾರಿ ಮಹಾರಾಜ ಸಂಸ್ಕೃತ ಕಾಲೇಜು ಪ್ರಾಂಶುಪಾಲ ಪಿ. ಸತ್ಯನಾರಾಯಣ, ಮುಖ್ಯ ಅತಿಥಿಗಳು : ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸಮಾಜ ಸೇವಕ ಡಾ. ಕೆ.ರಘುರಾಂ ವಾಜಪೇಯಿ, ಕಾಂಗ್ರೆಸ್ ಮುಖಂಡ ಎನ್.ಎಂ. ನವೀನ್‌ಕುಮಾರ್, ಉಪಸ್ಥಿತರು : ಡಾ. ಕೆ. ಕೃಷ್ಣಮೂರ್ತಿ ಸಂಶೋಧನಾ ಪ್ರತಿಷ್ಠಾನ ಸಂಚಾಲಕ ಸಿ.ಎನ್. ಕೇಶವಪ್ರಕಾಶ್, ಉತ್ತಿಷ್ಠ ಭಾರತ ಪ್ರತಿಷ್ಠಾನ ಕಾರ್ಯದರ್ಶಿ ಎಂ.ವಿ. ನಾಗೇಂದ್ರಬಾಬು, ಸಂಚಾಲಕ ಎನ್. ಅನಂತ, ಸ್ಥಳ: ಮೈಸೂರು ಮಹಾರಾಜ ಸಂಸ್ಕೃತ ಪಾಠಶಾಲೆಯ ಸಾಹಿತ್ಯ ಕಟ್ಟೆ, ಸಯ್ಯಾಜಿರಾವ್ ರಸ್ತೆ, ಸಂಜೆ 5ಕ್ಕೆ.

■ **ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆ, ರಂಗವಲ್ಲಿ :** ಪ್ರಸನ್ನ ಅವರ ನಿರ್ದೇಶನದ ಮಕ್ಕಳ ನಾಟಕ 'ಪಿಪ್ಪಿಗೊಂದು ಪಪ್ಪಿ' ನಾಟಕ ಪ್ರದರ್ಶನ, ಸ್ಥಳ: ಕಿರುರಂಗ ಮಂದಿರ, ಕಲಾಮಂದಿರದ ಆವರಣ, ಸಂಜೆ 6.30ಕ್ಕೆ.

ಶ್ರೀ ಬನ್ನಿಮಹಾಕಾಳೇಶ್ವರಿ, ಶ್ರೀ ಆಯರಳ್ಳಿ ಮಾಕಮ್ಮ ಶ್ರೀ ಮಾಲಮ್ಮ ದೇವಿಯರ ಜಾತ್ರಾ ಮಹೋತ್ಸವಕ್ಕೆ ಚಾಲನೆ




ಕುರುಬಾರಹಳ್ಳಿ ಹಾಗೂ ಸಿದ್ಧಾರ್ಥನಗರದ ಶ್ರೀ ಬನ್ನಿಮಹಾಕಾಳೇಶ್ವರಿ, ಶ್ರೀ ಆಯರಳ್ಳಿ ಮಾಕಮ್ಮ ಮತ್ತು ಶ್ರೀ ಮಾಲಮ್ಮ ದೇವಿಯರ ಜಾತ್ರಾ ಮಹೋತ್ಸವಕ್ಕೆ ಶುಕ್ರವಾರ ವಿಧ್ಯುಕ್ತ ಚಾಲನೆ ದೊರೆಯಿತು.

ಮೈಸೂರು, ಅ.18(ಎಂಕೆ)– ಮೈಸೂರು ಕುರುಬಾರಹಳ್ಳಿ ಹಾಗೂ ಸಿದ್ಧಾರ್ಥ ನಗರದ ಶ್ರೀ ಬನ್ನಿಮಹಾಕಾಳೇಶ್ವರಿ, ಶ್ರೀ ಆಯರಳ್ಳಿ ಮಾಕಮ್ಮ ಮತ್ತು ಶ್ರೀ ಮಾಲಮ್ಮ ದೇವಿಯರ ಮೂರು ದಿನಗಳ ಜಾತ್ರಾ ಮಹೋತ್ಸವಕ್ಕೆ ಶುಕ್ರವಾರ ವಿಧ್ಯುಕ್ತ ಚಾಲನೆ ದೊರೆಯಿತು.

ಸಂಜೆ 7 ಗಂಟೆ ಸುಮಾರಿಗೆ ಕುರುಬಾರ ಹಳ್ಳಿಯ ಶ್ರೀ ಆಯರಳ್ಳಿ ಮಾಕಮ್ಮ, ಶ್ರೀ ಮಾಲಮ್ಮ ಹಾಗೂ ಸಿದ್ಧಾರ್ಥನಗರದ ಶ್ರೀ ಬನ್ನಿಮಹಾಕಾಳೇಶ್ವರಿ ದೇವಿಯರ ಉತ್ಸವ ಮೂರ್ತಿಗಳಿಗೆ ಶ್ರದ್ಧಾ-ಭಕ್ತಿಯಿಂದ ಘಟಿಪೂಜೆ ಸಲ್ಲಿಸುವ ಮೂಲಕ ಜಾತ್ರಾ ಮಹೋತ್ಸವಕ್ಕೆ ಚಾಲನೆ ನೀಡಲಾಯಿತು.

ಶಕ್ತಿ ದೇವತೆಗಳ ಉತ್ಸವಮೂರ್ತಿ ಗಳನ್ನು ಮಂಗಳವಾದ್ಯದೊಂದಿಗೆ ಕುರು ಬಾರಹಳ್ಳಿಯಿಂದ ಸಿದ್ಧಾರ್ಥನಗರದಲ್ಲಿ ಶ್ರೀ ಬನ್ನಿಮಹಾಕಾಳೇಶ್ವರಿ ದೇವಿ ಸನ್ನಿಧಿ ಯವರೆಗೆ ಮೆರವಣಿಗೆ ನಡೆಸಲಾಯಿತು. ನಂತರ ಜಾನಪದ ಹಾಡು, ಕುಣಿತ ದೊಂದಿಗೆ ಪೂಜೆ ಸಲ್ಲಿಸಿ, ಅಲ್ಲಿಂದ ಕುರುಬಾರಹಳ್ಳಿಯ ಶ್ರೀ ಆಯರಳ್ಳಿ ಮಾಕಮ್ಮ ದೇವಸ್ಥಾನದವರೆಗೆ ಮೆರವಣಿಗೆ ನಡೆಸುವ ಮೂಲಕ ಮೊದಲ ದಿನದ ಪೂಜಾ ಕೈಂಕರ್ಯಗಳನ್ನು ಅಚ್ಚುಕಟ್ಟಾಗಿ ನೆರವೇರಿಸಲಾಯಿತು.

ಅಪಾರ ಭಕ್ತ ಸಮೂಹ: ಶ್ರೀ ಬನ್ನಿಮಹಾ ಕಾಳೇಶ್ವರಿ ಮತ್ತು ಆಯರಳ್ಳಿ ಮಾಕಮ್ಮನವರ ದೇವಸ್ಥಾನದ ಟ್ರಸ್ಟ್ ವತಿಯಿಂದ ನಡೆ ಯುತ್ತಿರುವ ಜಾತ್ರಾ ಮಹೋತ್ಸವದಲ್ಲಿ ಅಪಾರ ಸಂಖ್ಯೆಯಲ್ಲಿ ಭಕ್ತ ಸಮೂಹ ನೆರೆದಿತ್ತು. ಮೆರವಣಿಗೆಯುದ್ದಕ್ಕೂ ಉತ್ಸವ ಮೂರ್ತಿಯೊಂದಿಗೆ ಸಾಗಿ, ಶಕ್ತಿ ದೇವತೆ ಗಳಿಗೆ ಪೂಜೆ ಸಲ್ಲಿಸಿ, ಪ್ರಾರ್ಥಿಸಿದರು.

ಜಿಲ್ಲೆಯ ಪಿರಿಯಾಪಟ್ಟಣ, ಹುಣಸೂರು, ಕೆ.ಆರ್.ನಗರ, ತಿ.ನರಸೀಪುರ ತಾಲೂಕು, ಗರ್ಗೇಶ್ವರಿ, ಮಂಟಿಕೊಪ್ಪಲು, ರಾವಂದೂರು, ಯಾಂದಳ್ಳಿ, ನಾಡನಹಳ್ಳಿ, ಮಲ್ಲರಾಜಯ್ಯನ ಹುಂಡಿ, ತಮ್ಮಡಳ್ಳಿ ಸೇರಿದಂತೆ ಸುಮಾರು 40ಕ್ಕೂ ಹೆಚ್ಚು ಗ್ರಾಮಗಳಿಂದ ಭಕ್ತಾಧಿ ಗಳು ಆಗಮಿಸಿದ್ದರು. ಶ್ರೀ ಬನ್ನಿಮಹಾಕಾಳೇಶ್ವರಿ ದೇವಸ್ಥಾನದ ಆವರಣದಲ್ಲಿ ಅನ್ನಸಂತರ್ಪಣೆ ನಡೆಯಿತು. ಹಾಗೆಯೇ ನಾಳೆ(ಅ.19) ಸಂಜೆ 4ಕ್ಕೆ ಮಜ್ಜಣ ಪೂಜೆ ನಡೆಯಲಿದ್ದು, ಅ.20ರಂದು ಬೆಳಗ್ಗೆ 9ಕ್ಕೆ ಕುರುಬಾರಹಳ್ಳಿ ಹಾಗೂ ಸಿದ್ಧಾರ್ಥನಗರದ ಪ್ರಮುಖ ಬೀದಿಗಳಲ್ಲಿ ವಾಹನೋತ್ಸವ ನಡೆಯಲಿದೆ.

ಶ್ರೀ ಬನ್ನಿಮಹಾಕಾಳೇಶ್ವರಿ ಮತ್ತು ಆಯರಳ್ಳಿ ಮಾಕಮ್ಮನವರ ದೇವಸ್ಥಾನದ ಟ್ರಸ್ಟ್ ಅಧ್ಯಕ್ಷ ಅಪ್ಪುಗೌಡ, ಕಾರ್ಯದರ್ಶಿ ಜವರಾಜು, ಸಂಘಟನಾ ಕಾರ್ಯದರ್ಶಿ ಕುರುಬಾರಹಳ್ಳಿ ಪ್ರಕಾಶ್, ಖಜಾಂಚಿ ನಾಗರಾಜ್, ಆಡಿಟರ್ ಶಿವಣ್ಣ, ನಿರ್ದೇಶಕರಾದ ಎಸ್ಆರ್‌ಟಿ ರಮೇಶ್, ರವಿಕುಮಾರ್, ಟಿ.ಮಂಜುನಾಥ್, ಧನಂಜಯ, ರಾಕೇಶ್, ಗ್ರಾಮಸ್ಥರು ಉಪಸ್ಥಿತರಿದ್ದರು.

ಸಂಸದ ಯದುವೀರ್‌ರಿಂದ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ರೀನ್ ಫೋರ್ಸ್ಡ್ ಅರ್ಥ್ ವಾಲ್ ಪರಿಶೀಲನೆ

ಮೈಸೂರು, ಅ.18– ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇಯಲ್ಲಿರುವ ರೀನ್ ಫೋರ್ಸ್ಡ್ ಅರ್ಥ್ ವಾಲ್(ಆರ್‌ಇ ವಾಲ್) ಗಳನ್ನು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಪರಿಶೀಲಿಸಿದರು.

ಹೆದ್ದಾರಿಯ ಇಂಡುವಾಳು ಹಾಗೂ ಹಳೇ ಬೂದನೂರು ಗ್ರಾಮದ ಬಳಿಯ ಆರ್‌ಇ ವಾಲ್‌ಗಳ ನಿರ್ವಹಣಾ ಕಾಮ ಗಾರಿ ಪೂರ್ಣಗೊಂಡ ಹಿನ್ನೆಲೆಯಲ್ಲಿ ಭೇಟಿ ನೀಡಿ ಪರಿಶೀಲಿಸಿದ ಸಂಸದರು, ಅಧಿಕಾರಿಗಳಿಂದ ಮಾಹಿತಿ ಪಡೆದರು.

ಈ ವೇಳೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿ ಕಾರ(ಎನ್‌ಹೆಚ್‌ಎಐ)ದ ಅಧಿಕಾರಿಗಳು, ಆರ್‌ಇ ವಾಲ್‌ಗಳ ನಿರ್ವಹಣಾ ಕಾಮಗಾರಿ ಯಶಸ್ವಿಯಾಗಿ ಪೂರ್ಣಗೊಂಡಿದ್ದು, ಯಾವುದೇ ಆತಂಕಪಡುವ ಅಗತ್ಯವಿಲ್ಲ ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಸಂಸದರು, ಆರ್‌ಇ ವಾಲ್‌ಗಳು ವಾಲಿದ್ದರಿಂದ ಸಾರ್ವ ಜನಿಕರು ಆತಂಕಗೊಂಡಿದ್ದರು. ಇಂತಹ ಘಟನೆಗಳು ಮರುಕಳಿಸದಂತೆ ನಿರ್ವಹಣಾ ಕಾಮಗಾರಿಗೆ ಆದ್ಯತೆ ನೀಡಬೇಕು. ಕೆಲವೆಡೆ ಚರಂಡಿ ಸಮಸ್ಯೆ ಬಗ್ಗೆ ದೂರುಗಳು ಬಂದಿವೆ. ಕೂಡಲೇ ಈ ಬಗ್ಗೆ ಕ್ರಮ ವಹಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಪ್ರಧಾನಿ ಮೋದಿ ಅವರು ಈ ಭಾಗದ ಜನರಿಗೆ ಮೈಸೂರು–ಬೆಂಗಳೂರು ಹೆದ್ದಾರಿ ಯನ್ನು ಕೊಡುಗೆಯಾಗಿ ನೀಡಿದ್ದಾರೆ. ಈ ರಸ್ತೆಯ ಸುರಕ್ಷತೆಯನ್ನು ಖಾತ್ರಿಪಡಿ ಸುವುದು ಆದ್ಯತೆಯಾಗಿದೆ. ಹೆದ್ದಾರಿ ಪ್ರಾಧಿಕಾರ ಹಾಗೂ ಮಾಧ್ಯಮ ವರದಿಗಳ ಆಧಾರದ ಮೇಲೆ ನಾನೇ ಖುದ್ದು ಭೇಟಿ ನೀಡಿ ಸಮಸ್ಯೆಯ ಬಗ್ಗೆ ಮೊದಲು ಮಾಹಿತಿ ಪಡೆಯಲು ನಿರ್ಧರಿಸಿದ್ದೇನೆ ಆರ್‌ಇ ವಾಲ್‌ಗಳ ನಿರ್ವಹಣೆ ಕಾರ್ಯವನ್ನು ನಡೆಸಲಾಗಿದ್ದು, ರಸ್ತೆ ಸಂಪೂರ್ಣವಾಗಿ ಸುರಕ್ಷಿತವಾಗಿದೆ ಎಂದು ಅಧಿಕಾರಿಗಳು ಭರವಸೆ ನೀಡಿದ್ದಾರೆ. ನಾನು ಯಾವಾಗಲೂ ನನ್ನ ಕ್ಷೇತ್ರದ ಜನರೊಂದಿಗೆ ನಿಲ್ಲುತ್ತೇನೆ ಎಂದು ಯದುವೀರ್ ತಿಳಿಸಿದರು.



ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿರುವ ಆರ್‌ಇ ವಾಲ್‌ಗಳನ್ನು ಸಂಸದ ಯದುವೀರ್ ಪರಿಶೀಲಿಸಿ, ನಿರ್ವಹಣಾ ಕಾರ್ಯದ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದರು.

300 ರೂ.ಲಂಚ ಪಡೆದ ಸರ್ಕಾರಿ ಟೈಪಿಸ್ಟ್ ಕೆಲಸದಿಂದ ವಜಾ

ರಾಜ್ಯ ಸರ್ಕಾರದ ಆದೇಶ ಎತ್ತಿ ಹಿಡಿದ ಹೈಕೋರ್ಟ್: ಮೈಸೂರಲ್ಲಿ ನಡೆದಿದ್ದ ಪ್ರಕರಣ

ಬೆಂಗಳೂರು, ಅ. 18– ಮೈಸೂರು ವಲಯ ವಾಣಿಜ್ಯ ತೆರಿಗೆ ಜಂಟಿ ಆಯುಕ್ತರ ಕಚೇರಿಯಲ್ಲಿ 300 ರೂಪಾಯಿ ಲಂಚ ಪಡೆದ ಆರೋಪದಡಿ ಮಹಿಳಾ ಟೈಪಿಸ್ಟ್ ಕಾಂತಿ ಎಂಬುವರನ್ನು ಸೇವೆಯಿಂದ ವಜಾಗೊಳಿಸಿದ್ದ ರಾಜ್ಯ ಸರ್ಕಾರದ ಆದೇಶ ವನ್ನು ಹೈಕೋರ್ಟ್ ಎತ್ತಿ ಹಿಡಿದಿದೆ.

ಸೇವೆಯಿಂದ ವಜಾಗೊಳಿಸಿದ್ದ ಮಹಿಳೆ ಯನ್ನು ಕಡ್ಡಾಯ ನಿವೃತ್ತಿಗೊಳಿಸುವಂತೆ ಕೆಎಟಿ ನೀಡಿದ್ದ ಆದೇಶ ಪ್ರಶ್ನಿಸಿ ಸರ್ಕಾರ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಎಸ್.ಜಿ. ಪಂಡಿತ್ ಮತ್ತು ಸಿ.ಎಂ.ಪೂಣಚ್ಚ ಅವರನ್ನೊಳಗೊಂಡ ವಿಭಾಗೀಯ ಪೀಠ ಈ ಆದೇಶ ನೀಡಿದೆ.

ಕರ್ನಾಟಕ ಆಡಳಿತಾತ್ಮಕ ನ್ಯಾಯ ಮಂಡಳಿ ನೀಡಿದ್ದ ಆದೇಶ ರದ್ದುಪಡಿ ಸಿದ್ದು, ಆಕೆಯನ್ನು ಸೇವೆಯಿಂದ ವಜಾಗೊಳಿಸುವಂತೆ ಕೋರಿ ಸರ್ಕಾರ ಸಲ್ಲಿಸಿದ್ದ ಮನವಿಯನ್ನು ಪುರಸ್ಕರಿಸಿದೆ.

ಗಂಭೀರ ಪ್ರಕರಣ: ಪ್ರಕರಣದಲ್ಲಿ ಆರೋಪಿ ಮಹಿಳೆ ಲಂಚಕ್ಕೆ ಬೇಡಿಕೆ ಇಡುವುದು ಮತ್ತು ಪಡೆಯುವುದು ಗಂಭೀರ ಸಾಮಾಜಿಕ ನೈತಿಕತೆಯ ವಿಷಯ ವಾಗಿದ್ದು, ಅಂತಹ ಬೆಳವಣಿಗೆಯನ್ನು ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ಆದರೆ, ಇಲಾಖಾ ವಿಚಾರಣೆಯಲ್ಲಿ ಲಂಚ ಪಡೆದುಕೊಂಡಿರುವ ಅಂಶ ಗೊತ್ತಾಗಿದ್ದರೂ, ಅದನ್ನು ಪರಿಗಣಿಸದೆ ಶಿಕ್ಷೆ ಮಾರ್ಪಾಡು ಮಾಡಿರುವುದು ಸರಿಯಲ್ಲ ಎಂದು ನ್ಯಾಯಾಲಯ ಹೇಳಿದೆ.

ಶಿಸ್ತು ಪ್ರಾಧಿಕಾರ ಅಥವಾ ಮೇಲ್ಮನವಿ ಪ್ರಾಧಿಕಾರವು ವಿಧಿಸುವ ಶಿಕ್ಷೆಯು ನ್ಯಾಯಾ ಲಯದ ಆತ್ಮ ಸಾಕ್ಷಿಯನ್ನು ಆಘಾತಗೊಳಿ ಸುತ್ತದೆ ಎಂಬ ಅಂಶ ಗೊತ್ತಿದ್ದಲ್ಲಿ ಮಾತ್ರ ಶಿಕ್ಷೆಯ ಪ್ರಮಾಣ ಬದಲಾವಣೆ ಮಾಡ ಬಹುದೆಂದು ಸುಪ್ರೀಂಕೋರ್ಟ್ ಪ್ರಕರಣ ವೊಂದರಲ್ಲಿ ಹೇಳಿದೆ. ಈ ಪ್ರಕರಣದಲ್ಲಿ ಲಂಚ ಸ್ವೀಕರಿಸಿದವರನ್ನು ವಜಾ ಮಾಡಿರುವ ಶಿಕ್ಷೆ ಅಸಮಂಜಸವಾಗಿದೆ ಎಂಬುದಕ್ಕೆ ನ್ಯಾಯಮಂಡಳಿ ಸೂಕ್ತ ಕಾರಣ ನೀಡಿಲ್ಲ. ಆದರೂ, ಅಪರಾಧಿಯನ್ನು ವಜಾಗೊಳಿಸಿರುವ ಆದೇಶ ಮಾರ್ಪಡಿಸಿ ಕಡ್ಡಾಯ ನಿವೃತ್ತಿ ಮಾಡಲು ಆದೇಶಿಸಿದ್ದು, ಈ ರೀತಿಯಲ್ಲಿ ಆದೇಶ ನೀಡುವುದಕ್ಕೆ ಅವಕಾಶವಿಲ್ಲ. ಆದ್ದರಿಂದ ಕೆಎಟಿ ರದ್ದುಗೊಳಿಸಲಾಗುತ್ತಿದೆ ಎಂದು ಅಭಿಪ್ರಾಯಪಟ್ಟಿರುವ ನ್ಯಾಯಾಲಯ ಸರ್ಕಾರದ ಕ್ರಮವನ್ನು ಎತ್ತಿಹಿಡಿದಿದೆ.

ಪ್ರಕರಣದ ಹಿನ್ನೆಲೆ: ಪ್ರಕರಣದಲ್ಲಿ ಪ್ರತಿವಾದಿಯಾಗಿರುವ ಕಾಂತಿ, ದೂರುದಾರ ಗಣೇಶ್ ಶೆಟ್ಟಿಯಿಂದ 300 ರೂ.ಲಂಚ ಸ್ವೀಕರಿಸಿದ್ದ ಆರೋಪ ಹೊತ್ತಿದ್ದರು. ಈ ಸಂಬಂಧ ಇಲಾಖೆ ವಿಚಾರಣೆ ನಂತರ ಕಾಂತಿ ಕರ್ತವ್ಯ ನಿಷ್ಠೆ ಕಾಪಾಡಿಕೊಳ್ಳಲು ವಿಫಲರಾಗಿದ್ದಾರೆ ಮತ್ತು ಕರ್ನಾಟಕ ನಾಗರಿಕ ಸೇವಾ (ನಡವಳಿಕೆ) ನಿಯಮ– 1966ರ ನಿಯಮ 3(1) (1) ರಿಂದ (3) ರವರೆಗೆ ಮತ್ತು ನಿಯಮ 16ರಡಿಯಲ್ಲಿ ದುರ್ನಡತೆ ತೋರಿದ್ದಾರೆ ಎಂದು ಸರ್ಕಾರ ಅಭಿಪ್ರಾಯಪಟ್ಟಿದ್ದರಿಂದ ಕಾಂತಿ ಅವರನ್ನು 2014ರ ಜುಲೈ 24ರಂದು ಸೇವೆಯಿಂದ ವಜಾಗೊಳಿಸಲಾಗಿತ್ತು. ಅದನ್ನು ಪ್ರಶ್ನಿಸಿ ಕಾಂತಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ್ದ ಕೆಎಟಿ, ಮಹಿಳೆ 11 ವರ್ಷ 5 ತಿಂಗಳು ಸೇವೆ ಸಲ್ಲಿಸಿದ್ದಾರೆ ಎಂದು ತಿಳಿಸಿ ವಜಾ ಆದೇಶ ರದ್ದುಪಡಿಸಿ, ಕಡ್ಡಾಯ ನಿವೃತ್ತಿ ಶಿಕ್ಷೆ ನೀಡಿತ್ತು. ಈ ಆದೇಶವನ್ನು ಪ್ರಶ್ನಿಸಿ ರಾಜ್ಯ ಸರ್ಕಾರ ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿತ್ತು.

ಕರ್ನಾಟಕ ಪೊಲೀಸರಿಗೆ 20 ಲಕ್ಷದಿಂದ 50 ಲಕ್ಷಕ್ಕೆ ವಿಮಾ ಯೋಜನೆ ಮೊತ್ತ ಹೆಚ್ಚಳ

ಬೆಂಗಳೂರು, ಅ. 18– ಪೊಲೀಸರಿಗೆ ವಿಶೇಷ ಗುಂಪು ವಿಮಾ ಯೋಜನೆ ಮೊತ್ತವನ್ನು 20 ಲಕ್ಷದಿಂದ ರೂ. 50 ಲಕ್ಷಕ್ಕೆ ಹೆಚ್ಚಳ ಮಾಡಿ ಶುಕ್ರವಾರ ರಾಜ್ಯ ಪೊಲೀಸ್ ಮಹಾ ನಿರ್ದೇಶಕರು ಆದೇಶ ಹೊರಡಿಸಿದ್ದಾರೆ. 2023ರಲ್ಲಿ ಪೊಲೀಸ್ ಹುತಾತ್ಮರ ದಿನಾಚರಣೆಯಂದು ಗುಂಪು ವಿಮಾ ಮೊತ್ತವನ್ನು ಹೆಚ್ಚಿಸುವುದಾಗಿ ಸರ್ಕಾರ ಭರವಸೆ ನೀಡಿತ್ತು. ಆ ಮೂಲಕ ಅಧಿಕಾರಿಗಳಿಗೆ ಮತ್ತು ಅವರ ಕುಟುಂಬಗಳಿಗೆ ಸಕಾರಾತ್ಮಕ ಬೆಂಬಲವನ್ನು ವ್ಯಕ್ತಪಡಿಸಲಾಗಿತ್ತು.

KARNATAKA STATE POLICE

ಇದೀಗ ಭರವಸೆಯಂತೆ ಸರ್ಕಾರ ವಿಶೇಷ ಗುಂಪು ವಿಮಾ ಯೋಜನೆ ಮೊತ್ತ ಹೆಚ್ಚಳ ಮಾಡಿದೆ. ಕರ್ತವ್ಯದಲ್ಲಿರುವಾಗ ಪೊಲೀಸರು ಮೃತಪಟ್ಟರೆ ಈ ವಿಶೇಷ ಗುಂಪು ವಿಮಾ ನೀಡಲಾಗುತ್ತದೆ. ಫಾಲೋವರ್, ಪಿಸಿಯಿಂದ ಡಿಜಿ ಮತ್ತು ಐಜಿಪಿವರೆಗೂ ಅನ್ವಯವಾಗಲಿದೆ.

ಪೊಲೀಸ್ ಅಧಿಕಾರಿಗಳು ತಮ್ಮ ಪ್ರಾಣವನ್ನೂ ಲೆಕ್ಕಿಸದೆ ಕಾನೂನು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ನಿರಂತರ ಸೇವೆ ಸಲ್ಲಿಸುತ್ತಿರುತ್ತಾರೆ. ಅವರು ಮತ್ತು ಅವರ ಕುಟುಂಬಗಳ ಕಲ್ಯಾಣವನ್ನು ಪರಿಗಣಿಸುವುದು ಮುಖ್ಯವಾಗುತ್ತದೆ. ಹಾಗಾಗಿ ಕಾನೂನು ಸುವ್ಯವಸ್ಥೆಯನ್ನು ರಕ್ಷಿಸಲು ನಿರಂತರವಾಗಿ ಶ್ರಮಿಸುತ್ತಿರುವ ಅಧಿಕಾರಿಗಳು ಮತ್ತು ಸಿಬ್ಬಂದಿ ಕುಟುಂಬದ ಏಳಿಗೆಗೆ ಸರ್ಕಾರ ಪ್ರಥಮ ಆದ್ಯತೆ ಆಗಿದೆ.

ನಕ್ಕರೆ ಅದೇ ಸ್ವರ್ಗ

ಅಪ್ಪ : ಏನೋ ಇದು ರಿಸೆಲ್ಟ್. ಕೇವಲ 40 ಪರ್ಸೆಂಟ್ ಬಂದಿದೆ.
ಮಗ : ಇಲ್ಲಪ್ಪಾ, ಶೇ. 40 ರಷ್ಟು ಮಾರ್ಕ್ಸ್ ಬಂದಿದೆ. 40 ಪರ್ಸೆಂಟ್ ಮಾತ್ರ ಕಾಣಿಸ್ತಾ ಇದೆ.
ಅಪ್ಪ : ಉಳಿದ 40 ಪರ್ಸೆಂಟ್ ಎಲ್ಲಿ ಹೋಯ್ತು?
ಮಗ : ಆಧಾರ್ ಕಾರ್ಡ್ ಲಿಂಕ್ ಮಾಡಿದ್ದ ಬ್ಯಾಂಕ್ ಖಾತೆಗೆ ಜಮಾ ಮಾಡ್ತೀನಿ ಅಂತಾ ಹೇಳಿದ್ದಾರೆ.

ಮೈಸೂರು ಮಿತ್ರ

ಶನಿವಾರ, 19 ಅಕ್ಟೋಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ನಾವು ಹುಟ್ಟಿದ ನಂತರ ಮಾತು ಕಲಿಯಲು ಎರಡು ವರ್ಷವಾದರೂ ಬೇಕು. ಆದರೆ ಯಾವ ಮಾತನ್ನು ಆಡಬೇಕು, ಯಾವುದನ್ನು ಆಡಬಾರದು ಎಂಬುದನ್ನು ಕಲಿಯಲು ಇಡೀ ಜೀವಮಾನದ ಕಾಲ ಸಾಲದು...!

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕೊಳ್ಳೆ ಹೊಡೆದ ಮೇಲೆ ಕೋಟೆ ಬಾಗಿಲು ಹಾಕಿದರಂತೆ.

ನಿಮ್ಮ ಪತ್ರಗಳು

ಸಿಎಂ ಮನೆ ಬಳಿಯೇ ಸರಗಳ್ಳತನ

ಮಾನ್ಯರೆ,



ಇತ್ತೀಚೆಗೆ ಮೈಸೂರು ನಗರದಲ್ಲಿ ಸರಗಳ್ಳತನ ಹೆಚ್ಚಾಗುತ್ತಿದ್ದು, ಒಬ್ಬಂಟಿ ಮಹಿಳೆಯರು ಭಯಭೀತಿಯಿಂದ ಓಡಾಡುವ ಸ್ಥಿತಿ ನಿರ್ಮಾಣವಾಗಿದೆ. ನಮ್ಮ ಸಂಬಂಧಿಕರು ಮೊನ್ನೆ ಬೆಳಗ್ಗೆ 7 ಗಂಟೆ ಸುಮಾರಿಗೆ ಹಾಲು ತರಲು ಮನೆಯಿಂದ ಸ್ವಲ್ಪ ದೂರ ಹೋಗುವಷ್ಟರಲ್ಲಿ ಹಿಂದಿನಿಂದ ಬಂದ ಇಬ್ಬರು ಯುವಕರು ಅವರ ಕೊರಳಿನಲ್ಲಿದ್ದ 50 ಗ್ರಾಂ ಚಿನ್ನದ ಸರವನ್ನು ಕಿತ್ತುಕೊಂಡು ಪರಾರಿಯಾಗಿದ್ದಾರೆ. ಇವರ ಮನೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮನೆಗೆ ಕೇವಲ 200 ಮೀಟರ್ ದೂರದಲ್ಲಿದೆ ದಕ್ಷ ಪೊಲೀಸ್ ಅಧಿಕಾರಿ ಎಂದು ಹೇಳಲಾಗುತ್ತಿರುವ ಮೈಸೂರಿನ ಪೊಲೀಸ್ ಕಮಿಷನರ್ ಅವರು ಮೊನ್ನೆ ಮುಗಿದ ದಸರಾಗೆ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಿದ್ದು ಸಾರ್ವಜನಿಕರಿಂದ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಮೈಸೂರಿನಲ್ಲಿ ಆಗಾಗ್ಗೆ ಈ ಸರಗಳ್ಳತನಗಳು ನಡೆಯುತ್ತಲೇ ಇರುತ್ತವೆ. ಈ ಬಗ್ಗೆ ಪೊಲೀಸ್ ಕಮಿಷನರ್ ಅವರು ಹೆಚ್ಚು ಗಮನಹರಿಸಿ ಮಹಿಳೆಯರು ನಿರ್ಭೀತಿಯಿಂದ ಓಡಾಡುವಂತೆ ಆಗಬೇಕು ಎಂದು ತಮ್ಮಲ್ಲಿ ಮನವಿ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ನಿವೇಶನ ಕೊಳ್ಳುವ ಮೊದಲು ಯೋಚಿಸಿ

ಮಾನ್ಯರೆ,

ಇತ್ತೀಚೆಗೆ ನಡೆದ ಮುಡಾ ಭ್ರಷ್ಟಾಚಾರ ಮಧ್ಯಮವರ್ಗದವರ ಮತ್ತು ಬಡವರ ನಿದ್ದೆಗೆಡಿಸಿದೆ. ರಾಜಕಾರಣಿಯೊಬ್ಬರು ಶ್ರೀರಾಂಪುರ ಬಡಾವಣೆಯಲ್ಲಿ ತಮ್ಮ ಲೇಔಟ್ ನಿರ್ಮಾಣಕ್ಕಾಗಿ ದೇವಸ್ಥಾನ, ಪಾರ್ಕ್‌ಗೆ ಮೀಸಲಿಟ್ಟ ಮುಡಾಗೆ ಸೇರಿದ ಜಾಗಗಳನ್ನು ಅಕ್ರಮವಾಗಿ ಖಾತೆ, ಕಂದಾಯ ಮಾಡಿಸಿ ಮಾರಿರುವುದು ಅತ್ಯಂತ ಶಿಕ್ಷಾರ್ಹವಾಗಿದೆ. ಇದರಿಂದಾಗಿ ನಿವೇಶನಕ್ಕಾಗಿ ಹೂಡಿದ ಹಣ ಹೋಯಿತು. ಆಸ್ತಿ ಕೊಳ್ಳುವಾಗ ಅತೀ ಎಚ್ಚರಿಕೆಯಿಂದ ವ್ಯವಹರಿಸುವುದು ಉತ್ತಮ.

– ನೊಂದವರು, ಶ್ರೀರಾಂಪುರ ಬಡಾವಣೆ, ಮೈಸೂರು.

ಗ್ರಂಥಾಲಯ ಪುಸ್ತಕ ಆಯ್ಕೆ ಸಮಿತಿಯಿಂದ ಮಲತಾಯಿ ಧೋರಣೆ

ಮಾನ್ಯರೆ,

ಸಾರ್ವಜನಿಕ ಗ್ರಂಥಾಲಯ ಇಲಾಖೆ 20–21ರ ಸಾಲಿನ ಪುಸ್ತಕ ಆಯ್ಕೆ ಸಮಿತಿಯು ಈ ಸಾಲಿಗೆ ಒಂದೇ ಒಂದು ಚುಟುಕು ಪುಸ್ತಕವನ್ನು ಆಯ್ಕೆ ಮಾಡಿರುವುದಿಲ್ಲ ಎಂದು ತಿಳಿದು ಬಂದಿದೆ. ಇದು ಚುಟುಕು ಸಾಹಿತಿಗಳಿಗೆ, ಅಭಿಮಾನಿಗಳಿಗೆ ವಿಶೇಷವಾಗಿ ಚುಟುಕು ಪುಸ್ತಕ ಪ್ರಕಾಶಕರನ್ನು ದಿಗ್ಭ್ರಮೆಗೊಳಿಸುವಂತೆ... ದಿಗ್ಮೂಢರನ್ನಾಗಿ ಮಾಡಿದೆ. ಚುಟುಕು ಸಾಹಿತ್ಯ ಬದುಕಿಗೆ ಲಾಲಿತ್ಯ ಘೋಷಣೆಯೊಂದಿಗೆ ಚುಟುಕು ಸಾಹಿತಿಗಳು ರಾಜ್ಯದ 31 ಜಿಲ್ಲೆಗಳಲ್ಲಿಯೂ ಚುಟುಕು ಸಾಹಿತ್ಯದ ಬಗ್ಗೆ ಅಕ್ಕರೆ, ಆಸಕ್ತಿ, ಅಭಿಮಾನ ಮೂಡುವಂತೆ ಚುಟುಕು ಸಾಹಿತಿಗಳು ಶ್ರಮಿಸುತ್ತಿದ್ದಾರೆ. ಆಯ್ಕೆ ಸಮಿತಿಯವರು ಗಜಲ್‌ಗಳನ್ನು ಆಯ್ಕೆ ಮಾಡಿರುತ್ತಾರೆ. ಚುಟುಕು ಸಾಹಿತ್ಯವನ್ನು ತಿರಸ್ಕರಿಸಿರುತ್ತಾರೆ. ಇದು ಪುಸ್ತಕ ಆಯ್ಕೆ ಸಮಿತಿಯವರ ಮಲತಾಯಿ ಧೋರಣೆಯಾಗಿದೆ. 78ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಅಧ್ಯಕ್ಷರಾದ ಚುಟುಕು ರತ್ನ ಡಾ.ಸಿಪಿಕೆಯವರು ಚುಟುಕು ಮನುಕುಲದ ಆದಿಕಾವ್ಯ ಎಂದು ವರ್ಣಿಸಿ ಗ್ರಂಥ ರಚಿಸಿದ್ದಾರೆ.

ಪದ್ಮಶ್ರೀ ಡಾ. ದೇಜಗೌ, ಡಾ.ಚನ್ನವೀರ ಕಣವಿ, ಡಾ.ಚಿದಾನಂದಗೌಡ, ನ್ಯಾಯಮೂರ್ತಿ ಜಿನದತ್ತ ದೇಸಾಯಿ, ಡಾ. ಅರವಿಂದ ಮಾಲಗತ್ತಿ, ಪ್ರೊ.ದೊಡ್ಡರಂಗೇಗೌಡ ಮುಂತಾದ ಸಾಹಿತ್ಯ ಕ್ಷೇತ್ರದ ದಿಗ್ಗಜರು ಚುಟುಕು ಸಾಹಿತ್ಯ ರಚನೆ ಮಾಡುವುದರ ಮೂಲಕ ಚುಟುಕು ಸಾಹಿತ್ಯದ ಮಹತ್ವವನ್ನು ಮನೆ ಮನಗಳಲ್ಲಿ ಚಿರಸ್ಥಾಯಿಯಾಗಿ ಉಳಿಸಿದ್ದಾರೆ. ಗ್ರಂಥಾಲಯ ಪುಸ್ತಕ ಆಯ್ಕೆ ಸಮಿತಿಯವರು ಮಲತಾಯಿ ಧೋರಣೆ ಬಿಟ್ಟು ಆಗಿರುವ ಲೋಪವನ್ನು ಸರಿಪಡಿಸುತ್ತಾರೆ ಎಂದು ನಂಬಿರುತ್ತೇನೆ.

–ಅಹಲ್ಯಾ ಸಿ. ನಾ.ಚಂದ್ರ, ಚುಟುಕು ಸಾಹಿತಿ, ಮೈಸೂರು

ಕನ್ನಡಿಗರ ಔದಾರ್ಯವೇ ಕಾರಣವಲ್ಲವೇ?

ಮಾನ್ಯರೆ,

ಈಗ ಒಂದು ತಿಂಗಳ ಹಿಂದೆ ಮೈಸೂರಿನ ಒಂದು ರಸ್ತೆಯಲ್ಲಿ ರಿಪೇರಿ ಕೆಲಸ ಹಾಗೂ ಡಾಂಬರೀಕರಣ ನಡೆದಿತ್ತು. ಅಲ್ಲಿ ಕೆಲಸ ಮಾಡುತ್ತಿದ್ದ ಕೆಲಸಗಾರನನ್ನು ಕುರಿತು ನಿಮ್ಮ ಊರು ಯಾವುದು ಎಂದು ಪ್ರಶ್ನಿಸಿದೆ. ಅದಕ್ಕವನು ತಮಿಳುನಾಡು ಎಂದು ಉತ್ತರಿಸಿದ. ನಂತರ ತಮಿಳುನಾಡಿನಲ್ಲಿ ನಿಮ್ಮ ಊರು ಯಾವುದು ಎಂದು ಮತ್ತೆ ಪ್ರಶ್ನಿಸಿದೆ. ಅದಕ್ಕವನು ರತ್ನಗಿರಿ ಎಂದು ಹೇಳಿದ. ನಾನು ಏನೇ ಕೇಳಿದರೂ ತಮಿಳು ಭಾಷೆಯಲ್ಲಿಯೇ ಅವನು ಉತ್ತರಿಸುತ್ತಿದ್ದ. ಏಕೆ ನಿನಗೆ ಕನ್ನಡ ಭಾಷೆ ಬರುವುದಿಲ್ಲವೆ ಎಂದು ಕೇಳಿದ್ದಕ್ಕೆ ಇಲ್ಲ ಎಂದು ಮತ್ತೆ ತಮಿಳಿನಲ್ಲಿಯೇ ಉತ್ತರಿಸಿದ. ಎಷ್ಟು ವರ್ಷಗಳಿಂದ ಈ ರಾಜ್ಯದಲ್ಲಿ ವಾಸ ಮಾಡುತ್ತಿದ್ದೀರಾ? ಎಂದು ಪ್ರಶ್ನಿಸಿದ್ದಕ್ಕೆ ಐದು ವರ್ಷಗಳು ಬೆಂಗಳೂರಿನ ಅಲಸೂರು ಪೇಟೆಯಲ್ಲಿ ವಾಸವಾಗಿದ್ದೆವು. ನಂತರ ಐದು ವರ್ಷಗಳ ಹಿಂದೆ ಈ ಊರಿಗೆ ಬಂದೆವು ಎಂದು ಮತ್ತೆ ತಮಿಳು ಭಾಷೆಯಲ್ಲಿ ಉತ್ತರಿಸಿದ. ನನಗೆ ತಮಿಳು ಭಾಷೆ ಬರದೇ ಇದ್ದರೂ ಅವನು ಮಾಡುತ್ತಿದ್ದ ಕೈ, ಬಾಯಿ ಸಜ್ಞೆಗಳಿಂದ ಅವನು ಹೇಳುತ್ತಿದ್ದುದನ್ನು ಅರ್ಥ ಮಾಡಿಕೊಳ್ಳುತ್ತಿದ್ದೆ. ಆದರೂ ಅವನು ಹೇಳುತ್ತಿರುವುದು ನನಗೆ ಸರಿಯಾಗಿ ಅರ್ಥವಾಗುತ್ತಿರಲಿಲ್ಲ. ಈ ಕೆಲಸ ಮಾಡಿಸುತ್ತಾ ಇರುವವರ ಮೇಸ್ತ್ರಿಯ ಹೆಸರೇನು ಎಂದು ಕೇಳಿದ್ದಕ್ಕೆ ಪೊನ್ನುಸ್ವಾಮಿ ಎಂದು ಉತ್ತರಿಸಿದ. ನಾನು ಏನು ಕೇಳಿದರೂ ಅದು ಅವನಿಗೆ ಅರ್ಥವಾಗುತ್ತಿತ್ತು. ಆದರೆ ಅವನು ತಮಿಳಿನಲ್ಲಿಯೇ ಉತ್ತರಿಸುತ್ತಿದ್ದ. ನಿನಗೆ ಇಲ್ಲಿ ವ್ಯವಹಾರ ಮಾಡಲು ಕಷ್ಟವಾಗುವುದಿಲ್ಲವೇ ಎಂದು ಕೇಳಿದ್ದಕ್ಕೆ ಕೊಂಚಮೂ ಇಲ್ಲೈ ಎಂದು ಉತ್ತರಿಸಿದ. ನಿನಗೆ ಇಲ್ಲಿ ವ್ಯವಹರಿಸಲು ಭಾಷೆಯ ಸಮಸ್ಯೆ ಆಗುತ್ತಿಲ್ಲವೇ ಎಂದು ಕೇಳಿದ್ದಕ್ಕೆ ಇಲ್ಲ ನಾನು ಏನೇ ಕೇಳಿದರೂ ಅವರೂ ಸಹ ತಮಿಳಿನಲ್ಲಿಯೇ ಉತ್ತರ ಕೊಡುತ್ತಾರೆ. ಹಾಗಾಗಿ ನನಗೆ ಯಾವುದೇ ತೊಂದರೆ ಇಲ್ಲ ಎಂದು ಉತ್ತರಿಸಿದನು.

ಕನ್ನಡ ನಾಡಿನ ಕಾಫಿ ತೋಟಗಳಲ್ಲಿ, ಟೀ ತೋಟಗಳಲ್ಲಿ, ರಸ್ತೆ ಕೆಲಸಗಳಲ್ಲಿ, ಮನೆ ಕೆಲಸಗಳಲ್ಲಿ ಲಕ್ಷಾಂತರ ತಮಿಳಿಗರು ಕೆಲಸ ಮಾಡುತ್ತಾ ತಮ್ಮ ಜೀವನವನ್ನು ಕಂಡುಕೊಂಡಿದ್ದಾರೆ. ನೋಡಿದಿರಾ ಹೇಗಿದೆ. ಈ ತಮಿಳರಿಗೆ ಕೆಲಸ ಮಾಡಲು, ಹೊಟ್ಟೆ ಬಟ್ಟೆ ಹೊರೆಯಲು, ವಾಸಿಸಲು ಮನೆ ಇಲ್ಲಿಯದು. ಆದರೂ ಅವರು ಕನ್ನಡ ನಾಡಿಗೆ ಬಂದು ಈಗಾಗಲೇ ಸುಮಾರು ಹತ್ತು ವರ್ಷಗಳಷ್ಟು ಕಳೆದಿದ್ದರೂ ಅವರು ಕನ್ನಡ ಭಾಷೆಯನ್ನು ಕಲಿಯುವ ಮನಸ್ಸು ಮಾಡಿಲ್ಲ. ಇದಕ್ಕೆ ಯಾರು ಹೊಣೆ? ಕನ್ನಡಿಗರ ಔದಾರ್ಯವೇ ಇದಕ್ಕೆ ಬಹು ಮುಖ್ಯ ಕಾರಣ ಎಂದು ಹೇಳಬಹುದು.

–ಬೇಲೂರು ದ.ಶಂ. ಪ್ರಕಾಶ್, ಮೈಸೂರು



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ: 94482 08746/ 97421 79000

ಚಿಂತನೆ

ಬಯಸಿದಂತೆ ನಮ್ಮ ಬದುಕು...


ಇಂದು ನಾವು ಹೇಗೆ ಬದುಕಬೇಕು ಎಂಬುದರ ಬಗ್ಗೆ ನಮಗೆ ನಿರ್ದಿಷ್ಟವಾದ ಕಲ್ಪನೆಯೇ ಇದ್ದ ಹಾಗೆ ಕಂಡು ಬರುವುದಿಲ್ಲ. ನಿಮ್ಮ ಜೀವನದ ಉದ್ದೇಶ ಏನು ಎಂದು ಕೇಳಿದರೆ ತಡಬಡಿಸುವಂತಾಗುತ್ತಿದೆ. ಹಣ ಗಳಿಸಬೇಕು, ಆರಾಮವಾಗಿರಬೇಕು ಎಂಬುದು ಅನೇಕರ ಜೀವನದ ಉದ್ದೇಶವಾಗಿರುತ್ತದೆ. ಆದರೆ ಆರಾಮ ಎಂದರೆ ಸುಮ್ಮನೆ ತಿಂದು ಮಲಗುವುದೇ? ಎಂದು ಕೇಳಿದಾಗಲೂ ನಿರ್ದಿಷ್ಟ ಉತ್ತರ ಹೊಳೆಯುವುದಿಲ್ಲ. ನಮ್ಮಲ್ಲಿ ಆಧುನಿಕತೆ ಜಾಸ್ತಿಯಾದಂತೆ ನಮ್ಮ ಬೇಕು ಬೇಡಗಳೂ ಬದಲಾಗುತ್ತಿವೆ.

ಹಿಂದೆ ಗ್ರಾಮೀಣ ಭಾಗದ ಹೆಂಗಸರನ್ನು ನಿಮ್ಮ ಜೀವನದ ಉದ್ದೇಶ ಏನು ಎಂದು ಕೇಳಿದರೆ ಮನೆಯ ಯಜಮಾನರು (ಈಗ ಹಾಗೆ ಕರೆಯುವವರ ಸಂಖ್ಯೆ ಕಡಿಮೆಯಾಗುತ್ತಿದೆ) ಹಾಗೂ ಮಕ್ಕಳ ಯೋಗಕ್ಷೇಮವೇ ಜೀವನದ ಪರಮ ಗುರಿ, ಗಂಡಸರು ಹೊರಗೆ ದುಡಿಯುತ್ತಾರೆ, ನಾವು ಮನೆಯಲ್ಲಿರುವ ಹೆಂಗಸರು ಅವರ ಬೇಕು ಬೇಡಗಳನ್ನು ಅರ್ಥ ಮಾಡಿಕೊಂಡು ಅವುಗಳನ್ನು ಒದಗಿಸಿ ಎಲ್ಲರೂ ಸಂತೋಷವಾಗಿರುವಂತೆ ನೋಡಿಕೊಳ್ಳುವುದೇ ನಮ್ಮ ಗುರಿ ಎಂದು ಹೇಳುತ್ತಿದ್ದರು. ಇದಕ್ಕಾಗಿ ತಮ್ಮ ಇಡೀ ದಿನವನ್ನು ವಿನಿಯೋಗಿಸುತ್ತಿದ್ದರು. ನೀರು ಸೇದುವುದು, ಮನೆ ಶುಚಿಗೊಳಿಸುವುದು, ಕುಟ್ಟುವುದು, ಬೀಸುವುದು, ಊಟ–ತಿಂಡಿ ಮಾಡುವುದು, ಅದನ್ನು ಮನೆಯವರಿಗೆ ಬಡಿಸಿ ಅವರು ಸಂತೋಷದಿಂದ ಊಟ ಮಾಡಿದರೆ ತಮ್ಮ ದುಡಿಮೆ ಸಾರ್ಥಕ ಎಂದು ಭಾವಿಸುತ್ತಿದ್ದರು.

ಹಾಗೆ ನೋಡಿದರೆ ಈ ಎಲ್ಲಾ ಕೆಲಸಗಳನ್ನು ಅವರು ಮಾಡುವಾಗ ಸಾಕಷ್ಟು ದೈಹಿಕ ಶ್ರಮ ವಹಿಸುತ್ತಿದ್ದರು. ಇದು ಅವರ ಆರೋಗ್ಯದ ಮೂಲವೂ ಆಗಿತ್ತು. ಇಂದು ಮನೆಯ ಹೆಂಗಸು, ಹೊರಗೆ ದುಡಿಯುವುದಿಲ್ಲ ಎಂದರೆ ಆಕೆಗೆ ಏನೂ ಕೆಲಸವಿಲ್ಲ ಎಂದೇ ಭಾವಿಸಲಾಗುತ್ತದೆ. ಇನ್ನು ನಗರ ಪ್ರದೇಶದ ಗೃಹಿಣಿಯರು ತಾವು ಮನೆಯಲ್ಲಿರುತ್ತೇವೆ, ಯಾವ ಕೆಲಸಕ್ಕೂ ಹೋಗುವುದಿಲ್ಲ, ಹೌಸ್‌ವೈಫ್ ಎಂದು ಹೇಳಿಕೊಳ್ಳಲು ಸಂಕೋಚಪಡುತ್ತಾರೆ. ಆದರೆ ಗೃಹಿಣಿಯ ಕೆಲಸ ಅಷ್ಟು ಸುಲಭವಾದುದಲ್ಲ ಎಂಬುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಅದಕ್ಕೇ ಹೇಳುವುದು ಇತರೆ ಎಲ್ಲಾ ಕೆಲಸಗಳಿಗೆ ಒಂದು ದಿನದ ರಜೆ ಇರುತ್ತದೆ, ಆದರೆ ಅಡುಗೆ ಮನೆಗೆ ಎಂದೂ ರಜೆ ಇಲ್ಲ ಎಂದು. ಇಂತಹ ಕೆಲಸವನ್ನು ಗೃಹಿಣಿಯರು ಮಾಡುವುದರಿಂದ ಅವರು ತಾವು ಗೃಹಿಣಿ ಎಂದು ಹೇಳಿಕೊಳ್ಳಲು ಯಾವ ಸಂಕೋಚ ಪಡಬೇಕಾಗಿಲ್ಲ. ಗೃಹಿಣಿಯ ದುಡಿಮೆ ಆ ಕುಟುಂಬದ ಸದಸ್ಯರ ಆರೋಗ್ಯಕ್ಕೆ ಹಿಡಿದ ಕೈಗನ್ನಡಿಯಾಗಿರುತ್ತದೆ. ಆಕೆ ಹೆಚ್ಚು ಕೆಲಸ ಮಾಡಿದಷ್ಟೂ ಆ ಮನೆಯವರು ಆರೋಗ್ಯ–ಸಂತೋಷದಿಂದಿರುತ್ತಾರೆ. ಆದ್ದರಿಂದ ಕೀಳರಿಮೆ ಸಲ್ಲದು.

ಇಂದು ಆಧುನಿಕತೆಯ ಹೆಸರಿನಲ್ಲಿ ನಾವು ಮಾಡುವ ಕೆಲಸಗಳನ್ನು ಕಡಿಮೆ ಮಾಡಿಕೊಂಡಿದ್ದೇವೆ. ಕುಟ್ಟುವುದು, ಬೀಸುವುದು ಇಂದು ನಮಗೆ ಗೊತ್ತೇ ಇಲ್ಲ. ಅಲ್ಲದೇ ಅದಕ್ಕಾಗಿ ಏಕೆ ಅಷ್ಟೊಂದು ಕಷ್ಟ ಪಡಬೇಕು, ಅಂಗಡಿಯಲ್ಲಿ ಕುಟ್ಟಿದ, ಬೀಸಿದ ಪದಾರ್ಥಗಳು ದೊರಕುತ್ತವೆ, ದುಡ್ಡುಕೊಟ್ಟು ಖರೀದಿಸಿದರಾಯಿತು! ಇದರ ಪರಿಣಾಮ ಏನಾಗುತ್ತಿದೆ ಎಂದರೆ ಮನೆಯ ಗೃಹಿಣಿ ಬೇಗ ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ. ಇದು ಕೇವಲ ಹೆಂಗಸರಿಗೆ ಮಾತ್ರ ಅನ್ವಯವಾಗುವ ಮಾತು ಎಂದೇನಲ್ಲ. ಪುರುಷರೂ ಸಹಾ ಇಂದು ಕಷ್ಟ ಪಡಲು ತಯಾರಾಗಿಲ್ಲ. ಒಂದಷ್ಟು ದೂರ ಹೋಗಬೇಕೆಂದರೂ ವಾಹನ ಬೇಕು ಎಂಬಂತಾಗಿದೆ. ದೈಹಿಕ ಶ್ರಮವಿಲ್ಲದೆ, ಪೌಷ್ಟಿಕ ಆಹಾರವಿಲ್ಲದೆ ಆರೋಗ್ಯ ಚೆನ್ನಾಗಿರಲು ಹೇಗೆ ಸಾಧ್ಯ?

ಹಿಂದಿನವರು ಶತಾಯುಷಿಗಳಾಗಿರುತ್ತಿದ್ದರು. ಹಿರಿಯರು ಕನ್ನಡಕ ಹಾಕುತ್ತಿರಲಿಲ್ಲ, ಕಣ್ಣು, ಕಿವಿ ಚೆನ್ನಾಗಿರುತ್ತಿತ್ತು, ನಡೆಯುವಾಗಲೂ ನೇರವಾಗಿ ನಡೆಯುತ್ತಿದ್ದರು. ಆದರೆ ಇಂದು ಪ್ರಾಥಮಿಕ ಶಾಲೆಯ ಮಕ್ಕಳೇ ಕನ್ನಡಕ ಹಾಕುವಂತಾಗಿದೆ, ಅನೇಕ ಮಕ್ಕಳು ಶ್ರವಣ ಸಾಮಗ್ರಿಗಳನ್ನು ಬಳಸುವುದನ್ನು ಕಾಣುತ್ತೇವೆ. ಇದಕ್ಕೆ ಕಾರಣ ಸ್ಪಷ್ಟ, ಹಿರಿಯರು ಶ್ರಮಪಡದಿರುವುದನ್ನು ಮಕ್ಕಳು ಅನುಸರಿಸುತ್ತಿದ್ದಾರೆ, ಇಬ್ಬರೂ ಬೇಗ ಮುದುಕರಾಗಲು ಸ್ಪರ್ಧೆ ನಡೆಸುವಂತಾಗಿದೆ. ಮೊದಲಿನಿಂದಲೂ ನಮ್ಮಲ್ಲಿ ಹೇಳಿಕೊಂಡು ಬರುತ್ತಿರುವುದು ದೇಹವನ್ನು ದಂಡಿಸಿದಷ್ಟೂ ಅದು ಗಟ್ಟಿಯಾಗುತ್ತದೆ, ನಾವು ಹೇಳಿದಂತೆ ಕೇಳುತ್ತದೆ. ಈ ದೇಹ ಇರುವುದು ಸುಖವಾಗಿ ಪೋಷಿಸಲು ಅಲ್ಲ, ಅದು ನಾವು ಹೇಳಿದಂತೆ ಕೇಳಬೇಕೇ ಹೊರತು, ಅದು ಹೇಳಿದಂತೆ ನಾವು ಕೇಳಬಾರದು ಎಂದು. ಈಗಲೂ ಆರೋಗ್ಯವಂತ ಹಿರಿಯರನ್ನು ಕೇಳಿದಾಗ ಅವರು ತಾವು ಶ್ರಮವಹಿಸಿ ದುಡಿಯುತ್ತಿದ್ದುದನ್ನೇ ಹೇಳುತ್ತಾರೆ. ಇದು ನಮಗೆ ಅರ್ಥವಾಗಬೇಕು. ದೇಹ ದಂಡನೆ ದೇಹಕ್ಕೂ ತೊಂದರೆ ನೀಡುವುದಿಲ್ಲ, ಬದಲಾಗಿ ಅದು ಗಟ್ಟಿಯಾಗುತ್ತಾ ಹೋಗುತ್ತದೆ. ಈಗಲೂ ವಾಹನ ಹತ್ತದೆ ನಾಲ್ಕಾರು ಕಿಲೋ ಮೀಟರ್ ನಡೆದು ಹೋಗುವವರನ್ನು ನಾವು ಕಾಣುತ್ತೇವೆ. ಅದರಲ್ಲೂ ಕೆಲವರು ಬರಿಗಾಲಲ್ಲಿ ನಡೆಯುತ್ತಾರೆ. ಅವರ ಆರೋಗ್ಯವನ್ನು ನಾವು ಗಮನಿಸಬೇಕು.



> ಇಂದು ಆಧುನಿಕತೆಯ ಹೆಸರಿನಲ್ಲಿ ನಾವು ಮಾಡುವ ಕೆಲಸಗಳನ್ನು ಕಡಿಮೆ ಮಾಡಿಕೊಂಡಿದ್ದೇವೆ. ಕುಟ್ಟುವುದು, ಬೀಸುವುದು ಇಂದು ನಮಗೆ ಗೊತ್ತೇ ಇಲ್ಲ. ಅಲ್ಲದೇ ಅದಕ್ಕಾಗಿ ಏಕೆ ಅಷ್ಟೊಂದು ಕಷ್ಟ ಪಡಬೇಕು, ಅಂಗಡಿಯಲ್ಲಿ ಕುಟ್ಟಿದ, ಬೀಸಿದ ಪದಾರ್ಥಗಳು ದೊರಕುತ್ತವೆ, ದುಡ್ಡುಕೊಟ್ಟು ಖರೀದಿಸಿದರಾಯಿತು! ಇದರ ಪರಿಣಾಮ ಏನಾಗುತ್ತಿದೆ ಎಂದರೆ ಮನೆಯ ಗೃಹಿಣಿ ಬೇಗ ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ. ಇದು ಕೇವಲ ಹೆಂಗಸರಿಗೆ ಮಾತ್ರ ಅನ್ವಯವಾಗುವ ಮಾತು ಎಂದೇನಲ್ಲ. ಪುರುಷರೂ ಸಹಾ ಇಂದು ಕಷ್ಟ ಪಡಲು ತಯಾರಾಗಿಲ್ಲ. ಒಂದಷ್ಟು ದೂರ ಹೋಗಬೇಕೆಂದರೂ ವಾಹನ ಬೇಕು ಎಂಬಂತಾಗಿದೆ. ದೈಹಿಕ ಶ್ರಮವಿಲ್ಲದೆ, ಪೌಷ್ಟಿಕ ಆಹಾರವಿಲ್ಲದೆ ಆರೋಗ್ಯ ಚೆನ್ನಾಗಿರಲು ಹೇಗೆ ಸಾಧ್ಯ?

ಇತ್ತೀಚೆಗೆ ಪ್ರಧಾನಮಂತ್ರಿಯವರು ಒಬ್ಬರನ್ನು ಭೇಟಿಯಾಗಿದ್ದ ಚಿತ್ರ ಪ್ರಕಟವಾಗಿತ್ತು. ಅವರು ಅತ್ಯಂತ ಸಾಮಾನ್ಯರಂತೆ ಕಾಣುತ್ತಿದ್ದರು, ಕಾಲಿನಲ್ಲಿ ಚಪ್ಪಲಿಯೂ ಇರಲಿಲ್ಲ. ಈ ಮನುಷ್ಯ ಅದು ಹೇಗೆ ಪ್ರಧಾನಿಯವರನ್ನು ಅಷ್ಟು ಸುಲಭವಾಗಿ ಭೇಟಿಯಾದರು? ಎಂಬ ಪ್ರಶ್ನೆಗೆ ಅಲ್ಲೇ ಉತ್ತರವಿತ್ತು. ಅವರು ಈ ಹಿಂದೆ ದೊಡ್ಡ ಅಧಿಕಾರಿಯಾಗಿದ್ದರು. ಈಗ ಅತ್ಯಂತ ಸರಳ ಜೀವನ ನಡೆಸುತ್ತಾರೆ. ಅವರಿಗೆ ಜೀವನ ಹೇಗೆ ನಡೆಸಬೇಕು ಎಂಬುದು ತಿಳಿದಿದೆ. ಅವರು ಮೇಧಾವಿಗಳು, ಹಾಗಾಗಿ ಪ್ರಧಾನಿಯವರು ಅವರನ್ನು ಆಗಾಗ್ಗೆ ಭೇಟಿಯಾಗಿ ಸಲಹೆ ಕೇಳುತ್ತಾರೆ ಎಂದು. ಅಂದರೆ ಜೀವನ ಎಂದರೆ ದೇಹಕ್ಕೆ ಸುಖಕೊಡುವುದೇ ಅಲ್ಲ ಎಂಬುದನ್ನು ಅವರು ಅರ್ಥ ಮಾಡಿಕೊಂಡಿದ್ದಾರೆ, ಅಲ್ಲದೆ ಸುಖವಾಗಿರಬೇಕು ಎಂದರೆ ದೇಹವನ್ನು ದಂಡಿಸಬೇಕು ಎಂದೂ ಅವರು ಅರಿತಿದ್ದಾರೆ ಎಂಬುದು ಕಂಡುಬರುತ್ತದೆ. ನಮ್ಮ ಮಾರುಕಟ್ಟೆಯ ಸುತ್ತಾ ಹಣ್ಣು, ಹೂವು ಮಾರುವವರನ್ನು ಗಮನಿಸಬೇಕು. ಅವರು ಇಡೀ ದಿನ ನಿಂತು ವ್ಯಾಪಾರ ಮಾಡುತ್ತಾರೆ. ಅವರನ್ನು ಬಿಸಿಲು, ಮಳೆ, ಚಳಿ ಯಾವುದೂ ಬಾಧಿಸುವುದಿಲ್ಲ. ಕಾರಣ ಅವರು ತಮ್ಮ ದೇಹವನ್ನು ದಂಡಿಸುತ್ತಾರೆ. ಆದ್ದರಿಂದ ಅವರ ದೇಹ ಅವರು ಹೇಳಿದಂತೆ ಕೇಳುತ್ತದೆ.

ಇದರ ಅರ್ಥ ನಾವೂ ಪಾದರಕ್ಷೆ ಇಲ್ಲದೆ ನಡೆಯಬೇಕು, ಬಿಸಿಲಿನಲ್ಲಿ ನಿಲ್ಲಬೇಕು ಎಂದಲ್ಲ. ದೇಹಕ್ಕೆ ಶ್ರಮ ನೀಡುವುದು ನಮ್ಮ ಅನುಕೂಲಕ್ಕಾಗಿಯೇ ಎಂದು ತಿಳಸಲು ಮಾತ್ರ. ಹಿಂದಿನವರ ಆರೋಗ್ಯದ ಗುಟ್ಟೂ ಇದೇ ಆಗಿತ್ತು. ಇತ್ತೀಚೆಗೆ ಭೇಟಿಯಾದ ಸುಮಾರು 80 ವರ್ಷ ವಯಸ್ಸಿನವರೊಬ್ಬರೊಡನೆ ಆರೋಗ್ಯದ ವಿಚಾರವಾಗಿ ಮಾತನಾಡುವ ಅವಕಾಶ ಸಿಕ್ಕಿತ್ತು. ಅವರು ಈಗಲೂ ನಿರೋಗಿಯಾಗಿದ್ದು ಅತ್ಯಂತ ಕ್ರಿಯಾಶೀಲರಾಗಿದ್ದಾರೆ. ಇದರ ಗುಟ್ಟೇನು ಎಂದಾಗ ಅವರು ಹೇಳಿದ್ದು, ಈ ಹಿಂದೆ ಅವರಿಗೆ ತೋಟವಿತ್ತು. ಅಲ್ಲಿ ಕೆಲಸಗಾರರನ್ನು ನಂಬದೆ ಇವರೇ ದುಡಿಯುತ್ತಿದ್ದರು. ಬೆಳಗ್ಗೆ 8 ಗಂಟೆಗೆ ಸೊಂಟ ಬಗ್ಗಿಸಿ ಕೆಲಸ ಆರಂಭಿಸಿದರೆ ಸೊಂಟ ಮೇಲೆತ್ತುತ್ತಿದ್ದುದು ಮಧ್ಯಾಹ್ನ 12 ಗಂಟೆಯ ನಂತರವೇ. ಸುಮಾರು ನಾಲ್ಕೈದು ಗಂಟೆಗಳು ಸೊಂಟವನ್ನು ಭೂಮಿಗೆ ಲಂಬವಾಗಿರಿಸಿ ಕೆಲಸ ಮಾಡುತ್ತಿದ್ದರು. ಅದು ತಮ್ಮ ಆರೋಗ್ಯದ ಗುಟ್ಟು ಎಂದಾಗ ಆಶ್ಚರ್ಯವಾಗುತ್ತದೆ. ಇಂದು ನಾವು ಆ ರೀತಿ ಬಾಗಿ, ಎಷ್ಟು ಹೊತ್ತು ಕೆಲಸ ಮಾಡುತ್ತೇವೆ? ಐವತ್ತು, ಅರವತ್ತು ವಯಸ್ಸಾದರೆ ದೇಹ ಬಾಗುವುದೇ ಕಷ್ಟ ಎಂಬಂತಾಗುತ್ತದೆ. ಇದಕ್ಕೆ ಮೇಲ್ಕಂಡವರು ಉದಾಹರಣೆಯಾಗುತ್ತಾರೆ.

ಇದು ಕೆಲಸ ಮಾಡುವುದಕ್ಕೆ, ದೇಹ ದಂಡಿಸುವುದಕ್ಕೆ ಸಂಬಂಧಿಸಿದ್ದು. ಅಂದರೆ ಶ್ರಮಕೊಟ್ಟಾಗ ದೇಹ ನಾವು ಹೇಳಿದಂತೆ ಕೇಳುತ್ತದೆ, ಆರೋಗ್ಯವಾಗಿರುತ್ತದೆ. ಇದು ಬಾಹ್ಯದ ವಿಚಾರವಾಯಿತು. ಇತ್ತೀಚೆಗೆ ಭೇಟಿಯಾದ ವೈದ್ಯರೊಬ್ಬರು ಹೇಳಿದ ಮಾತು ಮನನೀಯ. ಇಂದು ಖಾಯಿಲೆಗಳು ಬರುತ್ತಿರುವುದು ನಮ್ಮ ಹೆಚ್ಚಿದ ಮಾನಸಿಕ ಒತ್ತಡಗಳಿಂದಾಗಿ ಎಂದು ಅವರು ಹೇಳುತ್ತಾರೆ. ಇದು ಇಂದಿನ ಸಾಮಾನ್ಯ ಖಾಯಿಲೆ. ನಾವೆಲ್ಲಾ ಮಾನಸಿಕ ಒತ್ತಡದಿಂದ ಬಳಲುತ್ತಿದ್ದೇವೆ. ಈ ಬಳಲಾಟ ನಮಗೇ ಗೊತ್ತಿಲ್ಲದೆ ದೇಹದ ಆಂತರ್ಯದ ಶಕ್ತಿ ಕುಂದಿಸಿ, ಖಾಯಿಲೆಗಳಿಗೆ ಕಾರಣವಾಗುತ್ತಿದೆ. ಮಾನಸಿಕ ಒತ್ತಡವೂ ಅಷ್ಟೇ ನಾವೇ ತಂದುಕೊಳ್ಳುತ್ತಿರುವುದು. ನಮಗೆ ಬೇಡದ, ನಮಗೆ ಸಂಬಂಧಿಸದ ಹಾಗೂ ನಾವು ಪರಿಹಾರ ಮಾಡಲಾಗದಂತಹ ವಿಷಯಗಳಲ್ಲಿ ಇಂದು ನಾವು ಮಾನಸಿಕ ಒತ್ತಡಕ್ಕೆ ಒಳಗಾಗುತ್ತಿದ್ದೇವೆ. ನಾನು ಬೇಗ ಹೋಗಬೇಕು ಎಂಬುದು ಮಾನಸಿಕ ಒತ್ತಡ. ಇದರ ನಿವಾರಣೆ ಎಂದರೆ ಬೇಗ ಹೋಗಬೇಕೇ ಹೊರತು ಯೋಚನೆ ಮಾಡುವುದಲ್ಲ. ಇಂದು ನಮ್ಮಲ್ಲಿ ವಾಹನಗಳಿವೆ. ನಾವು ಹೋಗಬೇಕಾದ ಸ್ಥಳದ ದೂರ ಎಷ್ಟು, ಹೋಗಲು ಎಷ್ಟು ಸಮಯ ಬೇಕಾಗುತ್ತದೆ ಎಂಬುದೂ ನಮಗೆ ಗೊತ್ತಿರುತ್ತದೆ. ಹಾಗಿದ್ದಾಗ ಮುಂಚೆಯೇ ಹೊರಡುವುದು, ಬೇಗ ತಲುಪುವ ವ್ಯವಸ್ಥೆ ಮಾಡಿಕೊಂಡಾಗ ಈ ಒತ್ತಡದಿಂದ ದೂರವಾಗಬಹುದು.

ಮಕ್ಕಳು ಶಾಲಾ ಪರೀಕ್ಷೆ ಸಮೀಪಿಸಿದಾಗ ಒತ್ತಡಕ್ಕೆ ಒಳಗಾಗುತ್ತಾರೆ. ಪರೀಕ್ಷೆ ಹತ್ತಿರವಾದಂತೆ ಆತಂಕಕ್ಕೀಡಾಗುತ್ತಾರೆ. ನಾನು ಏನೂ ಓದಿಲ್ಲ, ನಾನು ಓದಿದ್ದು ಸಾಕಾಗುತ್ತಿಲ್ಲ, ನನ್ನ ಸಹಪಾಠಿಗಳು ನನಗಿಂತ ಚೆನ್ನಾಗಿ ಪರೀಕ್ಷೆ ಬರೆದು ನನಗಿಂತ ಹೆಚ್ಚು ಅಂಕ ಪಡೆದುಕೊಂಡುಬಿಡುತ್ತಾರೆ ಎಂಬ ಆತಂಕ ಅವರ ಆರೋಗ್ಯದಲ್ಲಿ ಏರುಪೇರಾಗುವಂತೆ ಮಾಡುತ್ತದೆ. ಕೊನೆಗೆ ಪರೀಕ್ಷಾ ದಿನ ಜ್ವರ ಬಂದು ಪರೀಕ್ಷೆಗೆ ಹೋಗಲಾಗದ ಸ್ಥಿತಿ ಆಗುತ್ತದೆ, ಬಲವಂತವಾಗಿ ಹೋದರೂ ನೆನಪು ಕೈಕೊಡುತ್ತದೆ. ಪರೀಕ್ಷೆ ಸರಿಯಾಗಿ ಎದುರಿಸಲಾಗುವುದಿಲ್ಲ. ಇದನ್ನು ಮನೋವ್ಯಾಧಿ ಎಂದು ಹೇಳಬಹುದು. ಮೊದಲಿನಿಂದಲೂ ಓದನ್ನು ಶಿಸ್ತುಬದ್ಧವಾಗಿರಿಸಿಕೊಂಡರೆ ಇಂತಹ ಸಮಸ್ಯೆ ಬರುವುದಿಲ್ಲ. ನಮ್ಮ ಆರೋಗ್ಯ ಹದಗೆಡಲು ನಮ್ಮ ಮಾನಸಿಕ ಒತ್ತಡವೇ ಕಾರಣ. ಇದಕ್ಕೆ ಬಾಹ್ಯ ಕಾರಣಗಳಿಲ್ಲ, ಕಾರಣ ನಮ್ಮ ಅಂತರ್ಯವೇ ಆಗಿರುತ್ತದೆ.

ಅದೇ ರೀತಿ ಪಕ್ಕದ ಮನೆಯವರು, ನನ್ನ ಸಹೋದ್ಯೋಗಿಗಳು ನಮಗಿಂತ ಚೆನ್ನಾಗಿದ್ದಾರೆ, ಅವರು ಶ್ರೀಮಂತರು, ಬೇಕಿದ್ದೆಲ್ಲಾ ಕೊಳ್ಳುತ್ತಾರೆ, ನಾನು ಹಾಗಿಲ್ಲ ಎಂಬುದು ಮತ್ತೊಂದು ಮಾನಸಿಕ ವ್ಯಾಕುಲತೆ. ಇದಕ್ಕೆ ಪರಿಹಾರ ಸಿಗಬಹುದೇ? ನಾನೂ ಅವರಂತಾಗಲು ದುಡಿಯುತ್ತೇನೆ ಎಂಬ ಮನೋಭಾವ ಇಂತಹುದಕ್ಕೆ ಪರಿಹಾರ. ಇಂತಹ ಒತ್ತಡದವರಿಗೆ ಬೇಗ ರಕ್ತದ ಒತ್ತಡದ ಖಾಯಿಲೆ ಬರುತ್ತದೆ. ಖಾಯಿಲೆ ನಾವೇ ತರಿಸಿಕೊಳ್ಳುತ್ತೇವೆ. ಅದನ್ನು ಪರಿಹರಿಸಲು ವೆಚ್ಚ ಮಾಡುತ್ತೇವೆ, ಹಣ ಖರ್ಚಾಯಿತು ಎಂದು ಮತ್ತಷ್ಟು ಮನೋವ್ಯಾಕುಲತೆ ಬೆಳೆಸಿಕೊಂಡು ಖಾಯಿಲೆ ಮತ್ತಷ್ಟು ಹೆಚ್ಚು ಮಾಡಿಕೊಳ್ಳುತ್ತೇವೆ. ವೈದ್ಯರು ಹೇಳುವಂತೆ ಖಾಯಿಲೆಗಳು ಪರಿಹಾರವಾಗಲು ನಾವು ನೀಡುವ ಔಷಧಿ ಕೇವಲ ಶೇಕಡ 30 ರಷ್ಟು ಮಾತ್ರ ಕೆಲಸ ಮಾಡುತ್ತದೆ. ರೋಗಿ ಮನೋವ್ಯಾಕುಲದಿಂದ ಹೊರಬಂದರೆ ಅವನು ಬೇಗ ಗುಣಮುಖನಾಗುತ್ತಾನೆ. ಮನೋರೋಗಕ್ಕೆ ನಮ್ಮಲ್ಲೂ ಮದ್ದಿಲ್ಲ ಎನ್ನುತ್ತಾರೆ ಅವರು. ಸರಿಯಾದ ಆಹಾರ, ಹಣ್ಣುಹಂಪಲು, ತರಕಾರಿಗಳ ಸೇವನೆ ಹಾಗೂ ಮಾನಸಿಕ ಖಿನ್ನತೆಯಿಂದ ಹೊರಬರುವುದು ಖಾಯಿಲೆಗೆ ಪರಿಹಾರವಾಗುತ್ತದೆ. ಔಷಧಿಯಿಂದಲೇ ಎಲ್ಲದಕ್ಕೂ ಪರಿಹಾರ ದೊರಕುವುದಿಲ್ಲ.

ನಮಗೆ ಯಾವುದರಿಂದ ನೆಮ್ಮದಿ ದೊರಕುತ್ತದೆ ಎಂಬುದನ್ನು ನಾವೇ ಕಂಡುಕೊಳ್ಳಬೇಕು. ನಮಗೆ ದೇವಸ್ಥಾನಕ್ಕೆ ಹೋಗುವುದರಿಂದ ನೆಮ್ಮದಿ ಸಿಗುತ್ತದೆ ಎಂದರೆ ದೇವಸ್ಥಾನಕ್ಕೆ ಆಗಾಗ್ಗೆ ಹೋಗಬೇಕು, ನನಗೆ ಸ್ನೇಹಿತರೊಡನಿದ್ದರೆ ಸಂತೋಷ ಸಿಗುತ್ತದೆ ಎಂದರೆ ಅಂತಹವರ ಒಡನಾಟ ಜಾಸ್ತಿ ಮಾಡಿಕೊಳ್ಳಬೇಕು, ನನಗೆ ಪ್ರವಾಸ ಹೋಗುವುದು ಇಷ್ಟ ಎಂದಾದರೆ ಪ್ರವಾಸ ಹೋಗಬೇಕು. ಇವೆಲ್ಲಾ ನಮಗೆ ಮಾನಸಿಕವಾಗಿ ಶಕ್ತಿ ನೀಡುತ್ತದೆ ಎಂದಾದರೆ ಅದರಿಂದ ನಮ್ಮ ಆರೋಗ್ಯವನ್ನೂ ಸರಿಪಡಿಸಿಕೊಳ್ಳಬಹುದು. ನಾನು ಯಾರು, ನನ್ನ ಸ್ಥಿತಿ ಏನು, ನನ್ನ ಜೀವನ ಹೇಗಿರಬೇಕು ಎಂಬುದನ್ನು ನಾವೇ ಅರ್ಥ ಮಾಡಿಕೊಂಡು ಅದರಂತೆ ನಡೆಯಬೇಕು. ನಮ್ಮ ಬದುಕು ನಮಗಾಗಿ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು.

ಕಣ್ಮನ ಸೆಳೆಯುವ ಲೋಟಸ್ ಲಿಲಿಸ್ ಪ್ರದರ್ಶನ











ಮೈಸೂರಿನ ಬೋಗಾದಿಯಲ್ಲಿರುವ ಧ್ವನ್ಯಾಲೋಕದಲ್ಲಿ ಲೋಟಸ್, ಲಿಲ್ಲಿಸ್ ಪ್ರದರ್ಶನದಲ್ಲಿ ಕಣ್ಮನ ಸೆಳೆಯುತ್ತಿರುವ ಲೋಟಸ್ ಗಿಡಗಳು.

ಮೈಸೂರು, ಅ.18(ಎಂಟಿವೈ)– ಮೈಸೂರಿನ ಬೋಗಾದಿ ರಸ್ತೆಯಲ್ಲಿರುವ ಧ್ವನ್ಯಾಲೋಕದಲ್ಲಿ ಲೋಟಸ್, ಲಿಲ್ಲಿಸ್ ಪ್ರದರ್ಶನ ಆಯೋಜಿಸಲಾಗಿದ್ದು, ನೋಡುಗರ ಕಣ್ಮನ ಸೆಳೆಯುತ್ತಿದೆ.

ಧ್ವನ್ಯಾಲೋಕ ಆವರಣದಲ್ಲಿ ಲೋಟಸ್, ಲಿಲ್ಲಿಸ್ ಮಾತ್ರವಲ್ಲದೆ ಅಲಂಕಾರಿಕಾ ಕೃತಕ ಹೂವು, ಪೇಪರ್ ಕಲೆ, ಅಲಂಕಾರಿಕ ವಸ್ತುಗಳನ್ನು ಪ್ರದರ್ಶಿಸಲಾಗಿದ್ದು, ಅ.20ರವರೆಗೆ ಪ್ರದರ್ಶನ ವೀಕ್ಷಿಸಬಹುದಾಗಿದೆ. ಪ್ರದರ್ಶನದಲ್ಲಿ ವಿವಿಧ ಬಗೆಯ ಲೋಟಸ್ ಮತ್ತು ಲಿಲ್ಲೀಸ್ ಗಿಡಗಳ ಪ್ರದರ್ಶಿಸಿ, ಮಾಹಿತಿ ಒದಗಿಸಲಾಗುತ್ತಿದೆ. ಈ ಹೂಗಳ ಆಧ್ಯಾತ್ಮಿಕ ಮಹತ್ವ, ಔಷಧೀಯ ಮೌಲ್ಯ, ಕೃಷಿ ತಂತ್ರ, ಪಾಕಶಾಲೆ ಕುರಿತ ವಿವರವನ್ನು ನೀಡಲಾಗುತ್ತಿದೆ.

ಲೋಟಸ್, ಲಿಲ್ಲಿಸ್ ಕುರಿತು ಪರಿಣಿತಿ ಪಡೆದಿರುವ ಸಂಧ್ಯಾ ಮಂಜುನಾಥ್ ನೇತೃತ್ವದಲ್ಲಿ ಪ್ರದರ್ಶನ ಏರ್ಪಡಿಸಲಾಗಿದ್ದು, ಆಸಕ್ತರಿಗೆ ಕಾರ್ಯಾಗಾರವನ್ನು ಆಯೋಜಿಸಲಾಗಿದೆ. ಈ ಸಂದರ್ಭದಲ್ಲಿ ವಿಶ್ರಾಂತ ಪ್ರಾಧ್ಯಾಪಕಿ ಪ್ರೊ.ಶಶಿಕಲಾ ಹಾಗೂ ಸುಮನ್ ಅರಸ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಗುಣಮಟ್ಟ ಪರಿಕಲ್ಪನೆ ಆಧರಿಸಿ ಜನತೆಯ ಮೇಲೆ ಹೂಡಿಕೆ ಉತ್ತಮ ಭವಿಷ್ಯ ನಿರ್ಮಾಣ ಕುರಿತು ಸಮಾವೇಶ

ಮೈಸೂರು, ಅ.18(ಜಿಎ)–ಭಾರತೀಯ ಗುಣವೃತ್ತ ವೇದಿಕೆ, ಮೈಸೂರು ಶಾಖೆ ವತಿಯಿಂದ ಅ.20ರಂದು ಬೆಳಗ್ಗೆ 8.30ಕ್ಕೆ ನಗರದ ವಿದ್ಯಾವರ್ಧಕ ಎಂಜಿನಿಯರಿಂಗ್ ಕಾಲೇಜು ಸಭಾಂಗಣದಲ್ಲಿ ಗುಣಮಟ್ಟ ಪರಿಕಲ್ಪನೆ ಆಧರಿಸಿ ಜನತೆಯ ಮೇಲೆ ಹೂಡಿಕೆ, ಉತ್ತಮ ಭವಿಷ್ಯದ ನಿರ್ಮಾಣ ವಿಷಯ ಕುರಿತ ಸಮಾವೇಶ ಆಯೋಜಿಸಲಾಗಿದೆ ಎಂದು ಕಾರ್ಯದರ್ಶಿ ವಾದಿರಾಜ ಕುಲಕರ್ಣಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎರಡನೇ ಮಹಾಯುದ್ಧದ ವೇಳೆ ಅಮೆರಿಕ ಅಣುಬಾಂಬ್ ಹಾಕಿದ ಕಾರಣ ಜಪಾನ್‌ಗೆ ಅಪಾರ ಹಾನಿಯಾಯಿತು. ಈ ವೇಳೆ ಶಸ್ತ್ರಾಸ್ತ್ರಗಳಿಂದ ಅಮೆರಿಕವನ್ನು ಗೆಲ್ಲಲು ಸಾಧ್ಯವಿಲ್ಲ. ಹೀಗಾಗಿ ಉತ್ಪನ್ನಗಳ ಗುಣಮಟ್ಟಕ್ಕೆ ಆದ್ಯತೆ ನೀಡಬೇಕೆಂದು ಜಪಾನ್‌ಗೆ ಅರಿವಾಯಿತು. ಇದರಿಂದಾಗಿ ಅಮೆರಿಕ ಸೇರಿದಂತೆ ಎಲ್ಲೆಡೆ ಮೇಡ್ ಇನ್ ಜಪಾನ್ ವಸ್ತುಗಳು ಜನಪ್ರಿಯವಾದವು. ಹೀಗಾಗಿ ಇದೇ ಪರಿಕಲ್ಪನೆ ಆಧರಿಸಿ ಉತ್ಪನ್ನಗಳ ಗುಣಮಟ್ಟಕ್ಕೆ ಆದ್ಯತೆ ನೀಡುವ ಅರಿವನ್ನು ತಮ್ಮ ಸಂಸ್ಥೆ ಮಾಡುತ್ತಿದೆ ಎಂದರು.

ಸಂಸ್ಥೆಯ ಇನ್ನಿತರ ಪದಾಧಿಕಾರಿಗಳಾದ ವೆಂಕಟರಾಂ, ಅಬ್ದುಲ್ ಕರೀಂ, ಅಶ್ವತ್ ಹಾಜರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581/1980 E-mail address: mysoorumithra@gmail.com For advertisements: mysoorumithra@gmail.com

ಇಡಿ ದಾಳಿ: ಸಿಎಂ ಸಿದ್ದರಾಮಯ್ಯ ವಿರುದ್ಧ ಕಾನೂನು ಕುಣಿಕೆ ಮತ್ತಷ್ಟು ಬಿಗಿಯಾಯ್ತು!



ಬೆಂಗಳೂರು, ಅ.18(ಕೆಎಂಶಿ)– ಮುಡಾ ಬಿಡಿ ನಿವೇಶನ ಹಂಚಿಕೆ ಹಾಗೂ ಹಣ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ (ಇಡಿ) ಬೆಂಗಳೂರು ಹಾಗೂ ಮೈಸೂರಿನಲ್ಲಿ ನಡೆಸಿದ ದಾಳಿಯಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧದ ಕಾನೂನಿನ ಕುಣಿಕೆ ಮತ್ತಷ್ಟು ಬಿಗಿಯಾಗುತ್ತಿದೆ.

ನ್ಯಾಯಾಲಯದ ಆದೇಶದ ನಂತರ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಸೇರಿದಂತೆ ಐವರ ವಿರುದ್ಧ ಲೋಕಾಯುಕ್ತ ಎಫ್ಐಆರ್ ದಾಖಲಿಸಿ ತನಿಖೆ ಆರಂಭಿಸಿರುವ ಬೆನ್ನಲ್ಲೇ ಇ.ಡಿ. ದಾಳಿ, ಕಾಂಗ್ರೆಸ್ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿದೆ. ಲೋಕಾಯುಕ್ತ ಅಧಿಕಾರಿಗಳು ಈಗಾಗಲೇ ಮೂರು ಮತ್ತು ನಾಲ್ಕನೇ ಆರೋಪಿಗಳಿಗೆ ನೋಟಿಸ್ ನೀಡಿ ವಿವರಣೆ ಪಡೆದಿರುವುದಲ್ಲದೆ, ಮುಡಾಗೆ ತೆರಳಿ ದಾಖಲೆಗಳನ್ನು ಪರಿಶೀಲಿಸಿದ್ದಾರೆ. ಲೋಕಾಯುಕ್ತ ಪ್ರಾರಂಭಿಕ ಹಂತದ ತನಿಖೆ ನಡೆಸುವ ಸಂದರ್ಭದಲ್ಲೇ ಆರೋಪಿ ದೇವರಾಜ್ ಅವರ ಮೈಸೂರು ಹಾಗೂ ಬೆಂಗಳೂರಿನ ಮನೆ ಮೇಲೆ ಇಡಿ ಏಕಕಾಲಕ್ಕೆ ದಾಳಿ ನಡೆಸಿ, ದಾಖಲೆಗಳನ್ನು ಪರಿಶೀಲಿಸಿ ವಶಪಡಿಸಿಕೊಂಡಿದೆ.

ಮುಡಾ ಕಚೇರಿಯಲ್ಲಿ ಲಭ್ಯವಾಗುವ ದಾಖಲೆ ಹಾಗೂ ಉಳಿದ ಆರೋಪಿಗಳು ಮತ್ತು ಅಧಿಕಾರಿಗಳಿಂದ ಸಾಕ್ಷ್ಯ ದಾಖಲೆಗಳನ್ನು ಸಂಗ್ರಹಿಸಿದ ನಂತರ ಇಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ನೋಟಿಸ್ ನೀಡಿ ವಿವರಣೆ ಪಡೆಯಲಿದೆ ಎಂದು ಹೇಳಲಾಗುತ್ತಿದೆ. ಸಿದ್ದರಾಮಯ್ಯ ಜೊತೆಗೆ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಹಾಗೂ ಮುಡಾದಲ್ಲಿ ಆಯುಕ್ತರಾಗಿ ಸೇವೆ ಸಲ್ಲಿಸಿ ವರ್ಗಾವಣೆಗೊಂಡಿರುವ ಇಬ್ಬರು ಅಧಿಕಾರಿಗಳಿಗೂ ನೋಟಿಸ್ ನೀಡಿ ಮಾಹಿತಿ ಪಡೆಯಲಿದ್ದಾರೆನ್ನಲಾಗಿದೆ.

ಮೈಸೂರಿನಲ್ಲಿ ಇ.ಡಿ. ದಾಳಿ ಸಂದರ್ಭದಲ್ಲಿ ಮುಖ್ಯಮಂತ್ರಿ ಅವರು ತಮ್ಮ ಗೃಹ ಕಚೇರಿ ಕೃಷ್ಣಾದಲ್ಲಿ ಪಂಚಮಸಾಲಿ ಸಮುದಾಯದ ಸ್ವಾಮೀಜಿ ಹಾಗೂ ಆ ಸಮಾಜಕ್ಕೆ ಸೇರಿದ ಮುಖಂಡರೊಂದಿಗೆ 2ಎ ಮೀಸಲಾತಿ ಕುರಿತ ಸಭೆ ನಡೆಸುತ್ತಿದ್ದರು. ಇದೇ ವೇಳೆ ಇಡಿ ದಾಳಿ ಬಗ್ಗೆ ಅಧಿಕಾರಿಗಳು ಮುಖ್ಯಮಂತ್ರಿ ಗಮನಕ್ಕೆ ತಂದರಾದರೂ ಆ ಬಗ್ಗೆ ಹೆಚ್ಚು ವಿವರಣೆಯನ್ನು ಸಭೆಯಲ್ಲಿ ಪಡೆಯದೆ ನಂತರ ತಮ್ಮ ವ್ಯಾಪ್ತಿಗೆ ಬರುವ ಗುಪ್ತಚರ ಇಲಾಖೆ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು ಎನ್ನಲಾಗಿದೆ.

ಮಹಾರಾಷ್ಟ್ರ ವಿಧಾನ ಸಭಾ ಚುನಾವಣಾ ವೇಳಾಪಟ್ಟಿ ಪ್ರಕಟಗೊಳ್ಳುತ್ತಿದ್ದಂತೆ, ಇಡಿ ಇತ್ತ ಮುಡಾ ಹಗರಣದ ತನಿಖೆಗೆ ಚುರುಕು ನೀಡಿದೆ. ಮುಡಾ ಹಣ ವರ್ಗಾವಣೆಗೆ ಸಂಬಂಧಿಸಿದಂತೆ ಇಡಿ ಕಳೆದ ಎರಡು–ಮೂರು ವಾರಗಳ ಹಿಂದೆಯೇ ಪ್ರಕರಣ ದಾಖಲು ಮಾಡಿಕೊಂಡಿತ್ತು. ಇದರ ಜೊತೆಗೆ ನಿವೇಶನಗಳ ಹಂಚಿಕೆಯಲ್ಲಿ ನಡೆದಿರುವ ಹಗರಣಕ್ಕೆ ಸಂಬಂಧಿಸಿದಂತೆ ಸ್ನೇಹಮಯಿ ಕೃಷ್ಣ ದಾಖಲೆ ಸಹಿತ ದೂರು ನೀಡಿದ್ದರು. ಈ ದೂರಿನ ನಂತರ ಇಡಿ ಆಂತರಿಕವಾಗಿ ಮಾಹಿತಿ ಸಂಗ್ರಹಿಸಿ ಇಂದು ಏಕಾಏಕಿ ದಾಳಿ ಮಾಡಿದೆ.


ಇಡಿ ಮುಡಾ ಮೇಲೆ ಪ್ರಕರಣ ದಾಖಲಿಸುತ್ತಿದ್ದಂತೆ ಮುಖ್ಯಮಂತ್ರಿ ಅವರು ತಮ್ಮ ಪತ್ನಿ ಪಾರ್ವತಿ ಹೆಸರಿನಲ್ಲಿ ಪಡೆದಿದ್ದ 14 ನಿವೇಶನಗಳನ್ನು ಹಿಂತಿರುಗಿಸಿದ್ದರು. ನಿವೇಶನ ಹಿಂತಿರುಗಿಸಿದ ಕೆಲವೇ ದಿನಗಳಲ್ಲಿ ಮುಡಾ ಅಧ್ಯಕ್ಷರಾಗಿದ್ದ ತಮ್ಮ ಆಪ್ತ ಮರೀಗೌಡ ಅವರ ರಾಜೀನಾಮೆ ಪಡೆದು ತಕ್ಷಣವೇ ಅಂಗೀಕಾರ ಮಾಡಿಸಿದ್ದರು.

ಸಿದ್ದರಾಮಯ್ಯನವರ ಪಾಪದ ಕೊಡ ತುಂಬಿದೆ; ಗೌರವಯುತವಾಗಿ ರಾಜೀನಾಮೆ ಕೊಡಲಿ

ಹುಬ್ಬಳ್ಳಿ, ಅ.18–ಸಿದ್ದರಾಮಯ್ಯನವರ ಪಾಪದ ಕೊಡ ತುಂಬಿದೆ. ಸಿದ್ದರಾಮಯ್ಯ ಕೆಸರೆ ಗ್ರಾಮದಿಂದ ಕೆಸರು ಎರಚಿಕೊಂಡಿದ್ದಾರೆ. ಮುಡಾ ಕಚೇರಿ ಮೇಲೆ ಇಡಿ ದಾಳಿ ನಿರೀಕ್ಷಿತ. ಸಿದ್ದರಾಮಯ್ಯ ಗೌರವಯುತವಾಗಿ ರಾಜೀನಾಮೆ ಕೊಡಬೇಕು ಅನ್ನೋದು ನಮ್ಮ ಆಗ್ರಹ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ಹೇಳಿದ್ದಾರೆ.

ಇಂದು(ಶುಕ್ರವಾರ) ನಗರದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ನಮ್ಮ ಪಾದಯಾತ್ರೆಗೆ ಒಂದು ಅರ್ಥ ಸಿಕ್ಕಿದೆ. ಸಿದ್ದರಾಮಯ್ಯ ಅವರು ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಿ ತನಿಖೆ ಎದುರಿಸಬೇಕು. ಮುಡಾ ಹಗರಣ ಕೇವಲ 14 ಸೈಟ್ ಹಗರಣ ಅಲ್ಲ. ಸಾವಿರಾರು ಕೋಟಿ ಹಗರಣ ಆಗಿದೆ. ಸಿದ್ದರಾಮಯ್ಯ ಗೌರವ ಯುತವಾಗಿ ರಾಜೀನಾಮೆ ಕೊಡಬೇಕು ಎಂದು ಆಗ್ರಹಿಸಿದ್ದರು.

ಲೋಕಾಯುಕ್ತ ಪ್ರಕರಣ ದಾಖಲಿಸಿಕೊಂಡಿದೆ. ಅದಕ್ಕೆ ಪೂರಕವಾಗಿ ಇಂದು ಇಡಿ ದಾಳಿ ಮಾಡಿದೆ.



ಜಾರಿ ನಿರ್ದೇಶನಾಲಯದ ದಾಳಿ ನಿರೀಕ್ಷಿತ. ಸಿಎಂ ಕುಟುಂಬ ಅಕ್ರಮವಾಗಿ ಜಮೀನು ಖರೀದಿಸಿತ್ತು. 14 ನಿವೇಶನವನ್ನು ಅಕ್ರಮವಾಗಿ ಸಿಎಂ ಪತ್ನಿಗೆ ನೀಡಲಾಗಿತ್ತು. ಕೋಟ್ಯಂತರ ರೂಪಾಯಿ ಮೌಲ್ಯದ ಆಸ್ತಿಯನ್ನು ದಲ್ಲಾಳಿಗಳ ಮೂಲಕ ಖರೀದಿಸಿದ್ದರು. ಸಿಎಂ ಕುಟುಂಬದ ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡಿದ್ದೆವು. ಸದನದಲ್ಲಿ ಚರ್ಚೆಗೂ ಸಿಎಂ ಅವಕಾಶ ಮಾಡಿಕೊಡಲಿಲ್ಲ. 14 ನಿವೇಶನಗಳಲ್ಲಿ ಅಕ್ರಮ ಆಗಿಲ್ಲ ಅಂತ ಸಮರ್ಥನೆ ಮಾಡಿಕೊಂಡರು. 62 ಕೋಟಿ ರೂಪಾಯಿ ಪರಿಹಾರ ಕೊಡಬೇಕೆಂದರು. ತಮ್ಮ ಮನಸ್ಸಿಗೆ ಬಂದಂತೆ ಸಿಎಂ ವರ್ತಿಸಿದರು. ಈಗ ಸಿದ್ದರಾಮಯ್ಯ ಅವರಿಗೆ ಜ್ಞಾನೋದಯವಾಗಿದೆ. 14 ನಿವೇಶನಗಳನ್ನು ಹಿಂದಿರುಗಿಸೋದಾಗಿ ಪತ್ರ ಬರೆದಿದ್ದಾರೆ. ವಿಶೇಷ ನ್ಯಾಯಾಲಯ ತನಿಖೆಗೆ ಆದೇಶಿಸಿದೆ ಎಂದು ಹೇಳಿದ್ದಾರೆ.

ಸಿಬಿಐ ತನಿಖೆ ಆಗಬೇಕು ಎಂದು ಮತ್ತೊಂದು ಅರ್ಜಿ ಸಲ್ಲಿಕೆಯಾಗಿದೆ. ಇದರ ನಡುವೆ ಇಂದು ಇಡಿ ದಾಳಿ ಮಾಡಿದೆ. ಎಲ್ಲವೂ ಕಾನೂನು ರೀತಿಯಲ್ಲಿ ಪ್ರಕ್ರಿಯೆಗಳ ನಡೆದಿದೆ. ಕೆಸರೆ ಗ್ರಾಮದಲ್ಲಿ ಸಿಎಂ ಕೆಸರು ಮೆತ್ತಿಕೊಂಡಿದ್ದಾರೆ. ಕ್ಲೀನ್ ರಾಜಕಾರಣಿ ಅಂತ ತಮ್ಮ ಬೆನ್ನು ತಾವೇ ಚಪ್ಪರಿಸಿಕೊಂಡಿದ್ದರು. ಆದರೆ ಈ ಪ್ರಕರಣದಲ್ಲಿ ಕೆಸರು ಎರಚಿಕೊಂಡಿರುವುದು ಬಹಿರಂಗಗೊಂಡಿದೆ. ಈ ಪ್ರಕರಣದಲ್ಲಿ ಸಿಎಂ ಅವರೇ ಮೊದಲ ಆರೋಪಿಯಾಗಿದ್ದಾರೆ. ಭಂಡತನದಿಂದ ಹೊರಗೆ ಬಂದು ಗೌರವಯುತವಾಗಿ ರಾಜೀನಾಮೆ ಕೊಡಲಿ ಎಂದು ಆಗ್ರಹಿಸಿದ್ದಾರೆ.

ಇಡಿ ಪಕ್ಷಪಾತವಾಗಿ ಕಾರ್ಯ ನಿರ್ವಹಿಸುತ್ತಿಲ್ಲ. ಉಪ್ಪು ತಿಂದ ಮೇಲೆ ನೀರು ಕುಡಿಯಲೇಬೇಕಾಗುತ್ತದೆ. ಯಾವ ಪುರುಷಾರ್ಥಕ್ಕಾಗಿ 14 ನಿವೇಶನ ವಾಪಸ್ ಕೊಟ್ಟಿದ್ದೀರಿ? ಇಡಿ ದಾಳಿ ನಡೆದ ಕೂಡಲೇ ಪಕ್ಷಪಾತ ನೆನಪಾಗುತ್ತಾ. ಇಡೀ ಪ್ರಕರಣವನ್ನು ಮುಚ್ಚಿ ಹಾಕಲು ಖುದ್ದು ಸಿಎಂ ಆದೇಶಿಸಿದ್ದಾರೆ. ಸಿಎಂ ಅವರ ಪಾಪದ ಕೊಡ ತುಂಬಿದೆ. ಯಾವತ್ತೂ ರಾಜೀನಾಮೆ ಕೊಡ್ತಾರೊ ಗೊತ್ತಿಲ್ಲ. ಭಂಡತನದಿಂದ ಸಿಎಂ ಸ್ಥಾನದಲ್ಲಿ ಮುಂದುವರಿಯುತ್ತಿದ್ದಾರೆ. ಕಾನೂನು ಕುಣಿಕೆಯಿಂದ ಸಿದ್ದರಾಮಯ್ಯ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ ಎಂದಿದ್ದಾರೆ.



ಕಂಡು, ಕಾಣದೆಯೂ ಭ್ರಷ್ಟಾಚಾರದಲ್ಲಿ ಕೈಹಾಕಿದವರಲ್ಲಿ ನಡುಕ

ಮೈಸೂರು, ಅ.18(ಆರ್‌ಕೆ)– ಮುಡಾ ನಿವೇಶನ ಹಗರಣ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಬಿ.ಎಂ. ಪಾರ್ವತಿ ಅವರಿಗೆ ಮಂಜೂರಾಗಿರುವ 14 ನಿವೇಶನಗಳ ಸಂಬಂಧ ಜಾರಿ ನಿರ್ದೇಶನಾಲಯದ ಅಧಿಕಾರಿಗಳ ರಂಗ ಪ್ರವೇಶದಿಂದ ಕಂಡು, ಕಾಣದೆಯೂ ಮುಡಾ ಭ್ರಷ್ಟಾಚಾರದಲ್ಲಿ ಕೈ ಜೋಡಿಸಿರುವವರಲ್ಲಿ ನಡುಕ ಉಂಟಾಗಿದೆ.

ಸ್ನೇಹಮಯಿ ಕೃಷ್ಣ ನೀಡಿದ ದೂರಿನ ಹಿನ್ನೆಲೆಯಲ್ಲಿ ರಾಜ್ಯ ಹೈಕೋರ್ಟ್, ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ಸೂಚನೆ ಮೇರೆಗೆ ಈಗಾಗಲೇ ಲೋಕಾಯುಕ್ತ ಮೈಸೂರು ಎಸ್ಪಿ ಉದೇಶ್ ನೇತೃತ್ವದ ಪೊಲೀಸರು ಸಿಎಂ ಸಿದ್ದರಾಮಯ್ಯ, ಅವರ ಪತ್ನಿ ಪಾರ್ವತಿ ಸೇರಿ ನಾಲ್ವರ ವಿರುದ್ಧ ಎಫ್‌ಐಆರ್ ದಾಖಲಿಸಿ ತನಿಖೆ ಆರಂಭಿಸಿದ್ದಾರೆ. ಮತ್ತೊಂದೆಡೆ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ದೇಸಾಯಿ ನೇತೃತ್ವದ ಏಕಸದಸ್ಯ ಆಯೋಗವು ಮುಡಾ ನಿವೇಶನ ಹಂಚಿಕೆ ಹಗರಣದ ತನಿಖೆ ನಡೆಸುತ್ತಿರುವಾಗಲೇ ಇಂದು ಇಡಿ ಮುಡಾ ಹಗರಣದ ರಂಗ ಪ್ರವೇಶ ಮಾಡಿರುವುದರಿಂದ ಬೇನಾಮಿ ಹೆಸರಲ್ಲಿ ನಿವೇಶನ ಪಡೆದು ಅಕ್ರಮವೆಸಗಿರುವವರು ಕಂಗೆಟ್ಟಿದ್ದಾರೆ. ಶೇ. 50:50ರ ಅನುಪಾತ, ಪ್ರೋತ್ಸಾಹದಾಯಕ ಯೋಜನೆ ಹಾಗೂ ಬದಲಿ ನಿವೇಶನಗಳನ್ನು ನಿಯಮಬಾಹಿರವಾಗಿ ಮಂಜೂರು ಮಾಡಿ ಅಧಿಕೃತ ಜ್ಞಾಪನ ಹೊರಡಿಸಿ ಆತುರಾತುರ ವಾಗಿ ಟೈಟಲ್ ಡೀಡ್ ನೀಡಿ, ಖಾತಾ–ಕಂದಾಯ ಮಾಡಿ ಕಟ್ಟಡ ನಿರ್ಮಿಸಲು ನಕ್ಷೆ ಅನುಮೋದನೆ ನೀಡಿರುವ ಮುಡಾ ಆಯುಕ್ತರು, ಕಾರ್ಯದರ್ಶಿಗಳು, ವಿಶೇಷ ಭೂಸ್ವಾಧೀನಾಧಿಕಾರಿಗಳು, ವಿಶೇಷ ತಹಸೀಲ್ದಾರ್‌ಗಳು, ಸರ್ವೆಯರ್‌ಗಳು ವಲಯಾಧಿಕಾರಿಗಳಲ್ಲಿ ಆತಂಕ ಸೃಷ್ಟಿಯಾಗಿದೆ.

ಆಯುಕ್ತರೊಂದಿಗೆ ಅಕ್ರಮದಲ್ಲಿ ಕೈ ಜೋಡಿಸಿರುವ ಮಧ್ಯವರ್ತಿಗಳು, ಬಿಲ್ಡರ್‌ಗಳು, ರಿಯಲ್ ಎಸ್ಟೇಟ್ ಉದ್ಯಮಿಗಳು, ಜಿಪಿಎ ಮಾಡಿಕೊಂಡು ನಂತರ ತಮ್ಮ ಹೆಸರಿಗೆ ನಿವೇಶನಗಳನ್ನು ಕ್ರಯ ಮಾಡಿಸಿಕೊಂಡವರೂ ಈಗ ವಿಚಲಿತರಾಗಿದ್ದಾರೆ.

ಶೇ.50:50ರಡಿ, ಪ್ರೋತ್ಸಾಹದಾಯಕ ಯೋಜನೆಯಡಿ ಕಡಿಮೆ ಬೆಲೆಗೆ ನಿವೇಶನ ಪಡೆದು ತರಾತುರಿಯಲ್ಲಿ ಮನೆ ಕಟ್ಟುತ್ತಿರುವವರು, ಅದು ಅಕ್ರಮ ಎಂದು ತಿಳಿಯದೇ ನಿವೇಶನ ಖರೀದಿಸಿರುವ ಅಮಾಯಕರು, ಮುಡಾ ಹಗರಣದಲ್ಲಿ ಇಡಿ ಪ್ರವೇಶದಿಂದಾಗಿ ಆಘಾತಕ್ಕೊಳಗಾಗಿದ್ದಾರೆ.

ಎಲ್ಲಕ್ಕಿಂತ ಮಿಗಿಲಾಗಿ ಪ್ರಭಾವ ಬಳಸಿ ಅತೀ ಹೆಚ್ಚು ನಿವೇಶನಗಳನ್ನು ಬೇನಾಮಿ ಹೆಸರಲ್ಲಿ ದಕ್ಕಿಸಿಕೊಂಡು ಬೀಗುತ್ತಿದ್ದ ಸಚಿವರು, ಮಾಜಿ ಸಚಿವರು, ಶಾಸಕರು, ಮಾಜಿ ಶಾಸಕರು, ವಿಧಾನಪರಿಷತ್ ಸದಸ್ಯರು, ಮಾಜಿ ಎಂಎಲ್‌ಸಿಗಳು, ಮುಡಾ ಮಾಜಿ ಅಧ್ಯಕ್ಷರು, ಪ್ರಭಾವಿಗಳಂತೂ ಇಡಿ ಅಧಿಕಾರಿಗಳು ದಾಳಿ ಮಾಡುತ್ತಿದ್ದಂತೆಯೇ ಬೆಚ್ಚಿ ಬಿದ್ದಿದ್ದು, ಮುಂದೆ ಈ ಸಂಕೋಲೆಯಿಂದ ಹೇಗೆ ಬಿಡಿಸಿಕೊಳ್ಳುವುದೆಂಬ ಚಿಂತೆಯಲ್ಲಿದ್ದಾರೆ.

ಮುಖ್ಯಮಂತ್ರಿಗಳೇ ತಮ್ಮ ಪತ್ನಿ ಹೆಸರಲ್ಲಿ ಪಡೆದಿದ್ದ 14 ನಿವೇಶನಗಳನ್ನು ವಾಪಸ್ ನೀಡಿದ್ದಾರೆ. ಮುಡಾ ಅಧ್ಯಕ್ಷ ಮರೀಗೌಡರೂ ಹುದ್ದೆ ತ್ಯಜಿಸಿದ್ದಾರೆ. ಮುಂದೆ ಯಾರ್‍ಯಾರ ಕುತ್ತಿಗೆಗೆ ಸುತ್ತಿಕೊಳ್ಳುವುದೋ ಎಂಬ ಆತಂಕ ಮನೆ ಮಾಡಿದೆ.

> “ಸಿಎಂ ಸಿದ್ದರಾಮಯ್ಯ ಕುಟುಂಬ ಈ ಪ್ರಕರಣದಲ್ಲಿ ಭಾಗಿಯಾಗಿರುವುದರಿಂದ ಇಡಿ ಪ್ರವೇಶವಾಗಿದೆ. ತಪ್ಪು ಒಪ್ಪಿಕೊಂಡು ಸೈಟ್‌ಗಳನ್ನು ವಾಪಸ್ ನೀಡಿರುವುದರಿಂದ ಮುಖ್ಯಮಂತ್ರಿಗಳು ರಾಜೀನಾಮ ನೀಡಿ ತನಿಖೆಗೆ ಸಹಕರಿಸಬೇಕು. ಇಡಿ ಅಧಿಕಾರಿಗಳು ಪ್ರಾಮಾಣಿಕವಾಗಿ ತನಿಖೆ ಮಾಡುತ್ತಾರೆಂಬ ವಿಶ್ವಾಸವಿದೆ. ಮುಂದೆ ಏನಾಗುತ್ತದೆ ಎಂಬುದನ್ನು ಕಾದು ನೋಡೋಣ. **– ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸಂಸದರು**



> “ಮುಡಾ ಹಗರಣದಲ್ಲಿ ಇಡಿ ಪ್ರವೇಶವಾಗಿರುವುದು ಸ್ವಾಗತಾರ್ಹ. ಆದರೆ, ಮುಡಾದಲ್ಲಿ ಎಲ್ಲಾ ದಾಖಲೆಗಳು ಸಿಗುವುದಿಲ್ಲ. ಅವು ಬೆಂಗಳೂರಿಗೆ ರವಾನೆಯಾಗಿವೆ. ಅದೂ ಸಹ ತನಿಖೆಯಿಂದ ತಿಳಿಯುತ್ತದೆ. ಯಾವ ಕಾನೂನಿನಡಿ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ ಎಂಬ ಮಾಹಿತಿ ತನಿಖೆಯಿಂದ ಬಯಲಾಗುತ್ತದೆ. ಹಗರಣದಲ್ಲಿ ಭಾಗಿಯಾಗಿರುವವರ ಸುಳಿವು ಪತ್ತೆಯಾಗಲಿದೆ. ಇದಕ್ಕೆ ಕಾರಣರಾದ ಮುಡಾ ಮಾಜಿ ಆಯುಕ್ತರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಿ ಬಂಧಿಸಿದಲ್ಲಿ ತನಿಖೆಗೆ ಪೂರಕ ಮಾಹಿತಿ ಸಿಗುತ್ತದೆ. **– ಟಿ.ಎಸ್. ಶ್ರೀವತ್ಸ, ಶಾಸಕ**



> “ನ್ಯಾಯಾಲಯಗಳು ತನಿಖೆಗೆ ಆದೇಶ ನೀಡಿವೆ. ಲೋಕಾಯುಕ್ತ ಪೊಲೀಸರು ಎಫ್‌ಐಆರ್ ದಾಖಲಿಸಿ ತನಿಖೆ ನಡೆಸುತ್ತಿದ್ದಾರೆ. ನಿವೃತ್ತ ನ್ಯಾಯಮೂರ್ತಿ ನೇತೃತ್ವದ ಆಯೋಗದ ತನಿಖೆಯೂ ಪ್ರಗತಿಯಲ್ಲಿದೆ. ತಮ್ಮ ಪತ್ನಿಗೆ ಮಂಜೂರಾಗಿದ್ದ 14 ನಿವೇಶನಗಳನ್ನು ವಾಪಸ್ ನೀಡಿರುವ ಸಿದ್ದರಾಮಯ್ಯ, ಆಪ್ತ ಮರೀಗೌಡರಿಂದ ಮುಡಾ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಕೊಡಿಸಿಯೂ ಆಯಿತು. ಇದೀಗ ಇಡಿ ಪ್ರವೇಶವಾಗಿ ತನಿಖೆ ನಡೆಸುತ್ತಿದೆ. ಇಷ್ಟಾದರೂ ಮುಖ್ಯಮಂತ್ರಿ ಅಧಿಕಾರಕ್ಕೆ ಅಂಟಿಕೊಂಡಿದ್ದರೆ ರಾಜ್ಯದ ಜನ ಸಹಿಸುವುದಿಲ್ಲ. **– ಎ.ಹೆಚ್. ವಿಶ್ವನಾಥ್, ವಿಧಾನಪರಿಷತ್ ಸದಸ್ಯ**



> “ಹಗರಣ ಹೊರಬರುತ್ತಿದ್ದಂತೆಯೇ ಮುಖ್ಯಮಂತ್ರಿಗಳು ಪತ್ನಿ ಹೆಸರಿನ ನಿವೇಶನಗಳನ್ನು ಹಿಂದಿರುಗಿಸಿ ಇಡೀ ಮುಡಾ ನಿವೇಶನ ಹಂಚಿಕೆ ಪ್ರಕರಣವನ್ನು ತನಿಖೆಗೊಪ್ಪಿಸಿ, ಮುಡಾ ಸ್ವಚ್ಛಗೊಳಿಸುವ ಕೆಲಸ ಮಾಡಬೇಕಿತ್ತು. ಹಾಗೆಯೇ ಮೈಸೂರಲ್ಲಿ ಲಭ್ಯವಿರುವ ಖಾಲಿ ನಿವೇಶನಗಳನ್ನು ಪತ್ತೆ ಮಾಡಿ, ಅರ್ಜಿ ಸಲ್ಲಿಸಿ 30 ವರ್ಷಗಳಿಂದ ಕಾಯುತ್ತಿರುವ ಆಕಾಂಕ್ಷಿಗಳಿಗೆ ಹಂಚಿದ್ದರೆ ಸಿದ್ದರಾಮಯ್ಯ ಮೇಲೆತ್ತರಕ್ಕೆ ಹೋಗುತ್ತಿದ್ದರು. ಈಗ ಕಾಲ ಮಿಂಚಿ ಹೋಗಿದೆ. ಉಪ್ಪು ತಿಂದವರೆಲ್ಲಾ ನೀರು ಕುಡಿಯಲೇಬೇಕು. ಇಡಿ ಸರಿಯಾಗಿ ತನಿಖೆ ಮಾಡಿ, ನಿಜವಾದ ತಪ್ಪಿತಸ್ಥರಿಗೆ ಕ್ರಮವಾಗಲಿ. **– ಡಿ.ಮಾದೇಗೌಡ, ಸಿಐಟಿಬಿ ಮಾಜಿ ಅಧ್ಯಕ್ಷರು**



ಮುಡಾದಲ್ಲಿ 4 ಸಾವಿರ ಕೋಟಿ ಅಕ್ರಮದ ಹಿನ್ನೆಲೆಯಲ್ಲಿ ಇಡಿ ದಾಳಿ



ಬೆಂಗಳೂರು, ಅ.18– ಜಾರಿ ನಿರ್ದೇಶನಾಲಯದ (ಇಡಿ) ದಾಳಿಗೆ ಯಾವುದೇ ರಾಜಕೀಯ ಕಾರಣಗಳಿಲ್ಲ. ಸ್ವತಃ ಕಾಂಗ್ರೆಸ್ ನಾಯಕರೇ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ 3 ರಿಂದ 4 ಸಾವಿರ ಕೋಟಿ ರೂ. ಅಕ್ರಮ ನಡೆದಿದೆ ಎಂದು ಹೇಳಿದ್ದರಿಂದಲೇ ಇಡಿ ದಾಳಿ ನಡೆದಿದೆ ಎಂದು ಪ್ರತಿಪಕ್ಷದ ನಾಯಕ ಆರ್. ಅಶೋಕ್ ಹೇಳಿದರು.


ಬೆಂಗಳೂರಿನಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿಎಂ ಸಿದ್ದರಾಮಯ್ಯ ಅವರದ್ದೂ ಸೇರಿದಂತೆ ಸುಮಾರು 1,200ಕ್ಕೂ ಅಧಿಕ ನಿವೇಶನಗಳ ಹಗರಣ ನಡೆದಿದೆ ಎಂಬ ದೂರು ಬಂದಿದ್ದು, ಅದಕ್ಕಾಗಿ ದಾಳಿ ಮಾಡಲಾಗಿದೆ. 3–4 ಸಾವಿರ ಕೋಟಿ ರೂ. ಹಗರಣ ನಡೆದಿದೆ ಎಂದು ಮುಡಾ ಅಧ್ಯಕ್ಷರಾಗಿದ್ದ, ಕಾಂಗ್ರೆಸ್‌ನ ಕೆ. ಮರಿಗೌಡ ಪತ್ರದಲ್ಲಿ ತಿಳಿಸಿದ್ದರು. ಅದಾದ ಬಳಿಕ ಸ್ನೇಹಮಯಿ ಕೃಷ್ಣ ಇಡಿಗೆ ದೂರು ನೀಡಿದ್ದರು. ಇದರಲ್ಲಿ ಬಿಜೆಪಿ ಅಥವಾ ಕೇಂದ್ರ ಸರ್ಕಾರದ ಪಾತ್ರವೇ ಇಲ್ಲ ಎಂದರು.

ಮುಡಾ ಕಚೇರಿ ಮೇಲೆ ನಡೆದ ಇಡಿ ದಾಳಿಯನ್ನು ರಾಜಕೀಯವಾಗಿ ನೋಡಬಾರದು. ನಿವೇಶನಗಳು, ಹಣ ಸಿಕ್ಕರೆ ರಾಜ್ಯ ಸರ್ಕಾರಕ್ಕೆ ಲಾಭವಾಗುತ್ತದೆ. ಸರ್ಕಾರದಲ್ಲಿ ಖಜಾನೆ ಖಾಲಿಯಾಗಿ ಸಂಬಳ ಕೊಡಲಾಗದ ಪರಿಸ್ಥಿತಿ ಇದೆ. ಇಂತಹ ಸ್ಥಿತಿಯಲ್ಲಿ ಖಜಾನೆಗೆ ಹಣ ಬಂದರೆ ಒಳ್ಳೆಯದು. ಇದನ್ನು ಕಾಂಗ್ರೆಸ್‌ನವರು ಸ್ವಾಗತಿಸಬೇಕು. ಇದನ್ನು ರಾಜಕಾರಣ ಎನ್ನಲು ಬಿಜೆಪಿ ನಾಯಕರೇನೂ ದೂರು ನೀಡಿಲ್ಲ ಎಂದರು. ಅಕ್ರಮ ಹಣ ವರ್ಗಾವಣೆಯಾಗಿಲ್ಲ ಎಂದಾದರೆ 3–4 ಸಾವಿರ ಕೋಟಿ ರೂ. ಹಣದ ಅಕ್ರಮ ನಡೆದಿರುವುದು ಹೇಗೆ ನಿವೇಶನ ಮಂಜೂರಾಗಿದೆ ಎಂದ ಮೇಲೆ ಅದರ ಹಣ ಯಾರಿಗಾದರೂ ಸಿಕ್ಕೇ ಸಿಕ್ಕಿರುತ್ತದೆ. ಅದಕ್ಕೆ ನಗದಿನಲ್ಲಿ ಹಣ ನೀಡಲಾಗಿರುತ್ತದೆ. ಅಂತಹ ನಗದು ಕಪ್ಪು ಹಣವೇ ಆಗಿರುತ್ತದೆ. ಇಡಿ ಬಗ್ಗೆ ಪ್ರಶ್ನೆ ಮಾಡುವವರು ಕೋರ್ಟ್‌ನಲ್ಲಿ ಪ್ರಶ್ನೆ ಮಾಡಬಹುದಿತ್ತು. ಆದರೆ, ಸಿಎಂ ಸಿದ್ದರಾಮಯ್ಯನವರು ಕೋರ್ಟ್‌ಗೆ ಹೋಗಲೇ ಇಲ್ಲ. ಇಡಿಗೆ ಅಧಿಕಾರ ಇಲ್ಲವೆಂದಾದರೆ ಎಸ್‌ಐಟಿ ಮಾಡಲು ಸರ್ಕಾರಕ್ಕೆ ಅಧಿಕಾರವಿದೆಯೇ ಎಂದು ಪ್ರಶ್ನಿಸಬೇಕಾಗುತ್ತದೆ. ಇನ್ನು ರಾಜ್ಯದಲ್ಲಿ ಮುಡಾ ಹಗರಣದ ಬಗ್ಗೆ ಮುಂದಿನ ಹೋರಾಟದ ಕುರಿತು ಪಕ್ಷದ ಮಟ್ಟದಲ್ಲಿ ಚರ್ಚಿಸಲಾಗುವುದು. ಇಡಿ ದಾಳಿಯ ನಂತರ ದಾಖಲೆಗಳು ಸಿಕ್ಕ ಬಳಿಕ ಪರಿಶೀಲಿಸಿ ಹೋರಾಟ ಮಾಡಲಾಗುವುದು ಎಂದು ಆರ್. ಅಶೋಕ್ ಮಾಹಿತಿ ನೀಡಿದರು.

ಇಡಿ ಸಿಎಂ ಪತ್ನಿಯ 14 ನಿವೇಶನ ಮಾತ್ರವಲ್ಲ ಮುಡಾ ಹಗರಣದ ಸಮಗ್ರ ತನಿಖೆ ಕೈಗೊಂಡಿದೆ

ದೂರುದಾರ ಸ್ನೇಹಮಯಿ ಕೃಷ್ಣ ಪ್ರತಿಕ್ರಿಯೆ

ಮೈಸೂರು, ಅ.18– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ದಿಂದ



50:50ರ ಅನುಪಾತದಡಿ ನಿವೇಶನ ಹಂಚಿಕೆಯಲ್ಲಿನ ಹಗರಣ ಸಂಬಂಧ ಇಡಿ ಅಧಿಕಾರಿಗಳು ಸಮಗ್ರ ತನಿಖೆ ಕೈಗೊಂಡಿದ್ದಾರೆಯೇ ಹೊರತು ಮುಖ್ಯಮಂತ್ರಿಗಳ ಕುಟುಂಬಕ್ಕೆ ನೀಡಿದ್ದ 14 ನಿವೇಶನಗಳಿಗೆ ಸೀಮಿತವಾಗಿಲ್ಲ ಎಂದು ದೂರುದಾರ ಸ್ನೇಹಮಯಿ ಕೃಷ್ಣ ಹೇಳಿದ್ದಾರೆ. ಮುಡಾ ಮೇಲೆ ಇಡಿ ಅಧಿಕಾರಿಗಳ ದಾಳಿ ಬಗ್ಗೆ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, 50:50 ಅನುಪಾತದಡಿ ನಿವೇಶನ ಹಂಚಿಕೆಯಲ್ಲಿ ಸಾವಿರಾರು ಕೋಟಿ ರೂ. ಹಗರಣ ನಡೆದಿದೆ ಎಂದು ಇಡಿಗೆ ದೂರು ನೀಡಿದಾಗ, ಕೆಲವರು ಈ ಪ್ರಕರಣ ಇಡಿ ವ್ಯಾಪ್ತಿಗೆ ಬರುವುದಿಲ್ಲ ಎಂದಿದ್ದರು. ಆದರೆ ದೂರು ನೀಡಿದ ನಂತರ ನನ್ನನ್ನು ವಿಚಾರಣೆಗೆ ಕರೆಸಿ, ಮಾಹಿತಿ ಪಡೆದಿದ್ದರು. ಆ ವೇಳೆ ಪೂರಕ ದಾಖಲೆಗಳನ್ನು ನೀಡಿದ್ದೆ. ನಂತರ ಇಡಿ ಅಧಿಕಾರಿಗಳೂ ಸಾಕಷ್ಟು ದಾಖಲೆಗಳ ಸಂಗ್ರಹಿಸಿದ ನಂತರ ತನಿಖೆಗೆ ಮುಂದಾಗಿದ್ದಾರೆ. ಇದು ನನ್ನ ಹೋರಾಟಕ್ಕೆ ಸಿಕ್ಕ ಜಯ ಎಂದರು. ಮುಡಾದಲ್ಲಿ 2015ರಿಂದ 50:50 ಅನುಪಾತದಡಿ ನಿವೇಶನ ಹಂಚಿಕೆ ಮಾಡಿರುವುದರಲ್ಲಿ ಸಾವಿರಾರು ಕೋಟಿ ರೂ. ಹಗರಣ ನಡೆದಿದೆ ಎಂದು ನಾನು ದೂರು ನೀಡಿದ್ದೇನೆ. ಆ ಹಿನ್ನೆಲೆಯಲ್ಲೇ ಇಡಿ ಅಧಿಕಾರಿಗಳು ದಾಖಲೆ ಪರಿಶೀಲನೆ ನಡೆಸಿದ್ದಾರೆ. ಹಾಗಾಗಿ ಇದು ಮುಖ್ಯಮಂತ್ರಿಗಳ ಕುಟುಂಬಕ್ಕೆ ಸಂಬಂಧಿಸಿದ 14 ನಿವೇಶನಗಳಿಗೆ ಮಾತ್ರ ಸೀಮಿತವಾಗಿಲ್ಲ. ಹಗರಣದಲ್ಲಿ ಯಾರೇ ಭಾಗಿಯಾಗಿದ್ದರೂ ಶಿಕ್ಷೆಯಾಗಬೇಕು. ಅರ್ಜಿ ಹಾಕಿರುವ ಅರ್ಹರಿಗೆ ನಿವೇಶನ ಸಿಗುವಂತಾಗಬೇಕು. ಈ ನಿಟ್ಟಿನಲ್ಲಿ ನಾನು ಹೋರಾಟ ಮುಂದುವರೆಸುತ್ತೇನೆ. ಈ ಪ್ರಕರಣವನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯುವವರೆಗೂ ಹೋರಾಟ ನಿಲ್ಲಿಸುವುದಿಲ್ಲ ಎಂದು ಪುನರುಚ್ಛರಿಸಿದರು.

ಇಡಿ ತನಿಖೆಗೆ ಮುಡಾದಿಂದ ಎಲ್ಲಾ ದಾಖಲೆ ಸಲ್ಲಿಕೆ

ಬೆಂಗಳೂರು, ಅ.18– ಮುಖ್ಯಮಂತ್ರಿ ಸಿದ್ದರಾಮಯ್ಯ, ಅವರ ಕುಟುಂಬ ಸದಸ್ಯರು, ಮತ್ತಿತರ ವಿರುದ್ಧ ದಾಖಲಿಸಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ ಕೋರಿರುವ ಎಲ್ಲಾ ದಾಖಲೆಗಳನ್ನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ) ಸಲ್ಲಿಸಲಿದೆ ಎಂದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಶುಕ್ರವಾರ ಹೇಳಿದ್ದಾರೆ. ಮುಡಾ ನಿವೇಶನ ಹಂಚಿಕೆಯಲ್ಲಿ ಅಕ್ರಮಗಳಿಗೆ ಸಂಬಂಧಿಸಿದ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಶುಕ್ರವಾರ ಅರಸೇನಾ ಪಡೆಯೊಂದಿಗೆ ಮುಡಾ ಮತ್ತಿತರ ಕಚೇರಿಗಳಲ್ಲಿ ದಾಳಿ ನಡೆಸಿದ ಬೆನ್ನಲ್ಲೇ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇಸಿಐಆರ್ ದಾಖಲು ಮಾಡಿದ ನಂತರ ಸಿಎಂ ಸಿದ್ದರಾಮಯ್ಯ ವಿರುದ್ಧ ದಾಳಿ ಮಾಡಲು ಇಡಿ ಅಧಿಕಾರ ಪಡೆದಿದೆ ಎಂದು ಹೇಳಲಾಗುತ್ತದೆ. ಅವರು ಯಾವುದೇ ದಾಖಲೆ ಕೇಳಿದರೂ ಮುಡಾ ನೀಡುತ್ತದೆ. ನಾವು ಅದರಲ್ಲಿ ಭಾಗಿಯಾಗುವ ಪ್ರಶ್ನೆಯೇ ಇಲ್ಲ ಎಂದರು.



ಬೈರತಿ ಸುರೇಶ್

ಸಿದ್ದರಾಮಯ್ಯ ಪಡೆದಿದ್ದ ಹಿನಕಲ್ ನಿವೇಶನವೂ ಅಕ್ರಮ: ಹೆಚ್ಡಿಕೆ ಆರೋಪ



ಮಂಡ್ಯ, ಅ.18– ಮುಖ್ಯಮಂತ್ರಿ ಸಿದ್ದರಾಮಯ್ಯ ಈ ಹಿಂದೆ ಮೈಸೂರಿನ ಹಿನಕಲ್‌ನಲ್ಲಿ ಪಡೆದಿದ್ದ ನಿವೇಶನವೂ ಅಕ್ರಮವಾಗಿದ್ದು, ಈಗಿನ ಮುಡಾದ 14 ನಿವೇಶನ ಹಂಚಿಕೆ ಬೇರೆ ವಿಚಾರವಾದರೆ, ಹಿನಕಲ್‌ನ ನಿವೇಶನದ್ದು ಬೇರೆ ವಿಚಾರವಾಗಿದೆ. ಈ ಪ್ರಕರಣದಲ್ಲಿ ಕೋರ್ಟ್ ಆದೇಶವೂ ಆಗಿದೆ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಮತ್ತೊಂದು ಅಕ್ರಮ ನಿವೇಶನದ ಬಗ್ಗೆ ಹೊಸ ಬಾಂಬ್ ಸಿಡಿಸಿದ್ದಾರೆ.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೈಸೂರಿನ ಹಿನಕಲ್‌ನಲ್ಲಿ 1986ರಲ್ಲಿ 434 ಎಕರೆ ಜಮೀನು ಹೊಸ ಬಡಾವಣೆ ಮಾಡಲು ನೋಟಿಫಿಕೇಷನ್ ಆಗಿತ್ತು. ಸರ್ವೆ ನಂ 17/4ರಲ್ಲಿ ಎಲ್ಲ ತೆಗೆದರೆ ಗೊತ್ತಾಗುತ್ತದೆ. ಸಾಕಮ್ಮ ಎಂಬುವರ ಕೈಯಲ್ಲಿ ಅರ್ಜಿ ಹಾಕಿಸಿದ್ದಾರೆ. 20 ದಿನದಲ್ಲಿ ಡಿನೋಟಿಫಿಕೇಷನ್ ಆಗುತ್ತೆ. ನಂತರ ಅದನ್ನು ಸಿದ್ದರಾಮಯ್ಯ ಅವರು ಕೊಂಡುಕೊಂಡಿದ್ದಾರೆ ಎಂದು ಮೂಡಾದಲ್ಲಿ ಮತ್ತೊಂದು ಅಕ್ರಮ ನಿವೇಶನದ ಬಗ್ಗೆ ಆರೋಪಿಸಿದ ಅವರು, ಸಿದ್ದರಾಮಯ್ಯ ಅವರು ಸತ್ಯಮೇವ ಜಯತೆ ಅನ್ನುತ್ತಾರೆ ಅದು ಇದೇನಾ ಎಂದು ವ್ಯಂಗ್ಯವಾಡಿದರು.

ಮೂಡಾ ಕಡತಗಳು ಕುಮಾರಸ್ವಾಮಿ ಮನೆಯಲ್ಲಿದೆ ಎಂಬ ಭೈರತಿ ಸುರೇಶ್ ಹೇಳಿಕೆಗೆ ಕಿಡಿಕಾರಿದ ಅವರು, ಸರ್ಕಾರ ನನ್ನ ಕೈಯ್ಯಲ್ಲಿ ಇದ್ಯಾ?. ಮೈಸೂರು ನಗರವನ್ನು 30, 40 ವರ್ಷಗಳಿಂದ ಗುತ್ತಿಗೆ ತೆಗೆದುಕೊಂಡಿದ್ದವರು ಸಿದ್ದರಾಮಯ್ಯ ಹಾಗೂ ಅವರ ಪಟಾಲಂ ಕಡೆಯವರು. ಭೈರತಿ ಸುರೇಶ್ ಹೆಲಿಕ್ಯಾಪ್ಟರ್‌ನಲ್ಲಿ ತರಾತುರಿಯಲ್ಲಿ ಯಾಕೆ ಹೋದರು?. ಅವತ್ತು ಅವರಿಗೆ ಡಾಕ್ಯುಮೆಂಟ್ ಸಿಗಲಿಲ್ವಾ?. ಹೆಲಿಕ್ಯಾಪ್ಟರ್‌ನಲ್ಲಿ ದಾಖಲೆ ತುಂಬುವುದಕ್ಕೆ ಹೋಗಿದ್ರೋ ಅಥವಾ ಹಣದ ಗಂಟು ತೆಗೆದುಕೊಂಡು ಹೋಗೋಕೆ ಹೋಗಿದ್ದರೋ ಎಂದು ಪ್ರಶ್ನಿಸಿದರು. ಮೂಡಾದಲ್ಲಿ ಮಂತ್ರಿ ಫಿಕ್ಸ್ ಮಾಡಿ ಲೂಟಿ ಮಾಡಿದ ಹಣ ತೆಗೆದುಕೊಂಡು ಬರುವುದಕ್ಕೆ ಹೋಗಿದ್ರಾ?. ಇವರೇನು ತಮಾಷೆ ಮಾಡ್ತಾರಾ?. ಮೂಡಾದಲ್ಲಿ ರುವ ಫೈಲ್‌ಗಳನ್ನು ನನ್ನ ಮನೆಯಲ್ಲಿ ತೆಗೆದುಕೊಂಡು ಹೋಗುವುದಕ್ಕೆ ನಾನು ಸರ್ಕಾರಕ್ಕಿಂತ ದೊಡ್ಡವನಾ?. 30, 40 ವರ್ಷದ ರಾಜಕೀಯದಲ್ಲಿ ವಿರೋಧ ಪಕ್ಷದ ನಾಯಕರು, ಡಿಸಿಎಂ, ಎರಡು ಬಾರಿ ಸಿಎಂ ಆಗಿದ್ದಾರೆ. ಇಷ್ಟೆಲ್ಲ ಇದ್ದು ನಾನು ಫೈಲ್‌ಗಳನ್ನು ತೆಗೆದುಕೊಂಡು ಹೋಗುವುದಕ್ಕೆ ಆಗುತ್ತದೆಯೇ? ಎಂದು ವಾಗ್ದಾಳಿ ನಡೆಸಿದರು.

ಮುಡಾದಲ್ಲೇ ವಾಸ್ತವ್ಯ ಹೂಡಿದ ಇಡಿ ಅಧಿಕಾರಿಗಳ ತಂಡ!

ಮೈಸೂರು, ಅ.18(ಆರ್‌ಕೆ)– ಇಡಿ ಅಧಿಕಾರಿಗಳು ಮುಡಾ ಕಚೇರಿಯಲ್ಲೇ ರಾತ್ರಿ ವಾಸ್ತವ್ಯ ಹೂಡಿದ್ದಾರೆ.

ಶುಕ್ರವಾರ ರಾತ್ರಿ ಊಟದ ವ್ಯವಸ್ಥೆ ಜೊತೆಗೆ ಗೂಡ್ಸ್ ಆಟೋದಲ್ಲಿ ಹಾಸಿಗೆಗಳು, ಹೊದಿಕೆ, ದಿಂಬು, ಬೆಡ್‌ಶೀಟ್‌ಗಳನ್ನು ಮುಡಾ ಕಚೇರಿಗೆ ಸಾಗಿಸಲಾಗಿದೆ. ರಾತ್ರಿ ಬಹುಹೊತ್ತಿನವರೆಗೂ ದಾಖಲೆ ಪರಿಶೀಲನೆ ನಡೆಸಿದ ಅಧಿಕಾರಿಗಳು, ಅಲ್ಲಿಯೇ ವಾಸ್ತವ್ಯ ಹೂಡಿ, ಶನಿವಾರ ಬೆಳಗ್ಗೆಯಿಂದ ತಮ್ಮ ಕಾರ್ಯ ಮುಂದುವರೆಸಲಿದ್ದಾರೆ.

ಶುಕ್ರವಾರ ಕಚೇರಿ ಆರಂಭದ ವೇಳೆಗೆ ಮುಡಾ ಮೇಲೆ ದಾಳಿ ನಡೆಸಿರುವ 12 ಇಡಿ ಅಧಿಕಾರಿಗಳು, ರಾತ್ರಿವರೆಗೂ ದಾಖಲೆಗಳ ತಲಾಶ್ ನಡೆಸಿದರು. ಮುಡಾ ಆಯುಕ್ತ, ಕಾರ್ಯದರ್ಶಿ ಸೇರಿದಂತೆ ಸಂಬಂಧಿಸಿದ ಎಲ್ಲಾ ಅಧಿಕಾರಿಗಳಿಂದ ಮಾಹಿತಿ ಪಡೆದಿದ್ದಾರೆ. ಅಧಿಕಾರಿಗಳ ಮಾಹಿತಿ ಗೊಂದಲವೆನಿಸಿದರೆ ಪ್ರಶ್ನೆಗಳ ಸುರಿಮಳೆಯೊಂದಿಗೆ ನಿಖರ ಮಾಹಿತಿ ಕಲೆ ಹಾಕುತ್ತಿದ್ದಾರೆ. ಮಧ್ಯಾಹ್ನ ಊಟವನ್ನೂ ತಾವಿದ್ದಲ್ಲೇ ತರಿಸಿಕೊಂಡಿದ್ದ ಅಧಿಕಾರಿಗಳು ಇದೀಗ ವಾಸ್ತವ್ಯಕ್ಕೂ ವ್ಯವಸ್ಥೆ ಮಾಡಿಕೊಂಡಿದ್ದಾರೆ.

ಮುಡಾ ಕಚೇರಿ ಹೊರಭಾಗದಲ್ಲಿ ಸ್ಥಳೀಯ ಸಿವಿಲ್ ಪೊಲೀಸರು ಬಂದೋಬಸ್ತ್ ಮಾಡಿದ್ದು, ಕಚೇರಿ ಒಳ ಆವರಣ ಹಾಗೂ ಇಡಿ ಅಧಿಕಾರಿಗಳಿರುವ ಕೊಠಡಿಗಳಿಗೆ ಸಿಐಎಸ್‌ಎಫ್ ಸಿಬ್ಬಂದಿ ಸರ್ಪಗಾವಲಿದ್ದಾರೆ. ಯಾರೂ ಪ್ರವೇಶಿಸದಂತೆ ಮುಖ್ಯದ್ವಾರಕ್ಕೆ ಬೀಗ ಹಾಕಿ ಭದ್ರಗೊಳಿಸಿದ್ದಾರೆ. ಈ ಎಲ್ಲಾ ಬೆಳವಣಿಗೆ ಗಮನಿಸಿದರೆ ಅಗತ್ಯ ದಾಖಲೆಗಳನ್ನು ಸಂಗ್ರಹಿಸುವವರೆಗೂ ಮುಡಾದಿಂದ ಕದಲದಿರಲು ಇಡಿ ಅಧಿಕಾರಿಗಳು ನಿರ್ಧರಿಸಿದಂತಿದೆ.

ತಹಶೀಲ್ದಾರ್ ಕಚೇರಿಗೆ ಊಟ

ಮೈಸೂರು ತಹಶೀಲ್ದಾರ್ ಕಚೇರಿಯಲ್ಲಿ ಬೆಳಗ್ಗೆಯಿಂದಲೂ ದಾಖಲೆ ಪರಿಶೀಲಿಸುತ್ತಿರುವ ಇಡಿ ಅಧಿಕಾರಿಗಳು ರಾತ್ರಿ ಊಟವನ್ನೂ ಅಲ್ಲಿಗೇ ತರಿಸಿಕೊಂಡಿದ್ದಾರೆ. ಭೂ ಮಾಪನಾ ಇಲಾಖೆ ಕಚೇರಿಯಿಂದ ಹಲವು ಕಡತಗಳನ್ನು ತಹಶೀಲ್ದಾರ್ ಕಚೇರಿಗೆ ತರಿಸಿಕೊಂಡು ಪರಿಶೀಲಿಸಿದ್ದಾರೆ. ತಹಶೀಲ್ದಾರ್ ಮಹೇಶ್ ಕುಮಾರ್ ಅವರಿಂದ ಅಗತ್ಯ ಮಾಹಿತಿ ಕಲೆ ಹಾಕುತ್ತಿದ್ದಾರೆ. ರಾತ್ರಿ ಬಹುಹೊತ್ತಿನ ವರೆಗೂ ತಹಶೀಲ್ದಾರ್ ಕಚೇರಿಯಲ್ಲೇ ಇದ್ದರು. ನಜರ್‌ಬಾದ್ ಠಾಣೆ ಇನ್ಸ್‌ಪೆಕ್ಟರ್ ಎಂ.ಮಹದೇವಸ್ವಾಮಿ, ಸಬ್‌ಇನ್ಸ್‌ಪೆಕ್ಟರ್ ಶ್ರೀನಿವಾಸ್ ಆರ್. ಪಾಟೀಲ್ ಹಾಗೂ ಸಿಬ್ಬಂದಿ ಮತ್ತು ಸಿಐಎಸ್‌ಎಫ್ ಸಿಬ್ಬಂದಿ ಕಚೇರಿಗೆ ಬಿಗಿ ಬಂದೋಬಸ್ತ್ ಮಾಡಿದ್ದರು.

ಮೈಸೂರು ಮಿತ್ರ ಶನಿವಾರ 19 ಅಕ್ಟೋಬರ್ 2024

ಯುವ ಜನರಿಗೆ ಉದ್ಯೋಗ ಕೊಡಲು ಕೈಗಾರಿಕಾ ಇಲಾಖೆಯಿಂದ ವಿಂಗ್ ಸ್ಥಾಪನೆ

- ಮಂಡ್ಯ ಉದ್ಯೋಗ ಮೇಳದಲ್ಲಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಮಹತ್ವದ ಘೋಷಣೆ
- ಒಂದೂವರೆ ಸಾವಿರ ಮಂದಿಗೆ ಕೆಲಸ ಸಿಗುವ ನಿರೀಕ್ಷೆ
- ದೇಶಾದ್ಯಂತ ನನ್ನ ಇಲಾಖೆ ಮೂಲಕ ಉದ್ಯೋಗ ಸೃಷ್ಟಿಗೆ ಮೊದಲ ಆದ್ಯತೆ
- ಮೈಸೂರು ಸೇರಿ ರಾಜ್ಯದ ಬೃಹತ್ ನಗರಗಳಲ್ಲಿ ಕೈಗಾರಿಕೋದ್ಯಮ ತರಲು ಚಿಂತನೆ
- ಮಳವಳ್ಳಿ, ಶ್ರೀರಂಗಪಟ್ಟಣ, ನಾಗಮಂಗಲದಲ್ಲಿ ಕಾರ್ಖಾನೆಗಳ ಸ್ಥಾಪನೆ



ಮಂಡ್ಯದ ಸರ್ ಎಂ.ವಿಶ್ವೇಶ್ವರಯ್ಯ ಕ್ರೀಡಾಂಗಣದಲ್ಲಿ ನಡೆದ ಬೃಹತ್ ಉದ್ಯೋಗ ಮೇಳವನ್ನು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಉದ್ಘಾಟಿಸಿದರು. ಈ ವೇಳೆ ಮಾಜಿ ಸಚಿವ ಕೆ.ಎಸ್.ಪುಟ್ಟರಾಜು ಸೇರಿದಂತೆ ಇನ್ನಿತರರಿದ್ದರು.

ಮಂಡ್ಯ, ಅ.18(ಮೋಹನ್‌ರಾಜ್)– ಕರ್ನಾಟಕ ಸೇರಿದಂತೆ ದೇಶದ ನಿರುದ್ಯೋಗಿ ಯುವಕ–ಯುವತಿಯರಿಗೆ ಉದ್ಯೋಗ ಕಲ್ಪಿಸುವ ನಿಟ್ಟಿನಲ್ಲಿ ಕೇಂದ್ರ ಕೈಗಾರಿಕಾ ಇಲಾಖೆಯಿಂದ ವಿಂಗ್ ಸ್ಥಾಪನೆಗೆ ನಿರ್ಧರಿಸಲಾಗಿದೆ ಎಂದು ಕೇಂದ್ರದ ಉಕ್ಕು ಹಾಗೂ ಭಾರೀ ಕೈಗಾರಿಕಾ ಸಚಿವ ಹೆಚ್.ಡಿ. ಕುಮಾರಸ್ವಾಮಿ ತಿಳಿಸಿದರು.

ಶುಕ್ರವಾರ ನಗರದ ಸರ್ ಎಂ.ವಿಶ್ವೇಶ್ವರಯ್ಯ ಕ್ರೀಡಾಂಗಣದಲ್ಲಿ ಹೆಚ್.ಡಿ.ಕುಮಾರಸ್ವಾಮಿ ಅವರ ನೇತೃತ್ವದಲ್ಲಿ ಕೇಂದ್ರ ಕೈಗಾರಿಕಾ ಇಲಾಖೆ, ಜಿಲ್ಲಾಡಳಿತ ಹಾಗೂ ವಿವಿಧ ಖಾಸಗಿ ಸಂಸ್ಥೆಗಳ ಸಹಕಾರದೊಂದಿಗೆ ಆಯೋಜಿಸಲಾಗಿದ್ದ ಬೃಹತ್ ಉದ್ಯೋಗ ಮೇಳ (ಮಂಡ್ಯ ಟು ಇಂಡಿಯಾ)ಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ದೇಶದ ಪ್ರಮುಖ ಸಮಸ್ಯೆಯೇ ನಿರುದ್ಯೋಗವಾಗಿದೆ. ಕೇಂದ್ರದ ಕೈಗಾರಿಕಾ ಸಚಿವನಾಗಿ ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸುವುದೇ ನನ್ನ ಮೊದಲ ಆದ್ಯತೆ ಎಂದು ಸ್ಪಷ್ಟಪಡಿಸಿದರು.

ಮಂಡ್ಯದಲ್ಲಿ ನಡೆಯುತ್ತಿರುವ ಇಂದಿನ ಉದ್ಯೋಗ ಮೇಳಕ್ಕೆ ಬಿಎಚ್‌ಎಲ್, ಎಚ್‌ಎಎಲ್, ಇಂಡಿಯನ್ ಆರ್ಮಿ, ಆಟೋ ಮೊಬೈಲ್ಸ್ ಕಂಪನಿಗಳು ಸೇರಿದಂತೆ 70ಕ್ಕೂ ಹೆಚ್ಚು ಖಾಸಗಿ ಸಂಸ್ಥೆಗಳು ಉದ್ಯೋಗ ನೀಡಲು ಆಗಮಿಸಿವೆ. ಈ ಎಲ್ಲಾ ಸಂಸ್ಥೆಗಳಿಗೂ ನಾನು ಕೃತಜ್ಞತೆ ಸಲ್ಲಿಸುವೆ. ಈ ಒಂದು ಉದ್ಯೋಗ ಮೇಳಕ್ಕೆ ನನ್ನೊಂದಿಗೆ ಕೇಂದ್ರ ಕೈಗಾರಿಕಾ ಇಲಾಖೆ ಸಹ ಸೇರಿ ನಿರುದ್ಯೋಗಿಗಳಿಗೆ ನೌಕರಿ ಒದಗಿಸಲು ಕೈಜೋಡಿಸಿರುವುದು ಪ್ರಶಂಸನೀಯ ಎಂದರು.

ಕೇಂದ್ರ ಕೈಗಾರಿಕಾ ಇಲಾಖೆಯ ಸಹಕಾರದಿಂದ ನೂತನ ಆಟೋ ಮೊಬೈಲ್ಸ್ ಇಂಡಸ್ಟ್ರಿಗಳು, ಎಲೆಕ್ಟ್ರಾನಿಕ್ ಸರ್ವೀಸ್ ಸಂಸ್ಥೆಗಳು ಆರಂಭವಾಗಿದ್ದು, ಇವುಗಳ ಸದುಪಯೋಗವನ್ನು ನಿರುದ್ಯೋಗಿಗಳು ಪಡೆದುಕೊಳ್ಳಬೇಕು. ಐಟಿಐ, ಎಲೆಕ್ಟ್ರಾನಿಕ್ ಇಂಜಿನಿಯರ್‌ಗಳಿಗೆ ಕೈಗಾರಿಕಾ ಇಲಾಖೆಯಲ್ಲಿ ಉದ್ಯೋಗಗಳಿಗೆ ಮುಕ್ತ ಅವಕಾಶಗಳಿವೆ. ಇದರ ಜೊತೆಗೆ ಎಸ್‌ಎಸ್‌ಎಲ್‌ಸಿ, ಪಿಯುಸಿ ಉತ್ತೀರ್ಣರಾಗಿರುವವರಿಗೆ ಉದ್ಯೋಗ ಮೇಳಕ್ಕೆ ಕಂಪನಿಗಳು ಬಂದಿವೆ. ಆದರೆ ಬೆಂಗಳೂರಿಗೆ ತೆರಳಿ ಕೇವಲ 15 ಸಾವಿರ ವೇತನ ಪಡೆಯಲು ನಮ್ಮ ಜಿಲ್ಲೆಯ ಯುವಕ, ಯುವತಿಯರು ಹಿಂದೇಟು ಹಾಕುತ್ತಿದ್ದಾರೆ. ಮಂಡ್ಯ ಸುತ್ತಮುತ್ತಲ ಪ್ರದೇಶದಲ್ಲಿ ಉದ್ಯೋಗ ಕಲ್ಪಿಸುವಂತೆ ಕೋರಿದ್ದಾರೆ. ಅವರ ಮನವಿಯನ್ನು ಪುರಸ್ಕರಿಸಲಾಗುವುದು ಎಂದು ಹೇಳಿದರು.

ಮಂಡ್ಯ ಉದ್ಯೋಗ ಮೇಳದಲ್ಲಿ ಯುವಕ, ಯುವತಿಯರಿಗೆ ಒಳ್ಳೆಯ ಉದ್ಯೋಗ ಸಿಗುವ ವಿಫುಲ ಅವಕಾಶಗಳಿದ್ದು, ಅವುಗಳನ್ನು ನಿರುದ್ಯೋಗಿಗಳು ಸದ್ಬಳಕೆ ಮಾಡಿಕೊಳ್ಳಬೇಕು. ಈ ಉದ್ಯೋಗ ಮೇಳದಲ್ಲಿ ಕನಿಷ್ಟ ಒಂದೂವರೆ ಸಾವಿರ ಮಂದಿಗೆ ಉದ್ಯೋಗ ಸಿಗುವ ಭರವಸೆ ಇದೆ. ಕಂಪ್ಯೂಟರ್ ಇಂಜಿನಿಯರ್ ಸೇರಿದಂತೆ ಉನ್ನತ ವ್ಯಾಸಾಂಗ ಮಾಡಿರುವ ಅನೇಕರು ಸಹ ಉದ್ಯೋಗಕ್ಕಾಗಿ ಬಂದಿದ್ದಾರೆ. ಅವರಿಗೆ ಸಂಬಂಧಿಸಿದ ಖಾಸಗಿ ಕಂಪನಿಗಳು ಇಲ್ಲಿಗೆ ಆಗಮಿಸಿಲ್ಲ. ಆದರೆ ಅವರು ಧೃತಿಗೆಡುವ ಅವಶ್ಯಕತೆ ಇಲ್ಲ. ಅವರ ಅರ್ಜಿಗಳನ್ನು ಈಗಾಗಲೇ ಪಡೆದುಕೊಳ್ಳುತ್ತಿದ್ದು, ಡಿಸೆಂಬರ್ ವೇಳೆಗೆ ಉನ್ನತ ವ್ಯಾಸಾಂಗ ಮಾಡಿರುವ ಅರ್ಜಿದಾರರು ಸೇರಿದಂತೆ, ಮೇಳದಲ್ಲಿ ತಕ್ಷಣಕ್ಕೆ ಉದ್ಯೋಗ ಸಿಗದ ಇನ್ನಿತರ ಅರ್ಜಿದಾರರಿಗೆ ಉದ್ಯೋಗವನ್ನು ಕಲ್ಪಿಸಲಾಗುವುದು ಎಂದು ಭರವಸೆ ನೀಡಿದರು.

ಕೇವಲ ಖಾಸಗಿ ಕಂಪನಿಗಳು ಮಾತ್ರವಲ್ಲದೇ ಇಂಡಿಯನ್ ಆರ್ಮಿಯವರು ಸಹ ಉದ್ಯೋಗ ಕಲ್ಪಿಸಲು ಮಂಡ್ಯಕ್ಕೆ ಆಗಮಿಸಿದ್ದು, ಇಂಡಿಯನ್ ಆರ್ಮಿಯಲ್ಲಿ ಸೈನಿಕ ಹುದ್ದೆ ಸೇರಿದಂತೆ ಅರ್ಮಿಯ ವಿವಿಧ ಹುದ್ದೆಗಳಿಗೆ ಮಾಹಿತಿಯನ್ನು ಕೊಡಲು ಬಂದಿದ್ದಾರೆ. ಇದರ ಸದುಪಯೋಗವನ್ನು ಆರ್ಮಿಯಲ್ಲಿ ಸೇವೆ ಸಲ್ಲಿಸಲು ಇಚ್ಚಿಸುವವರು ಪಡೆದುಕೊಳ್ಳಬಹುದಾಗಿದೆ ಎಂದು ಹೇಳಿದರು. ನಾನು ಸಂಸತ್ ಚುನಾವಣೆಗೆ ನಿಂತಾಗ ಜಿಲ್ಲೆಯಲ್ಲಿ ನಿರುದ್ಯೋಗವೇ ಬಹುದೊಡ್ಡ ಸಮಸ್ಯೆಯಾಗಿರುವುದು ನನ್ನ ಗಮನಕ್ಕೆ ಬಂತು. ಈ ನಿಟ್ಟಿನಲ್ಲಿ ಜನ ನನ್ನ ಮೇಲೆ ನಂಬಿಕೆ ಇಟ್ಟು ಉದ್ಯೋಗ ಕಲ್ಪಿಸಬಹುದೆಂಬ ಕಾರಣಕ್ಕೆ ನನಗೆ ಮತ ಕೊಟ್ಟಿದ್ದಾರೆ. ಮಂಡ್ಯ ಜನರ ವಿಶ್ವಾಸವನ್ನು ನಾನು ಉಳಿಸಿಕೊಳ್ಳುವೆ. ನಾನು ದೇಶದ ಪ್ರವಾಸ ಮಾಡಿದರೂ ನನ್ನ ಗಮನ ಕರ್ನಾಟಕ ಮತ್ತು ಮಂಡ್ಯ ಜಿಲ್ಲೆಯ ಮೇಲಿರುತ್ತದೆ. ನನ್ನ ರಾಜ್ಯದ ಜನಕ್ಕೆ ನನ್ನ ಕೈಲಾದ ಕೆಲಸಗಳನ್ನು ಮಾಡಿಕೊಡುವೆ ಎಂದರು.

ಮಂಡ್ಯ, ಮೈಸೂರು, ತುಮಕೂರು, ಹಾಸನ, ಕಲ್ಯಾಣ ಕರ್ನಾಟಕ, ಕಿತ್ತೂರು ಕರ್ನಾಟಕದ ಹಲವು ನಗರಗಳಲ್ಲಿ ಬೃಹತ್ ಕೈಗಾರಿಕೋದ್ಯಮ ಸ್ಥಾಪಿಸಬೇಕೆಂಬ ಚಿಂತನೆ ನನಗಿದ್ದು, ಅದಕ್ಕಾಗಿ ಬಂಡವಾಳ ಹೂಡಿಕೆದಾರರು ಮುಂದೆ ಬಂದಿದ್ದಾರೆ. ಇದಕ್ಕೆ ನನ್ನ ಜೊತೆಗೆ ರಾಜ್ಯ ಸರ್ಕಾರದ ಸಹಕಾರ ಸಹ ಬೇಕು. ಆದ್ದರಿಂದ ಕೈಗಾರಿಕೋದ್ಯಮಿಗಳ ಜೊತೆಗೆ ಚರ್ಚೆ ನಡೆಸಿದ್ದು, ಕೆಲಸಗಳು ಶೀಘ್ರ ಪ್ರಾರಂಭವಾಗಲಿವೆ ಎಂದು ತಿಳಿಸಿದರು.

ಕೇಂದ್ರದ ಕೈಗಾರಿಕಾ ಸಚಿವನಾಗಿರುವ ನನ್ನ ಜೊತೆಗೆ ಕೈಗಾರಿಕಾಭಿವೃದ್ಧಿ ಬಗ್ಗೆ ಚರ್ಚಿಸಲು ರಾಜ್ಯ ಸರ್ಕಾರದ ಒಬ್ಬ ಮಂತ್ರಿಯೂ ನನ್ನನ್ನು ಭೇಟಿಯಾಗಿಲ್ಲ. ಅವರಿಗೆ ರಾಜ್ಯವನ್ನು ಅಭಿವೃದ್ಧಿ ಮಾಡಬೇಕೆಂಬ ಹೃದಯ ವೈಶಾಲ್ಯತೆ ಇಲ್ಲ. ಪರಸ್ಪರ ವಿಶ್ವಾಸದಿಂದ ನಮ್ಮ ರಾಜ್ಯವನ್ನು ಅಭಿವೃದ್ಧಿ ಮಾಡಲು ಕೇಂದ್ರ ಸರ್ಕಾರದೊಂದಿಗೆ ರಾಜ್ಯ ಸರ್ಕಾರ ಕೈಜೋಡಿಸಬೇಕು. ಕೇಂದ್ರ ಸರ್ಕಾರದೊಂದಿಗೆ ಸಂಘರ್ಷ ಮಾಡಿದರೆ ಅಭಿವೃದ್ಧಿ ಅಸಾಧ್ಯ ಎಂದರು.

ಮಂಡ್ಯ ಜಿಲ್ಲೆಗೆ ವಿಶೇಷವಾಗಿ ಮಳವಳ್ಳಿ, ನಾಗಮಂಗಲ, ಶ್ರೀರಂಗಪಟ್ಟಣದಲ್ಲಿ ಗಾರ್ಮೆಂಟ್ಸ್‌ಗಳ ಸ್ಥಾಪನೆಗೆ ಸಿದ್ಧತೆ ನಡೆಯುತ್ತಿದೆ. ಇದರಿಂದ ಕೇವಲ ಮಂಡ್ಯ ಮಾತ್ರವಲ್ಲದೇ ಅಕ್ಕಪಕ್ಕದ ಜಿಲ್ಲೆಗಳ ಮಹಿಳೆಯರಿಗೆ ತಮ್ಮೂರಿನ ಸಮೀಪದಲ್ಲೇ ಕೆಲಸ ಸಿಕ್ಕಂತಾಗುತ್ತದೆ. ಇದರ ಜೊತೆಗೆ ಕೇಂದ್ರ ಕೈಗಾರಿಕಾ ಇಲಾಖೆ ಸುಪರ್ದಿಗೆ ಬರುವ ಹಲವು ಕಾರ್ಖಾನೆಗಳು ಮುಚ್ಚಿ ಹೋಗಿದ್ದು, ಎಚ್‌ಎಂಟಿ ಸೇರಿದಂತೆ ಅನೇಕ ಕಾರ್ಖಾನೆಯನ್ನು ಪುನಶ್ಚೇತನಗೊಳಿಸಿ ಪುನರಾರಂಭ ಮಾಡಲಾಗುವುದು. ಒಟ್ಟಾರೆ ನಿರುದ್ಯೋಗಿ ಯುವಕ, ಯುವತಿಯರಿಗೆ ಉದ್ಯೋಗ ಸೃಷ್ಟಿ ಮಾಡುವುದೇ ನನ್ನ ಗುರಿ ಎಂದು ತಿಳಿಸಿದರು.

ವೇದಿಕೆಯಲ್ಲಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್‌ಬಾಬು, ಶಾಸಕರಾದ ಹೆಚ್.ಟಿ.ಮಂಜು, ಕೆ.ವಿವೇಕಾನಂದ, ಮಾಜಿ ಶಾಸಕರಾದ ಡಾ.ಕೆ.ಅನ್ನದಾನಿ, ರವೀಂದ್ರ ಶ್ರೀಕಂಠಯ್ಯ, ಸಾ.ರಾ.ಮಹೇಶ್, ಜಿ.ಬಿ.ಶಿವಕುಮಾರ್, ದೊಡ್ಡನಗೌಡ ನರಿಬೋಳ್, ಕೆ.ಟಿ.ಶ್ರೀಕಂಠೇಗೌಡ, ಮನ್‌ಮುಲ್ ಮಾಜಿ ಅಧ್ಯಕ್ಷ ಬಿ.ಆರ್.ರಾಮಚಂದ್ರ, ವಿವಿಧ ಖಾಸಗಿ ಕಂಪನಿಗಳ ಮುಖ್ಯಸ್ಥರಾದ ಕೊಹ್ಲಿ, ಶಿವಮೂರ್ತಿ, ಸುರೇಂದ್ರನಾಥ್, ರವಿಕುಮಾರ್, ಪಿ.ಎಂ.ಶರ್ಮಾ, ಸಂಜಯ್ ಬಂಗಾರ್, ಅಮಿತಾಬ್ ಮುಖರ್ಜಿ, ಪಿಇಟಿ ಅಧ್ಯಕ್ಷ ಕೆ.ಎಸ್.ವಿಜಯಾನಂದ, ನಗರಸಭೆ ಅಧ್ಯಕ್ಷ ಎಂ.ವಿ.ಪ್ರಕಾಶ್, ಉಪಾಧ್ಯಕ್ಷ ಎಂ.ಪಿ. ಅರುಣ್‌ಕುಮಾರ್, ದಿಶಾ ಸಮಿತಿ ಸದಸ್ಯೆ ವಿದ್ಯಾ ನಾಗೇಂದ್ರ, ಮನ್‌ಮುಲ್ ನಿರ್ದೇಶಕಿ ರೂಪಾ, ಕೇಂದ್ರ ಸಚಿವರಾದ ಆಪ್ತ ಕಾರ್ಯದರ್ಶಿ ಬಿ.ಎನ್.ಕೃಷ್ಣಯ್ಯ, ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್ ಸೇರಿದಂತೆ ಹಲವು ಮಂದಿ ಉಪಸ್ಥಿತರಿದ್ದರು.

ಉದ್ಯೋಗ ಮೇಳ ಯಶಸ್ವಿ, ಮೂರು ಸಾವಿರಕ್ಕೂ ಅಧಿಕ ಉದ್ಯೋಗಾಕಾಂಕ್ಷಿಗಳು ಭಾಗಿ

ಮಂಡ್ಯ: ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಆಯೋಜಿಸಿದ್ದ ಉದ್ಯೋಗ ಮೇಳದಲ್ಲಿ ಸುಮಾರು ಮೂರು ಸಾವಿರಕ್ಕೂ ಅಧಿಕ ಉದ್ಯೋ ಗಾಕಾಂಕ್ಷಿಗಳು ಭಾಗಿಯಾಗಿದ್ದು, ಈ ಪೈಕಿ ಒಂದೂವರೆ ಸಾವಿರಕ್ಕೂ ಅಧಿಕ ಮಂದಿಗೆ ಉದ್ಯೋಗ ಸಿಗುವ ಸಾಧ್ಯತೆ ಇದೆ.

ಇಂಡಿಯನ್ ಆರ್ಮಿ ಸೇರಿದಂತೆ ದೇಶದ ಪ್ರತಿಷ್ಠಿತ ಕಂಪನಿಗಳಾದ ಎಚ್‌ಎಎಲ್, ಆಟೋ ಮೊಬೈಲ್ಸ್, ಬಿಇಎಂಎಲ್, ಬಿಎಚ್‌ಎಎಲ್, ನೀತಿ ಇಲಾಖೆ, ಹೋಂಡಾ, ಟಿವಿಎಸ್, ಟಯೋಟಾ ಸೇರದಿಂತೆ ಸುಮಾರು 70ಕ್ಕೂ ಹೆಚ್ಚು ಕಂಪನಿಗಳು ಆಗಮಿಸಿದ್ದವು.

ಸರ್‌ಎಂವಿ ಕ್ರೀಡಾಂಗಣದಲ್ಲಿ ಸುಮಾರು 150 ಸ್ಟಾಲ್‌ಗಳನ್ನು ತೆರೆಯಲಾಗಿತ್ತು. ಗೇಟ್ ಆವರಣದಲ್ಲೇ ಎರಡು ಸರದಿ ಸಾಲುಗಳನ್ನು ಮಾಡಿ, ಉದ್ಯೋಗಾಕಾಂಕ್ಷಿಗಳು ತಮ್ಮ ಹೆಸರು ನೋಂದಾವಣಿ ಮಾಡಿ, ಯಾವ ವಿದ್ಯಾಭ್ಯಾಸ ಮಾಡಿ, ಯಾವ ಕಂಪನಿಯ ಉದ್ಯೋಗ ಪಡೆಯಲು ನಿರೀಕ್ಷಿಸಿದ್ದಾರೆಂಬ ಮಾಹಿತಿ ಪಡೆದು, ಅವರ ವಿದ್ಯಾಭ್ಯಾಸಕ್ಕೆ ತಕ್ಕಂತೆ 70ಕ್ಕೂ ಅಧಿಕ ಕಂಪನಿಗಳ ಸ್ಟಾಲ್‌ಗಳ ಪೈಕಿ ಇಂತಹ ಸ್ಟಾಲ್ ಬಳಿಗೆ ತೆರಳುವಂತೆ ಸಿಬ್ಬಂದಿಗಳು ಮಾಹಿತಿ ಕೊಡುತ್ತಿದ್ದ ದೃಶ್ಯ ಕಂಡು ಬಂತು.



ಮೇಳದಲ್ಲಿ ಭಾಗಿಯಾಗಿದ್ದ ಉದ್ಯೋಗಾಕಾಂಕ್ಷಿಗಳು.

ಇಂದು ಬಹುತೇಕ ಯುವ ಜನರು, ಉದ್ಯೋಗಕ್ಕಾಗಿ ಅರ್ಜಿ ಸಲ್ಲಿಸಿದ್ದು, ಉದ್ಯೋಗ ಸಿಕ್ಕವರ ಹೆಸರನ್ನು ನಾಳೆ ಘೋಷಿಸಿ, ಸ್ಥಳದಲ್ಲೇ ಅವರಿಗೆ ಆಫರ್ ಲೆಟರ್ ಕೊಡಲಾಗುವುದು ಎಂದು ಸ್ವತ: ಕುಮಾರಸ್ವಾಮಿ ತಿಳಿಸಿದ್ದಾರೆ. ಉದ್ಯೋಗ ಸಿಗದವರಿಗೆ ಡಿಸೆಂಬರ್ ವೇಳೆಗೆ ಇತರೆ ಕಂಪನಿಗಳು ಉದ್ಯೋಗ ಮಂಜೂರು ಮಾಡಿ, ಅವರ ಮನೆಗೆ ಆಫರ್ ಲೆಟರ್ ಕಳುಹಿಸಲಿದ್ದಾರೆ ಎಂದು ಹೇಳಲಾಗಿದೆ. ಇನ್ನು ಉದ್ಯೋಗ ಅರಸಿ ಬಂದಿದ್ದ ಎಲ್ಲರಿಗೂ ಊಟ, ನೀರು ಹಾಗೂ ಶೌಚಾಲಯದ ವ್ಯವಸ್ಥೆ ಕಲ್ಪಿಸಲಾಗಿತ್ತು. ಉದ್ಯೋಗ ಮೇಳಕ್ಕೆ ನೂರಾರು ಪೊಲೀಸ ರನ್ನು ನಿಯೋಜನೆ ಮಾಡಲಾಗಿತ್ತು. ಉದ್ಯೋಗ ಮೇಳ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಡಾ. ಕುಮಾರ ಹಾಗೂ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಸಹ ಪಾಲ್ಗೊಂಡಿದ್ದರು.

ಕನ್ನಡಹಬ್ಬ ಸಂಭ್ರಮ: ಅಕ್ಷರ ಜಾತ್ರೆಗೆ ಕವನಗಳು, ಸಾಧಕರಿಂದ ಅರ್ಜಿ ಆಹ್ವಾನ

ಮಂಡ್ಯ, ಅ.18– ಮಂಡ್ಯದಲ್ಲಿ ನಡೆಯುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಡಾ.ಜೀಶಂಪ ಸಾಹಿತ್ಯ ವೇದಿಕೆ, ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಫಿಲಂಸ್ ಸಂಯುಕ್ತಾಶ್ರಯದಲ್ಲಿ ಕನ್ನಡಹಬ್ಬ ಸಂಭ್ರಮ ಅಂಗವಾಗಿ ಅಖಿಲ ಭಾರತ ಸಾಹಿತ್ಯ ಸಮ್ಮೇಳನ ನಿಮಿತ್ತ ನ.17 ರಂದು ಭಾನುವಾರ ಮಂಡ್ಯ ನಗರ ಗಾಂಧಿ ಭವನದಲ್ಲಿ 9ನೇ ಕನ್ನಡ ಅಕ್ಷರ ಜಾತ್ರೆಯನ್ನು ಆಯೋಜಿಸಿದ್ದು, ಆಸಕ್ತರಿಂದ ಕವಿಗೋಷ್ಠಿಗೆ ಕವನವನ್ನು ಹಾಗೂ ಸಾಧಕರಿಂದ ವಿವಿಧ ಪ್ರಶಸ್ತಿಗೆ ಅರ್ಜಿಯನ್ನು ಆಹ್ವಾನಿಸಿದೆ.

ಆಸಕ್ತರು 20 ಸಾಲಿನ ಎರಡು ಕವನಗಳು, ಕಿರು ಪರಿಚಯ, ಫೋಟೋ, ಮೊಬೈಲ್ ಸಂಖ್ಯೆ ಹಾಗೂ ವಿಳಾಸವನ್ನು ಅ.25ರೊಳಗೆ ಕಳುಹಿಸಬೇಕು. ವ್ಯಾಟ್ಸಪ್ ಮೂಲಕ ಕಳುಹಿಸಬೇಕು. ಕವನಗಳು ಯಾವುದಾದರೂ ವಿಷಯವನ್ನು ಒಳಗೊಂಡಿರಬಹುದು. ಆಯ್ಕೆಯಾದ ಕವಿತೆಗಳನ್ನು ಪುಸ್ತಕ ರೂಪದಲ್ಲಿ ಹೊರತರಲಾಗುವುದು. ಐವತ್ತು ಮಂದಿ ಕವಿಗಳಿಗೆ ಕವಿಗೋಷ್ಠಿಯಲ್ಲಿ ಅವಕಾಶ ಕಲ್ಪಿಸಲಾಗುವುದು. ಇಪ್ಪತ್ತು ಉತ್ತಮ ಕವನಗಳಿಗೆ 'ಕಾವ್ಯಶ್ರೀ', ಇಪ್ಪತ್ತು ಮಂದಿ ಸಾಧಕರಿಗೆ 'ಕನ್ನಡರತ್ನ', ಐದು ಮಂದಿಗೆ ಕರ್ನಾಟಕ ಸೇವಾ ರತ್ನ ರಾಜ್ಯ ಮಟ್ಟದ ಪ್ರಶಸ್ತಿ ನೀಡಿ ಗೌರವಿಸಲಾಗುವುದು. ವಿವರಕ್ಕಾಗಿ ಕವನಗಳು ಮತ್ತು ಪ್ರಶಸ್ತಿಗೆ ವಿವರಗಳನ್ನು ಎಸ್. ಕೃಷ್ಣಸ್ವರ್ಣಸಂದ್ರ ವ್ಯಾಟ್ಸಾಪ್ ನಂ–9448424380ಗೆ ಕಳುಹಿಸಬೇಕಾಗಿ ಪ್ರಕಟಣೆಯಲ್ಲಿ ವಿನಂತಿಸಲಾಗಿದೆ.

ನನ್ನ ಆಸಕ್ತಿ ಪಕ್ಷ ಸಂಘಟಿಸುವ ಗುರಿ: ನಿಖಿಲ್



ಮಂಡ್ಯ, ಅ.18– ನನ್ನ ಆಸಕ್ತಿ ಪಕ್ಷ ಸಂಘಟನೆಯದ್ದಾಗಿದ್ದು, ರಾಜ್ಯ ಪ್ರವಾಸ ಮಾಡುತ್ತಿದ್ದೇನೆ. ಚನ್ನಪಟ್ಟಣ ಸೇರಿದಂತೆ ಮೂರು ಕ್ಷೇತ್ರಗಳ ಅಭ್ಯರ್ಥಿ ಆಯ್ಕೆ ಬಗ್ಗೆ ಹಿರಿಯ ನಾಯಕರು ಚರ್ಚೆ ನಡೆಸಿ ತೀರ್ಮಾನ ಕೈಗೊಳ್ಳುತ್ತಾರೆ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್‌ಕುಮಾರಸ್ವಾಮಿ ಹೇಳಿದರು. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚನ್ನಪಟ್ಟಣ ಉಪಚುನಾವಣೆ ಚರ್ಚೆಗೆ ಗ್ರಾಸವಾಗಿದೆ. ಬಿಜೆಪಿ–ಜೆಡಿಎಸ್ ಸಮನ್ವಯತೆಗಾಗಿ ಅ.19ರಂದು ಶಿಗ್ಗಾವಿ, ಸಂಡೂರಿಗೆ ಭೇಟಿ ಕೊಡುತ್ತಿದ್ದೇನೆ. ಮೂರು ಕ್ಷೇತ್ರದ ಅಭ್ಯರ್ಥಿ ಆಯ್ಕೆಗೆ ಬಿಜೆಪಿ, ಜೆಡಿಎಸ್ ನಾಯಕರು ಕೂತು ಚರ್ಚೆ ಮಾಡುತ್ತಾರೆ. ನಾಳೆ ಬಿ.ಎಸ್. ಯಡಿಯೂರಪ್ಪ, ವಿಜಯೇಂದ್ರರೊಂದಿಗೆ ಚರ್ಚೆ ಮಾಡುವ ಸಾಧ್ಯತೆ ಇದೆ. ನಂತರ ಎನ್‌ಡಿಎ ಅಭ್ಯರ್ಥಿ ಯಾರು ಎಂಬ ಘೋಷಣೆಯಾಗಲಿದೆ ಎಂದರು. ಮಾಜಿ ಸಚಿವ ಸಿ.ಪಿ.ಯೋಗೇಶ್ವರ್ ನಿಂತರಷ್ಟೇ ಗೆಲುವು ಎಂಬ ಅರವಿಂದ್ ಬೆಲ್ಲದ್ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಪ್ರಜಾಪ್ರಭುತ್ವದಲ್ಲಿ ಅವರವರ ಅಭಿಪ್ರಾಯ ವ್ಯಕ್ತಪಡಿಸಲು ಅಧಿಕಾರವಿದೆ. ಅಂತಿಮವಾಗಿ ಹಿರಿಯ ನಾಯಕರ ಸಮ್ಮುಖದಲ್ಲಿ ನಿರ್ಣಯ ಆಗಬೇಕಿದೆ. ಪಕ್ಷಕ್ಕೋಸ್ಕರ ತೀರ್ಮಾನ ತೆಗೆದುಕೊಂಡಾಗ ನಿಖಿಲ್ ಪ್ರಶ್ನೆ ಬರಲ್ಲ. ಕಾರ್ಯಕರ್ತನಿಗೆ ಎನ್‌ಡಿಎ ಟಿಕೆಟ್ ಕೊಟ್ಟರೂ ಪಕ್ಷದ ಪರ ನಮ್ಮ ಸಹಕಾರ ಇರಲಿದೆ ಎಂದು ಸ್ಪಷ್ಟಪಡಿಸಿದರು.

ಒಂದನೇ ಪುಟದಿಂದ

ಇಡಿ ಹಿಡಿತದಲ್ಲಿ ಮುಡಾ

ಇಂಜಿನಿಯರ್, ಎಲ್ಲಾ ವಲಯ ಕಚೇರಿಗಳ ವ್ಯವಸ್ಥಾಪಕರು ಹಾಜರಿದ್ದು, ಅವರು ಕೇಳಿದ ದಾಖಲೆ ಒದಗಿಸುವುದರ ಜೊತೆಗೆ ಅವರ ಪ್ರಶ್ನೆಗಳಿಗೆ ಉತ್ತರಿಸಿದರು. ಹಿಂದಿನ ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ ಮುಡಾ ನಿವೇಶನಗಳ ಅಕ್ರಮ ಮಂಜೂರಾತಿ ಬಗ್ಗೆ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿಗಳಿಗೆ ಸುದೀರ್ಘ ಮಾಹಿತಿಯೊಂದಿಗೆ ಬರೆದಿದ್ದ ಪತ್ರದ ಪ್ರತಿ, ಕಾರಣ ಕೇಳಿ ಮುಡಾ ಹಿಂದಿನ ಆಯುಕ್ತ ಜಿ.ಟಿ. ದಿನೇಶ್‌ಕುಮಾರ್‌ಗೆ ಸರ್ಕಾರ ನೀಡಿದ್ದ ನೋಟಿಸ್ ಪ್ರತಿ, ಸಿಎಂ ಸಿದ್ದರಾಮಯ್ಯರ ಪತ್ನಿ ಬಿ.ಎಂ.ಪಾರ್ವತಿ ಅವರಿಗೆ ಮಂಜೂರಾಗಿದ್ದ 14 ನಿವೇಶನಗಳ ದಾಖಲೆ ಪತ್ರದ ಆಧಾರದಲ್ಲಿ ಇಡಿ ಅಧಿಕಾರಿಗಳು ಮಾಹಿತಿ ಕಲೆ ಹಾಕಿದರು ಎನ್ನಲಾಗಿದೆ.

ಭೂಸ್ವಾಧೀನ ಪ್ರಕ್ರಿಯೆಗೊಳಪಡಿಸದೇ ಬಳಸಿಕೊಂಡ ಭೂಮಿಯಲ್ಲಿ ವಸತಿ ಬಡಾವಣೆ ನಿರ್ಮಿಸಿಕೊಂಡ ಪ್ರಕರಣಗಳಲ್ಲಿ ಪರಿಹಾರಾತ್ಮಕವಾಗಿ ಭೂ ಮಾಲೀಕರು, ಜಿಪಿಎದಾರರಿಗೆ ಬದಲಿಯಾಗಿ ಅಭಿವೃದ್ಧಿಪಡಿಸಿದ ಬಡಾವಣೆಗಳಲ್ಲಿ ಮನಬಂದಂತೆ ಬೆಲೆಬಾಳುವ ನಿವೇಶನಗಳನ್ನು ಮಂಜೂರು ಮಾಡಿ ಅಧಿಕೃತ ಜ್ಞಾಪನ ಹೊರಡಿಸಿರುವ ಮುಡಾ ಆಯುಕ್ತರ ಕಾರ್ಯವೈಖರಿ ಬಗ್ಗೆ ಇಡಿ ಅಧಿಕಾರಿಗಳು ಕಡತಗಳ ಪರಿಶೀಲನೆ ನಡೆಸುತ್ತಿದ್ದಾರೆ.

ದಾಳಿ ವೇಳೆ ಭದ್ರತೆಗಾಗಿ ಕರೆತಂದಿದ್ದ ಸಿಆರ್‌ಪಿಎಫ್ ಶಸ್ತ್ರಸಜ್ಜಿತ ಸಿಬ್ಬಂದಿಗಳನ್ನು ಮುಡಾ ಕಚೇರಿ ಪ್ರವೇಶ ದ್ವಾರಗಳು, ಸುತ್ತಲಿನ ಪ್ರದೇಶದಲ್ಲಿ ನಿಯೋಜಿಸಿದ್ದ ಅಧಿಕಾರಿಗಳು, ಇಡೀ ಮುಡಾ ಕಚೇರಿಯನ್ನು ಎರಡು ದಿನಗಳವರೆಗೆ ವಶಕ್ಕೆ ಪಡೆದಿದ್ದಾರೆ. ಹಾಗಾಗಿ ಸಾರ್ವಜನಿಕರಿಗೆ ಪ್ರವೇಶ ನಿಷಿದ್ಧ. ಆರ್‌ಟಿಐ ಕಾರ್ಯಕರ್ತ ನೀಡಿದ ಲಿಖಿತ ದೂರು ಹಾಗೂ ದಾಖಲೆಗಳೊಂದಿಗೆ ಮೈಸೂರಿಗೆ ಆಗಮಿಸಿರುವ ಇಡಿ ಅಧಿಕಾರಿಗಳ ತಂಡವು, ಶೇ. 50:50ರ ಅನುಪಾತದಡಿ ಮಂಜೂರಾಗಿರುವ ನಿವೇಶನಗಳ ಬಗೆಗಿನ ದಾಖಲಾತಿಗಳ ಪರಿಶೀಲನೆ ನಡೆಸುತ್ತಿದ್ದು, ಸಿಎಂ ಸಿದ್ದರಾಮಯ್ಯ ಪತ್ನಿ ಬಿ.ಎಂ. ಪಾರ್ವತಿ ಅವರಿಗೆ ಮಂಜೂರು ಮಾಡಿರುವ 14 ನಿವೇಶಗಳ ಬಗ್ಗೆಯೂ ತನಿಖೆ ನಡೆಸುತ್ತಿದ್ದಾರೆ.

ಕೆಲ ದಾಖಲಾತಿಗಳ ಕಡತಗಳೇ ನಾಪತ್ತೆಯಾಗಿದ್ದು, ಕೆಲ ನಿವೇಶನಗಳಿಗೆ ಸಂಬಂಧಿಸಿದ ಕಡತಗಳೇ ಮುಡಾ ಕಚೇರಿ ಅಭಿಲೇಖಾಲಯದಲ್ಲಿ ಲಭ್ಯವಿಲ್ಲದಿರುವ ಬಗ್ಗೆ ಪ್ರಶ್ನಿಸುತ್ತಿರುವ ಇಡಿ ಅಧಿಕಾರಿಗಳು, ಸಿಸಿ ಕ್ಯಾಮರಾ ಫುಟೇಜ್‌ಗಳು, ರೆಕಾರ್ಡ್ ರೂಂನ ಇನ್‌ವರ್ಡ್–ಔಟ್‌ವರ್ಡ್ ರಿಜಿಸ್ಟರ್‌ಗಳ ಪರಿಶೀಲಿಸಿದ್ದಾರೆ. ಅಲ್ಲಿಯೂ ಯಾವುದೇ ಪುರಾವೆ ಲಭ್ಯವಾಗದಿರುವ ಬಗ್ಗೆ ಮುಡಾ ಅಧಿಕಾರಿಗಳನ್ನು ತೀವ್ರ ತರಾಟೆಗೆ ತೆಗೆದುಕೊಂಡಿದ್ದಾರೆನ್ನಲಾಗಿದೆ.

ಅವರು ಕೇಳಿದ ಪ್ರಶ್ನೆಗೆ ಉತ್ತರಿಸಲು ತಡಬಡಾಯಿಸಿದ ಮುಡಾ ಆಯುಕ್ತ ಎ.ಎನ್. ರಘುನಂದನ್, ಕಾರ್ಯದರ್ಶಿ ಪ್ರಸನ್ನಕುಮಾರ್, ನಾವು ಕಳೆದ 2 ತಿಂಗಳ ಹಿಂದಷ್ಟೇ ಅಧಿಕಾರ ವಹಿಸಿಕೊಂಡಿದ್ದೇವೆ. ನಾವು ಬರುವ ಮೊದಲೇ ತನಿಖೆ ಆರಂಭವಾಗಿತ್ತು. ನಮಗೆ ದಾಖಲೆಗಳ ಬಗ್ಗೆ ಮಾಹಿತಿ ಇಲ್ಲ ಎಂದು ಉತ್ತರಿಸುತ್ತಿದ್ದಾರೆ ಎಂದು ಹೇಳಲಾಗುತ್ತಿದೆ.

ಒಟ್ಟಾರೆ, ಶೇ. 50:50ರ ಅನುಪಾತದಡಿ ನಿಯಮ ಬಾಹಿರವಾಗಿ ಮಂಜೂರು ಮಾಡಿರುವ ನಿವೇಶನ, ಪ್ರೋತ್ಸಾಹದಾಯಕ ಹಾಗೂ ಬದಲಿ ನಿವೇಶನಗಳ ಸಂಬಂಧ ಹಾಗೂ ಸಿಎಂ ಪತ್ನಿ ಬಿ.ಎಂ. ಪಾರ್ವತಿ ಅವರಿಗೆ ಮಂಜೂರಾಗಿದ್ದ 14 ನಿವೇಶನಗಳ ಸಂಬಂಧ ಆರ್‌ಟಿಐ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ನೀಡಿದ ದೂರಿನನ್ವಯ ಇಡಿ ಅಧಿಕಾರಿಗಳು ತನಿಖೆ ಆರಂಭಿಸಿದ್ದಾರೆ.

ದಾಖಲೆ ಪರಿಶೀಲನೆ

ತೆರಳಿ ಮೈಸೂರು ತಾಲೂಕು ಕೆಸರೆ, ದೇವನೂರು 1ನೇ ಹಂತದ ಜಮೀನು ಪರಭಾರೆ ಸಂಬಂಧ ಪ್ರಕ್ರಿಯೆ ನೋಡಿಕೊಳ್ಳುವ ಕೇಸ್ ವರ್ಕರ್ ಕಬೋರ್ಡ್ ವಶಕ್ಕೆ ಪಡೆದ್ದಾರೆ. ವಿಷಯ ತಿಳಿಯುತ್ತಿದ್ದಂತೆಯೇ ತಹಸೀಲ್ದಾರ್ ಮಹೇಶ್‌ಕುಮಾರ್, ಶಿರಸ್ತೇದಾರ್, ರೆವಿನ್ಯೂ ಇನ್‌ಸ್ಪೆಕ್ಟರ್‌ಗಳು, ಇಡಿ ಅಧಿಕಾರಿಗಳನ್ನು ಕಚೇರಿ ಸಭಾಂಗಣಕ್ಕೆ ಕರೆದೊಯ್ದು, ಅಲ್ಲಿಗೇ ಅವರು ಕೇಳಿದ ಕಡತಗಳನ್ನು ರೆಕಾರ್ಡ್ ರೂಂನಿಂದ ತಂದಿರಿಸಿದ್ದಾರೆ.

ಸಿಎಂ ಸಿದ್ದರಾಮಯ್ಯರ ಪತ್ನಿ ಬಿ.ಎಂ. ಪಾರ್ವತಿ ಹೆಸರಿಗೆ ಖಾತೆಯಾಗಿರುವ ಜಮೀನಿನ ಮೂಲ ಮಾಲೀಕರ್ಯಾರು, ಅವರು ಕ್ರಯಪತ್ರ ಮಾಡಿದಾಗ ಅವರ ವಂಶಸ್ಥರೆಲ್ಲರೂ (ವಾರಸುದಾರರು) ಬಂದು ಖುದ್ದಾಗಿ ಉಪನೋಂದಣಾಧಿಕಾರಿ ಕಚೇರಿಯಲ್ಲಿ ಸಹಿ ಮಾಡಿದ್ದಾರೆಯೇ, ಕೃಷಿ ಭೂಮಿ ಪರಿವರ್ತನೆ (ಅಲಿನೇಷನ್) ಆಗಿದ್ದು ಯಾವಾಗ, ಮುಡಾ ಸ್ವಾಧೀನ ಮಾಡಿದ ನಂತರ ಡಿ–ನೋಟಿಫೈ ಆಗಿದ್ದೇಗೆ? ಪಾರ್ವತಿ ಹೆಸರಿಗೆ ಕ್ರಯವಾದಾಗ ಭೂಮಿ ಯಾವ ಸ್ಥಿತಿಯಲ್ಲಿತ್ತು? ಆ ಸ್ಥಳದಲ್ಲಿ ವಸತಿ ಬಡಾವಣೆ ಮಾಡುವಾಗ ಸ್ವಾಧೀನವಾಗದೇ ಮುಡಾದವರು ಬಳಸಿಕೊಂಡಾಗ ಆ ಭೂಮಿಗೆ ಪರಿಹಾರ ನೀಡಿರಲಿಲ್ಲವೇ? ಭೂಸ್ವಾಧೀನವಾದಾಗ ಆರ್‌ಟಿಸಿ ಕಾಲಂನಲ್ಲಿ ಮುಡಾ ಎಂದು ನಮೂದಾಗಿರಲಿಲ್ಲವೇ? ಅದು ಪಿಟಿಸಿಎಲ್ ವ್ಯಾಪ್ತಿಗೆ ಬರುತ್ತಿತ್ತೆ? ರೆವಿನ್ಯೂ ಇನ್‌ಸ್ಪೆಕ್ಟರ್‌ಗಳು ಸ್ಥಳ ಪರಿಶೀಲಿಸದೇ ಭೂಮಿ ಪರಿವರ್ತನೆ (ಅಲಿನೇಷನ್) ಮಾಡಲು ಪೂರಕವಾಗಿ ವರದಿ ನೀಡಿದ್ದೇಕೆ ಎಂಬಿತ್ಯಾದಿ ಪ್ರಶ್ನೆಗಳಿಗೆ ದಾಖಲೆ ಸಮೇತ ಮಾಹಿತಿ ನೀಡಬೇಕೆಂದು ಇಡಿ ಅಧಿಕಾರಿಗಳು ಸೂಚನೆ ನೀಡಿದ್ದಾರೆ. ಸಂಜೆವರೆಗೂ ಸ್ಥಳದಲ್ಲೇ ಮೊಕ್ಕಾಂ ಹೂಡಿ ದಾಖಲೆಗಳನ್ನು ಶೋಧಿಸಿದ ಅಧಿಕಾರಿಗಳು, ಉಪನೋಂದಣಾಧಿಕಾರಿ ಕಚೇರಿಯಿಂದಲೂ ಕ್ರಯಪತ್ರ ನೋಂದಣಿಯಾಗಿರುವ ದಾಖಲೆಗಳನ್ನು ತರಿಸಿಕೊಂಡಿದ್ದಾರೆ.

ನಾನು ತಂದಿಲ್ಲ...!

ಪ್ರಮಾಣ ಮಾಡಲು ಸಿದ್ಧ, ಅವರೂ ಬರುತ್ತಾರಾ ಎಂದು ಸವಾಲು ಹಾಕಿದರು.

ಮುಡಾದಿಂದ ಕಡತಗಳನ್ನು ತರುವ ಅವಶ್ಯಕತೆ ನನಗೇನಿದೆ. ಇಡಿ ಇಂದು ಮೈಸೂರು ಕಚೇರಿ ಮೇಲೆ ದಾಳಿ ಮಾಡಿಲ್ಲ, ಬರೀ ದಾಖಲೆಗಳನ್ನು ಪರಿಶೀಲಿಸಿದ್ದಾರೆ.

ಬಿಡಿ ನಿವೇಶನ ಹಂಚಿಕೆಗೆ ಸಂಬಂಧಿಸಿದಂತೆ 8 ಲಕ್ಷ ಪುಟಗಳಷ್ಟು ದಾಖಲೆಗಳಿವೆ. ಇಡಿ ಕೇಳಿದರೆ ಅವರಿಗೂ ಒಂದು ವಾರದಲ್ಲಿ ಇದರ ಪ್ರತಿಗಳನ್ನು ನೀಡಲಾಗುವುದು. ಈಗಾಗಲೇ ನ್ಯಾಯಮೂರ್ತಿ ದೇಸಾಯಿ ಆಯೋಗಕ್ಕೆ ಈ ಕಡತಗಳ ಪ್ರತಿಗಳನ್ನು ನೀಡಲಾಗಿದೆ, ಇಡಿಗೂ ಅದನ್ನೇ ನೀಡುತ್ತೇವೆ. ಪ್ರಕರಣಕ್ಕೆ ಸಂಬಂಧಿಸಿದಂತೆ ನನಗೆ ನೋಟಿಸ್ ನೀಡಿದರೆ, ಸಚಿವನಾಗಿ ವಿವರಣೆ ಕೊಡುತ್ತೇನೆ, ಅದರಲ್ಲಿ ಅಂಜಿಕೆ ಏತಕ್ಕೆ ಎಂದು ಪ್ರಶ್ನಿಸಿದರು.

ನ್ಯಾಯಾಲಯದ ಆದೇಶದಂತೆ ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಡೆದ 14 ನಿವೇಶನಗಳಿಗೆ ಸಂಬಂಧಿಸಿದಂತೆ ಲೋಕಾಯುಕ್ತ ತನಿಖೆ ಆರಂಭಿಸಿದೆ. ಈ ನಡುವೆ ಅವರು ಪಡೆದ ನಿವೇಶನಗಳನ್ನು ಮುಡಾಗೆ ಹಿಂತಿರುಗಿಸಿದ್ದಾರೆ ಎಂದರು.

ತೆಪ್ಪೋತ್ಸವ

ಮಂಗಳ ವಾದ್ಯಗೋಷ್ಠಿ ಮೇಲೈಸಿದರೆ, ಕುಶಾಲತೋಪು ಸಿಡಿಸಿ ಗೌರವ ಸಲ್ಲಿಸಲಾಯಿತು. ದೇವಿಕೆರೆಯಲ್ಲಿ ತೆಪ್ಪೋತ್ಸವ ಸಂಪನ್ನಗೊಂಡ ಬಳಿಕ ದೇವಿಯ ಉತ್ಸವ ಮೂರ್ತಿಯನ್ನು ಹೂವಿನ ಅಲಂಕೃತ ಪಲ್ಲಕ್ಕಿಯಲ್ಲಿರಿಸಿ ಪೂಜೆ ನೆರವೇರಿಸಲಾಯಿತು. ಅಲ್ಲಿಂದ ಅಮ್ಮನವರ ಚಿನ್ನದ ಪಲ್ಲಕ್ಕಿ ಉತ್ಸವ ವಿವಿಧ ಮಂತ್ರ ಜಯ ಘೋಷಗಳೊಂದಿಗೆ ಮೆರವಣಿಗೆ ಮೂಲಕ ರಾತ್ರಿ 8.30 ಸುಮಾರಿಗೆ ಸ್ವಸ್ಥಾನ ತಲುಪಿತು. ನಂತರ ದೇವಾಲಯದೊಳಗೆ ಧ್ವಜಾ ಅರೋಹಣ ನಡೆಸಿ, ಮೂಲದೇವಿ ವಿಗ್ರಹಕ್ಕೆ ಪಂಚಾಮೃತ ಅಭಿಷೇಕ ನೆರವೇರಿಸಲಾಯಿತು.

ದೇವಿ ಕೃಪೆ ಪಡೆದ ಭಕ್ತ ಸಮೂಹ: ಬೆಟ್ಟದ ಚಾಮುಂಡೇಶ್ವರಿ ದೇವಸ್ಥಾನದ ಪ್ರಧಾನ ಅರ್ಚಕ ಡಾ.ಎನ್.ಶಶಿಶೇಖರ ದೀಕ್ಷಿತ್ ನೇತೃತ್ವದಲ್ಲಿ ನಡೆದ ತಾಯಿ ಚಾಮುಂಡೇಶ್ವರಿಯ ವೈಭವದ ತೆಪ್ಪೋತ್ಸವವನ್ನು ಅಪಾರ ಸಂಖ್ಯೆಯ ಭಕ್ತ ಸಮೂಹ ಕಣ್ತುಂಬಿಕೊಂಡಿತು. ಸಂಜೆಯಾಗುತ್ತಿದ್ದಂತೆ ದೇವಿಕೆರೆ ಬಳಿಗೆ ದೌಡಾಯಿಸಿ ಬಂದು ಕೆರೆಯ ಸುತ್ತಲೂ ಜಮಾಯಿಸಿದ ಭಕ್ತಾದಿಗಳು ಚಾಮುಂಡೇಶ್ವರಿ ತಾಯಿಗೆ ಜಯಘೋಷ ಮೊಳಗಿಸಿದರಲ್ಲದೆ ಇಷ್ಟಾರ್ಥ ಸಿದ್ದಿಗಾಗಿ ಪ್ರಾರ್ಥಿಸಿದರು. ಮೊಬೈಲ್‌ನಲ್ಲಿ ಫೋಟೋ–ವಿಡಿಯೋ ತೆಗೆದುಕೊಂಡು ಸಂಭ್ರಮಿಸಿದರು.

ರಾಜವಂಶಸ್ಥರ ಗೈರು: ನಾಡಿನ ಅಧಿದೇವತೆ ಶ್ರೀ ಚಾಮುಂಡೇಶ್ವರಿ ದೇವಿಯ ತೆಪ್ಪೋತ್ಸವ ರಾಜವಂಶಸ್ಥರ ಗೈರು ಹಾಜರಿ ನಡುವೆ ಜರುಗಿತು. ರಾಜವಂಸ್ಥರ ಅನುಪಸ್ಥಿತಿಯಲ್ಲೂ ಅವರಿಗಾಗಿ ಆಸನಗಳನ್ನು ವ್ಯವಸ್ಥೆ ಮಾಡಲಾಗಿತ್ತು.

ಸರ್ಕಾರಕ್ಕೆ ತಲೆನೋವಾಗಿ ಪರಿಣಮಿಸಿದ ಚಳಿಗಾಲ ಅಧಿವೇಶನ ದಿನಾಂಕ ನಿಗದಿ

ಬೆಂಗಳೂರು, ಅ.18– ಬೆಳಗಾವಿಯ ಸುವರ್ಣಸೌಧದಲ್ಲಿ ನಡೆಯಬೇಕಿರುವ ವಿಧಾನಮಂಡಲ ಚಳಿಗಾಲದ ಅಧಿವೇಶನಕ್ಕೆ ದಿನಾಂಕ ನಿಗದಿ ಮಾಡುವ ಕುರಿತು ರಾಜ್ಯ ಸರ್ಕಾರ ಇಕ್ಕಟ್ಟಿಗೆ ಸಿಲುಕಿದೆ.

ಡಿಸೆಂಬರ್ 20 ರಿಂದ ಮಂಡ್ಯದಲ್ಲಿ 3 ದಿನಗಳ ಕಾಲ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯಲಿದ್ದು, ಡಿಸೆಂಬರ್ ಕೊನೆಯ ವಾರದಲ್ಲಿ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವದ ಸಂಭ್ರಮಾಚರಣೆ ಬೆಳಗಾವಿಯಲ್ಲಿ ನಡೆಯಲಿದೆ.

ಸಾಹಿತ್ಯ ಸಮ್ಮೇಳನವು 2024 ಫೆಬ್ರವರಿ ತಿಂಗಳಿನಲ್ಲೇ ನಡೆಯಬೇಕಿತ್ತು. ಆದರೆ, ಬರಗಾಲ ಹಾಗೂ ಮತ್ತಿತರ ಕಾರಣಗಳಿಂದ ಒಂದೆರಡು ಬಾರಿ ಮುಂದೂಡಲಾಗಿತ್ತು. ಇದೀಗ ಡಿಸೆಂಬರ್ 20–23ರವರೆಗೆ ನಡೆಸಲು ನಿರ್ಧರಿಸಲಾಗಿದೆ.

ಇದೇ ವೇಳೆ, 1924ರ ಡಿ.26 ಮತ್ತು 27ರಂದು ಬೆಳಗಾವಿಯಲ್ಲಿ ನಡೆದಿದ್ದ 39ನೇ ಕಾಂಗ್ರೆಸ್ ಅಧಿವೇಶನ ಉದ್ದೇಶಿಸಿ ಮಹಾತ್ಮ ಗಾಂಧೀಜಿ ಭಾಷಣ ಮಾಡಿದ್ದರು. ಈ ಕಾರ್ಯಕ್ರಮ ನಡೆದು 100 ವರ್ಷ ಪೂರೈಸಿರುವ ಹಿನ್ನೆಲೆಯಲ್ಲಿ ಡಿ.26 ಮತ್ತು 27ರಂದು ಬೆಳಗಾವಿಯಲ್ಲೇ ಕಾಂಗ್ರೆಸ್ ಅಧಿವೇಶನ ನಡೆಸಲು ನಿರ್ಧರಿಸಿದೆ. ಈ ಹಿನ್ನೆಲೆಯಲ್ಲಿ ಚಳಿಗಾಲ ಅಧಿವೇಶನಕ್ಕೆ ದಿನಾಂಕ ನಿಗದಿ ಮಾಡುವಲ್ಲಿ ಸರ್ಕಾರ ಇಕ್ಕಟ್ಟಿಗೆ ಸಿಲುಕಿದೆ. ದಿನಾಂಕಗಳನ್ನು ಅಂತಿಮಗೊಳಿಸುವಲ್ಲಿ ಗೊಂದಲವಿದೆ ಎಂದು ಸರ್ಕಾರಿ ಮೂಲಗಳು ತಿಳಿಸಿವೆ.



ನಿಗದಿತ ದಿನಾಂಕದಂದು ಸಾಹಿತ್ಯ ಸಮ್ಮೇಳನ ನಡೆಸುವಂತೆ ಕನ್ನಡ ಪರ ಸಂಘಟನೆಗಳಿಂದ ಒತ್ತಡವಿದ್ದರೂ, ವಾರದ ಮಧ್ಯದಲ್ಲಿ ಬೆಳಗಾವಿ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವ ಸಮಾರಂಭವೂ ಬರುವುದರಿಂದ ಚಳಿಗಾಲದ ಅಧಿವೇಶನವನ್ನು ಮೂರು ಮತ್ತು ನಾಲ್ಕನೇ ವಾರದಲ್ಲಿ ನಡೆಸುವುದು ಕಷ್ಟಕರವಾಗಿದೆ. ಹೀಗಾಗಿ ಡಿಸೆಂಬರ್ ಮೊದಲ ಎರಡು ವಾರಗಳಲ್ಲಿ ಅಧಿವೇಶನದ ದಿನಾಂಕಗಳ ಕುರಿತು ಚರ್ಚೆ ನಡೆಯುತ್ತಿದೆ ಎಂದು ಮೂಲಗಳು ತಿಳಿಸಿವೆ.

ಜುಲೈನಲ್ಲಿ ಮುಂಗಾರು ಅಧಿವೇಶನ ನಡೆದಿದ್ದು, ಹಲವು ಮಸೂದೆಗಳು ಅಂಗೀಕಾರವಾಗಬೇಕಿದೆ. ಪರಿಷತ್ತು ಮತ್ತು ವಿಧಾನಸಭೆಯ ಸಿಬ್ಬಂದಿ ಈಗಾಗಲೇ ತಮ್ಮ ಕೆಲಸವನ್ನು ಪ್ರಾರಂಭಿಸಿದ್ದಾರೆ. ಆದಷ್ಟು ಬೇಗ ಅಧಿವೇಶನ ದಿನಾಂಕ ಕುರಿತು ನಿರ್ಧಾರ ಕೈಗೊಳ್ಳಲಾಗುವುದು. ಸಿಎಂ ಮತ್ತು ಡಿಸಿಎಂ ಅವರ ಅನುಮೋದನೆಗೆ ಕಾಯುತ್ತಿದ್ದೇವೆ. ಅನುಮತಿ ಸಿಕ್ಕ ಕೂಡಲೇ ಸಂಪುಟದ ಮುಂದೆ ಇರಿಸಲಾಗುವುದು ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಸಂಡೂರು, ಚನ್ನಪಟ್ಟಣ ಮತ್ತು ಶಿಗ್ಗಾಂವಿ ವಿಧಾನಸಭಾ ಕ್ಷೇತ್ರಗಳಿಗೆ ನವೆಂಬರ್‌ನಲ್ಲಿ ಉಪಚುನಾವಣೆ ನಡೆಯಲಿದ್ದು, ನ.23ಕ್ಕೆ ಫಲಿತಾಂಶ ಹೊರಬೀಳಲಿದ್ದು, ನೂತನ ಸದಸ್ಯರು ಪ್ರಮಾಣ ವಚನ ಸ್ವೀಕರಿಸಿದ ಬಳಿಕ ಅಧಿವೇಶನದಲ್ಲಿ ಪಾಲ್ಗೊಳ್ಳಲಿದ್ದಾರೆ.

62 ಇನ್ಸ್‌ಪೆಕ್ಟರ್‌ಗಳ ವರ್ಗಾವರ್ಗಿ

ಮೈಸೂರು, ಅ.18(ಎಸ್‌ಪಿಎನ್)– ರಾಜ್ಯದ ವಿವಿಧ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ 62 ಪೊಲೀಸ್ ಇನ್ಸ್‌ಪೆಕ್ಟರ್(ಸಿವಿಲ್)ಗಳನ್ನು ರಾಜ್ಯ ಸರ್ಕಾರ ವರ್ಗಾವಣೆ ಮಾಡಿ ಬುಧವಾರ ಆದೇಶಿಸಿದೆ. ಚನ್ನಪಟ್ಟಣದ ಕೆಎಸ್‌ಪಿಟಿಎಸ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಹೆಚ್.ಎಂ.ಶಿವಕುಮಾರ್ ಅವರನ್ನು ಮಂಡ್ಯ ಜಿಲ್ಲೆ ನಾಗಮಂಗಲ ಟೌನ್ ಠಾಣೆಗೆ, ಕೊಡಗಿನ ಸೆನ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಜಿ.ಕೆ.ರಾಘವೇಂದ್ರರನ್ನು ಅರಸೀಕೆರೆ ಟೌನ್ ಠಾಣೆಗೆ, ಹಾಸನ ಮಹಿಳಾ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಹೆಚ್.ಬಿ. ಅರುಣ್ ಕುಮಾರ್ ಅವರನ್ನು ಅರಸೀಕೆರೆ ಗ್ರಾಮಾಂತರ ಠಾಣೆಗೆ, ಹಾಸನ ಸೆನ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಬಿ.ಸಿ.ಜಗದೀಶ ಅವರನ್ನು ಹಳೆಬೀಡು ಠಾಣೆಗೆ, ಕರ್ನಾಟಕ ಲೋಕಾಯುಕ್ತದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಬಿ.ಚಲುವರಾಜು ಅವರನ್ನು ನಾಗಮಂಗಲ ಉಪ ವಿಭಾಗಕ್ಕೆ, ಅರಸೀಕೆರೆ ಗ್ರಾಮಾಂತರ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಎಂ.ಬಿ. ನವೀನ್ ಕುಮಾರ್‌ರನ್ನು ಡಿಜಿ ಮತ್ತು ಐಜಿ ಕಚೇರಿಗೆ ವರದಿ ಮಾಡಿಕೊಳ್ಳುವಂತೆ ಸೂಚಿಸಿದೆ.

ಕಿಡ್ನ್ಯಾಪ್ ಕೇಸ್‌ನಲ್ಲಿ ಭವಾನಿ ರೇವಣ್ಣಗೆ ಸುಪ್ರೀಂಕೋರ್ಟ್‌ನಿಂದ ಬಿಗ್ ರಿಲೀಫ್



ನವದೆಹಲಿ, ಅ.18–ಲೈಂಗಿಕ ಕಿರುಕುಳ ಸಂತ್ರಸ್ತೆಯೊಬ್ಬರ ಅಪಹರಣ ಕೇಸ್‌ನಲ್ಲಿ ಮಾಜಿ ಸಚಿವ ಎಚ್.ಡಿ.ರೇವಣ್ಣನವರ ಪತ್ನಿ ಭವಾನಿ ರೇವಣ್ಣನವರಿಗೆ ನೀಡಲಾಗಿದ್ದ ಜಾಮೀನನ್ನು ರದ್ದುಗೊಳಿಸಲು ಸುಪ್ರೀಂಕೋರ್ಟ್ ನಿರಾಕರಿಸಿದೆ. ಆ ಮೂಲಕ, ಭವಾನಿ ರೇವಣ್ಣನವರಿಗೆ ಜಾಮೀನು ನೀಡಿದ್ದ ಕರ್ನಾಟಕ ಹೈಕೋರ್ಟ್‌ನ ನಿರ್ಧಾರವನ್ನು ಎತ್ತಿ ಹಿಡಿದಿದೆ. ಭವಾನಿ ರೇವಣ್ಣ ಅವರು ರಾಜಕೀಯ ಕುಟುಂಬಕ್ಕೆ ಸೇರಿದವರು. ಅವರ ಕುಟುಂಬದ ಸದಸ್ಯರು ಈಗಾಗಲೇ ಕೆಲವು ಗುರುತರ ಆರೋಪಗಳನ್ನು ಎದುರಿಸುತ್ತಿದ್ದಾರೆ ಎಂಬ ಕಾರಣಕ್ಕಾಗಿ ಅವರಿಗೆ ಜಾಮೀನು ನಿರಾಕರಿಸಲು ಸಾಧ್ಯವಿಲ್ಲ. ಅವರಿಗೆ ಜಾಮೀನು ನೀಡಿರುವುದರಿಂದ ತನಿಖೆಯೇನೂ ದಿಕ್ಕು ತಪ್ಪಿದಂತಾಗಿಲ್ಲ. ಹಾಗಾಗಿ, ಅವರಿಗೆ ಜಾಮೀನು ನೀಡಿರುವುದರಲ್ಲಿ ಯಾವುದೇ ತಪ್ಪಿಲ್ಲ ಎಂದು ಹೇಳಿದ ಸುಪ್ರೀಂಕೋರ್ಟ್ ಭವಾನಿಯವರಿಗೆ ಜಾಮೀನು ನೀಡಿದ್ದ ಕರ್ನಾಟಕ ಹೈಕೋರ್ಟ್‌ನ ತೀರ್ಪನ್ನು ಎತ್ತಿ ಹಿಡಿದಿದೆ. ಹಾಸನದ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಹಾಗೂ ಮಾಜಿ ಸಚಿವ ಎಚ್.ಡಿ.ರೇವಣ್ಣನವರಿಂದ ಲೈಂಗಿಕ ಕಿರುಕುಳಕ್ಕೆ ಒಳಗಾಗಿರುವುದಾಗಿ ಕೆಲವು ತಿಂಗಳುಗಳ ಹಿಂದೆ ಕೆಆರ್ ನಗರದ ಮಹಿಳೆಯೊಬ್ಬರು ದೂರು ದಾಖಲಿಸಿದ್ದರು. ಹಾಗಾಗಿ ರೇವಣ್ಣ ವಿರುದ್ಧ ಕೇಸ್ ದಾಖಲಾಗಿತ್ತು. ರಾಜ್ಯ ಸರ್ಕಾರವು ವಿಶೇಷ ತನಿಖಾ ತಂಡದ (ಎಸ್‌ಐಟಿ) ರಚನೆ ಮಾಡಿ, ಆ ಪ್ರಕರಣದ ತನಿಖೆಗೆ ಆದೇಶಿಸಿತ್ತು. ತನಿಖೆ ಶುರುವಾದಾಗ ಆ ಸಂತ್ರಸ್ತ ಮಹಿಳೆಯನ್ನು ಅಪಹರಿಸಿ ಗ್ರಾಮವೊಂದರ ಫಾರ್ಮ್ ಹೌಸ್‌ನಲ್ಲಿ ಕೂಡಿಹಾಕಲಾಗಿತ್ತು. ಎಸ್‌ಐಟಿ ಅಧಿಕಾರಿಗಳು ಕಾರ್ಯಾಚರಣೆ ನಡೆಸಿ ಆ ಮಹಿಳೆಯನ್ನು ರಕ್ಷಣೆ ಮಾಡಿದ್ದರು. ಆ ಅಪಹರಣವನ್ನು ಭವಾನಿ ರೇವಣ್ಣನವರೇ ಮಾಡಿಸಿದ್ದಾರೆ ಎಂಬ ಆರೋಪಗಳು ಕೇಳಿಬಂದಿದ್ದರಿಂದ ಅವರ ಬಂಧನವಾಗುವ ಸಂದರ್ಭ ಎದುರಾಗಿತ್ತು. ಪೊಲೀಸರು ಎಫ್‌ಐಆರ್ ದಾಖಲಿಸದೇ ಅವರನ್ನು ಬಂಧಿಸುವ ಸಾಧ್ಯತೆಗಳು ದಟ್ಟವಾಗಿದ್ದವು. ಹಾಗಾಗಿ, ಭವಾನಿ ರೇವಣ್ಣ ಅವರು ಹೈಕೋರ್ಟ್ ಮೊರೆ ಹೋಗಿ ಜಾಮೀನು ಪಡೆದಿದ್ದರು.

ನಾನು ನೀಡಿದ ಮಾಹಿತಿ ಆಧರಿಸಿ ಇಡಿ ಪರಿಶೀಲಿಸುತ್ತಿರಬಹುದು!



ಲಕ್ಷ್ಮಣ್

ಮೈಸೂರು, ಅ.18– ದೂರುದಾರ ಸ್ನೇಹಮಯಿ ಕೃಷ್ಣ ವಿರುದ್ಧ ನಾನು ಇಡಿಗೆ ದೂರು ನೀಡಿ, ಯಾವ ರೀತಿ ದಾಖಲೆಗಳನ್ನು ನಕಲು ಮಾಡಿದ್ದಾರೆ ಎಂಬ ಮಾಹಿತಿಯನ್ನೂ ನೀಡಿದ್ದೆ. ಈ ವಿಚಾರವಾಗಿ ಇಡಿ ಅಧಿಕಾರಿಗಳು ಪರಿಶೀಲನೆ ಮಾಡುತ್ತಿರಬಹುದು. ಇಡಿ ತನಿಖೆಗೆ ನಾವು ಅಡ್ಡಿಪಡಿಸಲ್ಲ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಹೇಳಿದ್ದಾರೆ.

ಮುಡಾ ಕಚೇರಿ ಮೇಲೆ ಇಡಿ ಅಧಿಕಾರಿಗಳ ದಾಳಿ ವಿಚಾರವಾಗಿ ಇಂದು ಮೈಸೂರಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಎಂ.ಲಕ್ಷ್ಮಣ್, ಜಾರ್ಖಂಡ್, ಮಹಾರಾಷ್ಟ್ರ ಚುನಾವಣೆ ನಡೆಸುತ್ತಿದೆ. ರಾಜ್ಯದಲ್ಲಿ ಉಪ ಚುನಾವಣೆ ಕೂಡ ನಡೆಯುತ್ತಿದೆ. ಚುನಾವಣೆ ಸಮಯದಲ್ಲಿ ಮೋದಿ, ಅಮಿತ್ ಶಾ, ಕರ್ನಾಟಕದಲ್ಲಿ ಸ್ವತಃ ಸಿಎಂ ಅವರೇ ಭ್ರಷ್ಟಾಚಾರದಲ್ಲಿ ಭಾಗಿಯಾಗಿದ್ದಾರೆ ಎಂದು ಬಿಂಬಿಸಲು ಮುಂದಾಗಿದ್ದಾರೆ. ತನಿಖಾ ಸಂಸ್ಥೆಗಳನ್ನು ಬಿಜೆಪಿ ನಾಯಕರು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ ಎಂದು ದೂರಿದ್ದಾರೆ.

ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿಯವರು 25 ವರ್ಷದ ಹಳೆಯ ವಿಚಾರ ಪ್ರಸ್ತಾಪ ಮಾಡುತ್ತಿದ್ದಾರೆ. ಸಿದ್ದರಾಮಯ್ಯನವರು ಆ ಸೈಟ್‌ನಲ್ಲಿ ಮನೆ ಕಟ್ಟಿ, ಮಾರಾಟ ಕೂಡ ಮಾಡಿದ್ದಾರೆ. ಆರ್ ಟಿಐ ಕಾರ್ಯಕರ್ತ ಗಂಗರಾಜು ಈ ವಿಚಾರವಾಗಿ ಕೋರ್ಟ್ ಮೊರೆ ಹೋಗಿದ್ದರು. ಕೋರ್ಟ್ ಕೂಡ ಛೀಮಾರಿ ಹಾಕಿದೆ.


ಮುಡಾ, ಮೃಗಾಲಯ ಪ್ರಾಧಿಕಾರ ಅಧ್ಯಕ್ಷರ ನೇಮಕ ವಿಚಾರ ಪ್ರಸ್ತಾಪಿಸಿದ ಲಕ್ಷ್ಮಣ್, ನನಗೂ ಮುಡಾ ಅಧ್ಯಕ್ಷ ಸ್ಥಾನ ಬೇಡ. ನಿಗಮ ಮಂಡಳಿ ಸದಸ್ಯರ ನೇಮಕ ಪಟ್ಟಿ ರೆಡಿ ಇದೆ. ಇದರ ಜೊತೆ ಅಧ್ಯಕ್ಷರನ್ನು ಕೂಡ ನೇಮಕ ಮಾಡಲಾಗುತ್ತದೆ. ಸದ್ಯ ಮೂರ್ನಾಲ್ಕು ತಿಂಗಳ ಕಾಲ ಮುಡಾಗೆ ಅಧಿಕಾರೇತರರನ್ನು ನೇಮಕ ಮಾಡೋದು ಬೇಡ. ಹಿರಿಯ ಅನುಭವಿ ಅಧಿಕಾರಿಯನ್ನು ಮುಡಾಗೆ ನೇಮಕ ಮಾಡಲಿ. ಈ ಬಗ್ಗೆ ಸಿಎಂ ಬಳಿ ನಾನು ಮನವಿ ಮಾಡಿದ್ದೇನೆ. ಬಿಡಿಎ ಮಾದರಿಯಲ್ಲೇ ಮುಡಾದಲ್ಲೂ ಅಧಿಕಾರೇತರ ಸದಸ್ಯರನ್ನು ನೇಮಕ ಮಾಡೋದು ಬೇಡ. ಮುಡಾ ಹಗರಣ ಸತ್ಯಾಸತ್ಯತೆ ಹೊರ ಬರಲಿ. ಆ ಬಳಿಕ ಅಧ್ಯಕ್ಷರ ನೇಮಕ ಆಗಲಿ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಹೇಳಿದ್ದಾರೆ.

ಮೈಸೂರು ಮಿತ್ರ ಶನಿವಾರ 19 ಅಕ್ಟೋಬರ್ 2024

'ಸ್ಟಾರ್ ಆಫ್ ಮೈಸೂರ್' ಇನ್‌ಸ್ಟಾಗ್ರಾಮ್‌ನಲ್ಲಿ ಈ ಬಾರಿಯ ದಸರಾದ ನಾನಾ ಸನ್ನಿವೇಶ

2.27 ಕೋಟಿ ದಾಖಲೆಯ ವೀಕ್ಷಣೆ





ಮೈಸೂರು, ಅ. 18 – 'ಮೈಸೂರು ಮಿತ್ರ'ನ ಸೋದರ ಪತ್ರಿಕೆ 'ಸ್ಟಾರ್ ಆಫ್ ಮೈಸೂರ್'ನ ಇನ್‌ಸ್ಟಾಗ್ರಾಮ್ ಪೇಜ್‌ನಲ್ಲಿ ಅಪ್‌ಲೋಡ್ ಮಾಡಲಾಗಿದ್ದ ಈ ಬಾರಿಯ ಮೈಸೂರು ದಸರಾ ಮಹೋತ್ಸವದ 10 ದಿನಗಳ ಕಾರ್ಯಕ್ರಮಗಳನ್ನು ದೇಶ-ವಿದೇಶದ 2.27 ಕೋಟಿ ಮಂದಿ ವೀಕ್ಷಿಸಿದ್ದಾರೆ.

ಅ.11ರಂದು ಅಪ್‌ಲೋಡ್ ಮಾಡಿದ್ದ ಸ್ಥಳೀಯರು ಹಾಗೂ ಪ್ರವಾಸಿಗರು ಆರೋಗ್ಯ ಬೋಧೆ ಅನುಯಾಯಿಗಳಂತೆ ಆನೆಗಳ ಲದ್ದಿಯನ್ನು ತುಳಿಯುವ ವೀಡಿಯೋವನ್ನು 17,51,98,814 ಮಂದಿ ವೀಕ್ಷಿಸಿದ್ದಾರೆ.

ಮೈಸೂರು-ಕೊಡಗು ಕ್ಷೇತ್ರದ ಸಂಸದರೂ ಆದ ಮೈಸೂರು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಅ.3ರಂದು ಚಿನ್ನದ ಸಿಂಹಾಸನದಲ್ಲಿ ಖಾಸಗಿ ದರ್ಬಾರ್ ನಡೆಸುವ ವೀಡಿಯೋವನ್ನು 30,34,467 ಮಂದಿ ವೀಕ್ಷಿಸಿದರೆ, ಅ.11ರಂದು ದಸರಾ ಆನೆಗಳು ಕೃಷ್ಣರಾಜ ವಿಲಾಸ ರಸ್ತೆಯಲ್ಲಿರುವ ದರ್ಗಾಕ್ಕೆ ತೆರಳಿದ ವೀಡಿಯೋ 7,48,000 ವೀಕ್ಷಕರನ್ನು ಹೊಂದಿದೆ.

ತ್ರಿಷಿಕಾ ಕುಮಾರಿ ಒಡೆಯರ್ ಅವರು ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ ಆರತಿ ಮಾಡಿದ್ದನ್ನು 2,70,910 ಮಂದಿ ವೀಕ್ಷಿಸಿದ್ದಾರೆ. ಬನ್ನಿಮಂಟಪದ ಕವಾಯಿತು ಮೈದಾನದಲ್ಲಿ ಶ್ವೇತಾಶ್ವ ತಂಡದ ಮಿಲಿಟರಿ ಪೊಲೀಸ್ ಪಡೆ ನಡೆಸಿದ ಮೋಟಾರ್ ಬೈಕ್ ಸಾಹಸ (ಸ್ಟಂಟ್) ವನ್ನು 1,92,000 ಮಂದಿ ವೀಕ್ಷಿಸಿದ್ದಾರೆ. ಒಟ್ಟಾರೆ 10 ದಿನಗಳ ದಸರಾ ಮಹೋತ್ಸವಕ್ಕೆ ಸಂಬಂಧಿಸಿದಂತೆ 'ಸ್ಟಾರ್ ಆಫ್ ಮೈಸೂರ್'ನ ಇನ್‌ಸ್ಟಾಗ್ರಾಮ್ ಪೇಜ್ 1,30,97,247 ಖಾತೆಗಳನ್ನು ತಲುಪಿದೆ.

ಸಂವಿಧಾನಕ್ಕನುಗುಣವಾಗಿ ಪಂಚಮಸಾಲಿ ಲಿಂಗಾಯತ ಸಮುದಾಯಕ್ಕೆ ಪ್ರವರ್ಗ–2ಎ ಅಡಿ ಮೀಸಲಾತಿ

ಬಸವ ಜಯಮೃತ್ಯುಂಜಯ ಸ್ವಾಮೀಜಿ ನೇತೃತ್ವದ ನಿಯೋಗಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ



ಸಮುದಾಯದ ಮೀಸಲಾತಿ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಬಸವ ಜಯಮೃತ್ಯುಂಜಯ ಸ್ವಾಮೀಜಿ ಅವರೊಂದಿಗೆ ಮಾತುಕತೆ ನಡೆಸಿದರು.

ಬೆಂಗಳೂರು, ಅ.18(ಕೆಎಂಶಿ)– ಪಂಚಮಸಾಲಿ ಲಿಂಗಾಯತ ಸಮುದಾಯಕ್ಕೆ ಪ್ರವರ್ಗ 2ಎ ಅಡಿ ಮೀಸಲಾತಿಯನ್ನು ಸಂವಿಧಾನದ ಆಶಯಕ್ಕೆ ಅನುಗುಣವಾಗಿ ಕಲ್ಪಿಸಲು ಸರ್ಕಾರ ತೀರ್ಮಾನ ಕೈಗೊಳ್ಳಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಭರವಸೆ ನೀಡಿದ್ದಾರೆ.

ಸಮುದಾಯದ ಮೀಸಲಾತಿ ಕುರಿತಾಗಿ ಬಸವ ಜಯಮೃತ್ಯುಂಜಯ ಸ್ವಾಮೀಜಿ ಅವರ ನಿಯೋಗದೊಂದಿಗೆ ನಡೆಸಿದ ಮಾತುಕತೆ ಸಂದರ್ಭದಲ್ಲಿ ಈ ಭರವಸೆ ನೀಡಿದ್ದಾರೆ. ಪ್ರವರ್ಗ–2ಎ ಅಡಿ ಮೀಸಲಾತಿ ಒದಗಿಸುವಂತೆ ಪಂಚಮಸಾಲಿ ಲಿಂಗಾಯತ ಸಮುದಾಯದ ಬೇಡಿಕೆ ಕುರಿತು ಕಾನೂನು ಪ್ರಕಾರ, ಸಂವಿಧಾನದ ಆಶಯಕ್ಕೆ ಅನುಗುಣವಾಗಿ ತೀರ್ಮಾನ ಕೈಗೊಳ್ಳಲಾಗುವುದು. ಸರ್ಕಾರ ಮೀಸಲಾತಿ ವಿಷಯದಲ್ಲಿ ಮುಕ್ತ ಮನಸ್ಸು ಹೊಂದಿದೆ. ನಮ್ಮ ಸರ್ಕಾರ ಸಾಮಾಜಿಕ ನ್ಯಾಯದ ಪರವಾಗಿದೆ, ಎಲ್ಲಾ ದುರ್ಬಲ ವರ್ಗದವರಿಗೂ ನ್ಯಾಯ ದೊರೆಯಬೇಕು ಎಂಬುದು ನಮ್ಮ ಸರ್ಕಾರದ ನಿಲುವು.

ಶಾಶ್ವತ ಹಿಂದುಳಿದ ವರ್ಗಗಳ ಆಯೋಗವಿದೆ. ಅದರ ಅಂತಿಮ ಶಿಫಾರಸ್ಸು ಇನ್ನೂ ನಮ್ಮ ಕೈಗೆ ತಲುಪಿಲ್ಲ. ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿ ಇರುವುದರಿಂದ ಮೀಸಲಾತಿ ಕುರಿತಾಗಿ ಅಡ್ವೊಕೇಟ್ ಜನರಲ್, ಕಾನೂನು ಇಲಾಖೆ, ತಜ್ಞರೊಂದಿಗೆ ಸಮಾಲೋಚಿಸಿ ನಂತರ ಸಂಪುಟದಲ್ಲಿ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು. ಮೀಸಲಾತಿ ಕುರಿತು ಶಾಶ್ವತ ಹಿಂದುಳಿದ ವರ್ಗಗಳ ಆಯೋಗದ ಮುಂದೆ ಪ್ರಸ್ತಾವನೆ ಸಲ್ಲಿಸಬೇಕು, ಅದರ ಶಿಫಾರಸ್ಸಿನ ಅನ್ವಯ ಕ್ರಮ ಕೈಗೊಳ್ಳಬೇಕು ಎಂಬುವುದಾಗಿ ಈ ಹಿಂದೆಯೂ ಪಂಚಮಸಾಲಿ ಸಮುದಾಯದ ಮುಖಂಡರ ಭೇಟಿ ವೇಳೆ ಸಲಹೆ ನೀಡಿದ್ದೆ. ಯಾವುದೇ ತೀರ್ಮಾನ ನ್ಯಾಯಯುತವಾಗಿ ಎಲ್ಲರಿಗೂ ಒಪ್ಪಿಗೆಯಾಗುವಂತೆ, ನ್ಯಾಯಾಲಯಕ್ಕೂ ಒಪ್ಪಿಗೆಯಾಗುವಂತಿರಬೇಕು ಎಂದು ಮುಖ್ಯಮಂತ್ರಿ ತಿಳಿಸಿದರು. ಹಿಂದಿನ ಸರ್ಕಾರ ನಿಮ್ಮ ಮನವಿ ಮೇರೆಗೆ 2ಸಿ ಮತ್ತು 2ಡಿ ಎಂಬ ಹೊಸ ಪ್ರವರ್ಗ ಮಾಡಿತು, 3ಎನಲ್ಲಿರುವ ಒಕ್ಕಲಿಗರನ್ನು 2ಸಿಗೆ ಸೇರಿಸುವುದು, 3ಬಿಯಲ್ಲಿರುವ ಲಿಂಗಾಯತರನ್ನು 2ಡಿಗೆ ಸೇರಿಸುವ ಪ್ರಸ್ತಾಪ ಮಂಡಿಸಿತ್ತು. ಮುಸ್ಲಿಮರ ಮೀಸಲಾತಿ ತೆಗೆದು ಹಾಕಿತ್ತು. ಮುಸ್ಲಿಮರು ಇದನ್ನು ಸುಪ್ರೀಂಕೋರ್ಟ್‌ನಲ್ಲಿ ಪ್ರಶ್ನಿಸಿದಾಗ, ಯಥಾಸ್ಥಿತಿ ಮುಂದುವರೆಸಲು ರಾಜ್ಯ ಸರ್ಕಾರ ಒಪ್ಪಿಕೊಂಡಿತ್ತು. ಅದ್ದರಿಂದ ಈ ಪ್ರಕರಣ ಇನ್ನೂ ನ್ಯಾಯಾಲಯದಲ್ಲಿದೆ.

ಪೂರ್ವ ನಿಗದಿಯಂತೆ ಸಮುದಾಯದ ಮುಖಂಡರೊಂದಿಗೆ ಇಂದು ಸಭೆ ನಡೆಸಲಾಗಿದೆ, ಪಂಚಮಸಾಲಿ ಸಮುದಾಯ ಪ್ರಸ್ತುತ ಪ್ರವರ್ಗ–3ಬಿಯಲ್ಲಿದೆ. ಈ ಪ್ರವರ್ಗಡಡಿ ಲಿಂಗಾಯತ ಹಾಗೂ ಅದರ ಉಪಜಾತಿಗಳಿಗೆ ಮೀಸಲಾತಿ ಸೌಲಭ್ಯ ಪಡೆಯುತ್ತಿವೆ. ಹಾಗಾಗಿ 2ಎ ಪ್ರವರ್ಗದಡಿ ಪಂಚಮಸಾಲಿ ಸಮುದಾಯ ಸೇರಿಸಬೇಕು ಎಂದು ನಿಯೋಗ ಒತ್ತಾಯಿಸಿತು. ಸೂಕ್ತ ಮೀಸಲಾತಿ ಇಲ್ಲದೆ ಸಮುದಾಯದ ವಿದ್ಯಾರ್ಥಿಗಳು ಉನ್ನತ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಕೃಷಿ ಕಾರ್ಮಿಕರೇ ಹೆಚ್ಚಾಗಿರುವ ಪಂಚಮಸಾಲಿ ಸಮುದಾಯವನ್ನು ಪ್ರವರ್ಗ–2ಎಗೆ ಸೇರಿಸಿ ಸಾಮಾಜಿಕ ನ್ಯಾಯ ಒದಗಿಸಲು ನಿಯೋಗ ಮನವಿ ಮಾಡಿತು. ಪಂಚಮಸಾಲಿಗಳಿಗೆ ಮೀಸಲಾತಿ ನೀಡುವ ಸಂಬಂಧ ವರದಿ ಸಲ್ಲಿಸಲು ಜಯಪ್ರಕಾಶ್ ಹೆಗಡೆ ಅಧ್ಯಕ್ಷತೆಯ ಹಿಂದುಳಿದ ವರ್ಗಗಳ ಆಯೋಗ ಅಧ್ಯಯನ ನಡೆಸಿ, ಮಧ್ಯಂತರ ವರದಿ ಸಲ್ಲಿಸಿದ್ದರೂ, ಯಾವುದೇ ತೀರ್ಮಾನ ಕೈಗೊಂಡಿಲ್ಲ, ಮಧ್ಯಂತರ ವರದಿ ಆಧಾರದ ಮೇಲೆ ನಿರ್ಧಾರ ಕೈಗೊಳ್ಳುವಂತೆ ನಿಯೋಗ ಒತ್ತಾಯಿಸಿತು.

ದಸರಾ ವಸ್ತುಪ್ರದರ್ಶನ: ಕಲಾಕೃತಿಗಳ ಪ್ರದರ್ಶನಕ್ಕೆ ಆಹ್ವಾನ

ಮೈಸೂರು,ಅ.18– ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ವತಿಯಿಂದ 2024 ರ ದಸರಾ ವಸ್ತುಪ್ರದರ್ಶನ ಆವರಣದಲ್ಲಿ ಲಲಿತಕಲಾ ಮತ್ತು ಕರಕುಶಲ ಮತ್ತು ಮಹಿಳೆಯರು ಮತ್ತು ಮಕ್ಕಳು ತಯಾರಿಸಿದ ಕಲಾಕೃತಿಗಳನ್ನು ಪ್ರದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ.

ಆಸಕ್ತ ಕಲಾವಿದರು 2024 ರ ಜನವರಿ ನಂತರ ರಚಿಸಿದ, ತಯಾರಿಸಿದ ಇನ್‌ಲೇವರ್ಕ್, ಶಿಲ್ಪಕಲೆ, ಮೈಸೂರು ಆರ್ಟ್ಸ್, ಚಿತ್ರಕಲೆ ಇತ್ಯಾದಿ ಕಲಾಕೃತಿಗಳನ್ನು ಅ.23ರೊಳಗೆ ಕಚೇರಿಗೆ ಸಲ್ಲಿಸಬೇಕು. ಸದರಿ ಪ್ರದರ್ಶನಕ್ಕೆ ಇಡಲಾದ ಕಲಾಕೃತಿಗಳನ್ನು ದಸರಾ ವಸ್ತುಪ್ರದರ್ಶನ ಅವಧಿ ಮುಕ್ತಾಯಗೊಂಡ ನಂತರ (31-12-2024ರಂದು) ವಾಪಸ್ ಪಡೆದುಕೊಳ್ಳಬಹುದಾಗಿದ್ದು, ಆಕಸ್ಮಿಕ ಘಟನೆಗಳು ಜರುಗಿ ಕಲಾಕೃತಿಗಳಿಗೆ ಹಾನಿಯಾದಲ್ಲಿ ಪ್ರಾಧಿಕಾರದಿಂದ ಯಾವುದೇ ಪರಿಹಾರವನ್ನು ನೀಡಲಾಗುವುದಿಲ್ಲ

ಹೆಚ್ಚಿನ ಮಾಹಿತಿಗಾಗಿ ಪ್ರಾಧಿಕಾರದ ಕಚೇರಿಯ ವ್ಯವಸ್ಥಾಪಕ ಬಿ.ಆರ್.ನಂದಕುಮಾರ್ ದೂ.ಸಂ:7204202444 ಹಾಗೂ ವೆಂಕಟೇಶ್ ದೂ.ಸಂ:9986846047 ಅನ್ನು ಸಂಪರ್ಕಿಸಬಹುದು ಎಂದು ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರೇಷ್ಮೆ ಸೀರೆಗಳ ಪ್ರದರ್ಶನ, ಮಾರಾಟ ಸಿಲ್ಕ್ ಇಂಡಿಯಾ–2024ಕ್ಕೆ ಚಾಲನೆ



ಸಿಲ್ಕ್ ಇಂಡಿಯಾ–2024 ಪರಿಶುದ್ಧ ರೇಷ್ಮೆ ಸೀರೆಗಳ ಬೃಹತ್ ಪ್ರದರ್ಶನ ಮತ್ತು ಮಾರಾಟಕ್ಕೆ ನಟಿ ರಾಧ್ಯಾ ಚಾಲನೆ ನೀಡಿದರು. ವ್ಯವಸ್ಥಾಪಕ ಅಭಿನಂದನ್ ಉಪಸ್ಥಿತರಿದ್ದರು.

ಮೈಸೂರು, ಅ.18(ಎಂಕೆ)– ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ಬೆಳಕಿನ ಹಬ್ಬ ದೀಪಾವಳಿ ಅಂಗವಾಗಿ ಆಯೋಜಿಸಿರುವ 10 ದಿನಗಳ ಸಿಲ್ಕ್ ಇಂಡಿಯಾ–2024 ಪರಿಶುದ್ಧ ರೇಷ್ಮೆ ಸೀರೆಗಳ ಬೃಹತ್ ಪ್ರದರ್ಶನ ಮತ್ತು ಮಾರಾಟಕ್ಕೆ ಶುಕ್ರವಾರ ಚಾಲನೆ ನೀಡಲಾಯಿತು.

ಕನ್ನಡ ಚಿತ್ರರಂಗದ ಉದಯೋನ್ಮುಖ ನಟಿ ರಾಧ್ಯಾ ಟೇಪ್ ಕತ್ತರಿಸಿ, ದೀಪ ಬೆಳಗಿಸುವ ಮೂಲಕ ಚಾಲನೆ ನೀಡಿದರು. ಅ.27 ರವರೆಗೆ ಪರಿಶುದ್ಧ ರೇಷ್ಮೆ ಸೀರೆಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ ಇರಲಿದ್ದು, ಕಾಶ್ಮೀರದಿಂದ ಕಾಂಚಿಪುರಂವರೆಗಿನ ರೇಷ್ಮೆ ಸೀರೆ ಉತ್ಪಾದಕರು, ವಿನ್ಯಾಸಗಾರರು, ರೇಷ್ಮೆ ಸಹಕಾರ ಸಂಘಗಳ ಮಳಿಗೆಗಳಲ್ಲಿ ತಮ್ಮ ತಮ್ಮ ರಾಜ್ಯದ ಸಾಂಪ್ರದಾಯಿಕ ರೇಷ್ಮೆ ಸೀರೆ ಮತ್ತು ಉತ್ಪನ್ನಗಳನ್ನು ಪ್ರದರ್ಶಿಸಿ ಮಾರಾಟ ಮಾಡುತ್ತಿದ್ದಾರೆ.

ರೇಷ್ಮೆ ಸೀರೆಗಳು ಮಾತ್ರವಲ್ಲದೆ ಕೈಮಗ್ಗದ ಕಾಟನ್ ಸೀರೆಗಳು, ಪಶ್ಚಿಮ ಬಂಗಾಳದ ಕಾಟನ್ ಸೀರೆಗಳು, ಅನೇಕ ಅಲಂಕಾರಿಕ ಆಭರಣಗಳು ಹಾಗೂ ಕೈಯಿಂದ ಮಾಡಿದ ವಸ್ತುಗಳು ಸಿಲ್ಕ್ ಇಂಡಿಯಾ ಪರಿಶುದ್ಧ ರೇಷ್ಮೆ ಸೀರೆಗಳ ಬೃಹತ್ ಪ್ರದರ್ಶನ ಮತ್ತು ಮಾರಾಟದಲ್ಲಿ ಲಭ್ಯವಿವೆ.

ಬಿಜೆಪಿ ಟಿಕೆಟ್ ಕೊಡಿಸುವುದಾಗಿ ಬರೋಬ್ಬರಿ 2 ಕೋಟಿ ವಂಚನೆ

ಪ್ರಹ್ಲಾದ್ ಜೋಶಿ ಕುಟುಂಬಸ್ಥರ ವಿರುದ್ಧ ಎಫ್‌ಐಆರ್ ದಾಖಲು



ಬೆಂಗಳೂರು, ಅ.18– ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಟಿಕೆಟ್ ಕೊಡಿಸುವುದಾಗಿ ವಂಚಿಸಿದ ಆರೋಪದ ಮೇಲೆ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಕುಟುಂಬಸ್ಥರ ವಿರುದ್ಧ ಬೆಂಗಳೂರಿನ ಬಸವೇಶ್ವರನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಸಚಿವ ಪ್ರಹ್ಲಾದ್ ಜೋಶಿ ಸಹೋದರ ಗೋಪಾಲ್ ಜೋಶಿ, ಸಹೋದರಿ ವಿಜಯಲಕ್ಷ್ಮಿ ಜೋಶಿ ಹಾಗೂ ಗೋಪಾಲ್ ಜೋಶಿ ಮಗ ಅಜಯ್ ಜೋಶಿ ಎರಡು ಕೋಟಿ ಪಡೆದು ಟಿಕೆಟ್ ಕೊಡಿಸದೆ, ಹಣವನ್ನು ವಾಪಸ್ ನೀಡದೆ ಮೋಸ ಮಾಡಿದ್ದಾರೆಂದು ಸುನೀತಾ ಚವ್ಹಾಣ್ ಎಂಬುವರು ದೂರು ನೀಡಿದ್ದಾರೆ. ದೂರಿನನ್ವಯ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ. ನನ್ನ ಪತಿ ದೇವಾನಂದ್ ಫುಲ್‌ಸಿಂಗ್ ಅವರು 2018ರ ವಿಧಾನಸಭಾ ಚುನಾವಣೆಯಲ್ಲಿ ವಿಜಯಪುರ ಜಿಲ್ಲೆಯ ನಾಗಠಾಣಾ ಕ್ಷೇತ್ರದಿಂದ ಗೆದ್ದು ಶಾಸಕರಾಗಿದ್ದರು. ನಂತರ 2023ರ ಚುನಾವಣೆಯಲ್ಲಿ ಸೋತಿದ್ದರು. 2024ರ ಲೋಕಸಭಾ ಚುನಾವಣೆಯಲ್ಲಿ ಪತಿಗೆ ವಿಜಯಪುರ ಕ್ಷೇತ್ರದಲ್ಲಿ ಬಿಜೆಪಿ ಟಿಕೆಟ್ ಕೊಡಿಸುವುದಾಗಿ ಹೇಳಿ ಗೋಪಾಲ್ ಜೋಶಿ ಅವರು 25 ಲಕ್ಷ ರೂ. ಹಾಗೂ 5 ಕೋಟಿ ರೂ.ಗಳ ಚೆಕ್ ಅನ್ನು ಮುಂಗಡವಾಗಿ ಪಡೆದಿದ್ದರು.

ಅಥಣಿಯಲ್ಲಿ ಎಂಜಿನಿಯರ್ ಆಗಿದ್ದ ಶೇಖರ್ ನಾಯಕ್ ಎಂಬುವರ ಮೂಲಕ ಗೋಪಾಲ್ ಜೋಶಿ ಪರಿಚಯವಾಗಿತ್ತು. ಅವರು ಸೂಚಿಸಿದಂತೆ ಬೆಂಗಳೂರಿನ ಬಸವೇಶ್ವರ ನಗರದಲ್ಲಿನ ಅವರ ಸಹೋದರಿ ವಿಜಯಲಕ್ಷ್ಮಿ ಅವರ ಮನೆಗೆ ಹಣ ಹಾಗೂ ಚೆಕ್ ತೆಗೆದುಕೊಂಡು ಹೋಗಿ ಕೊಟ್ಟಿದ್ದೆವು. ಆಗ ಸಹೋದರಿಯ ಮನೆಯಲ್ಲೇ ಇದ್ದ ಗೋಪಾಲ್ ಜೋಶಿ, ಕೇಂದ್ರ ಸಚಿವ ಅಮಿತ್ ಶಾ ಅವರ ಆಪ್ತ ಸಹಾಯಕರಿಗೆ ಕರೆ ಮಾಡಿ ಮಾತನಾಡಿದಂತೆ ನಟಿಸಿದ್ದರು. ಅಲ್ಲದೆ, ತಮ್ಮ ಪತಿಗೆ ಬಿಜೆಪಿ ಟಿಕೆಟ್ ಖಚಿತವಾಗಿರುವುದಾಗಿ ಹೇಳಿ ಹಂತ ಹಂತವಾಗಿ 2 ಕೋಟಿ ರೂ. ಪಡೆದಿದ್ದರು. ಪಕ್ಷದ ಟಿಕೆಟ್ ಸಿಗದ ಬಳಿಕ ಹಣ ವಾಪಸ್ ಕೇಳಿದಾಗ ಕಾರಣಗಳನ್ನು ಹೇಳಲು ಶುರು ಮಾಡಿದರು. 200 ಕೋಟಿ ರೂಗಳ ಯೋಜನೆಯ ಬಿಲ್ ಬಾಕಿಯಿದ್ದು, ಹಣವನ್ನು ಒಟ್ಟಿಗೆ ಹಿಂದಿರುಗಿಸುವುದಾಗಿ ಹೇಳಿದರು. ಆಗಸ್ಟ್ 1 ರಂದು ವಿಜಯಲಕ್ಷ್ಮಿ ಅವರ ನಿವಾಸಕ್ಕೆ ಭೇಟಿ ನೀಡಿದಾಗ ನನ್ನ ಮೇಲೆ ಹಲ್ಲೆ ನಡೆಸಿ, ಜಾತಿ ನಿಂದನೆ ಮಾಡಿದರು. ಅಲ್ಲದೆ, ನನಗೆ ಹಾಗೂ ನನ್ನ ಮಗನಿಗೆ ಬೆದರಿಕೆ ಹಾಕಿದರು ಎಂದು ದೂರಿನಲ್ಲಿ ಹೇಳಿಕೊಂಡಿದ್ದಾರೆ. ದೂರು ಹಿನ್ನೆಲೆಯಲ್ಲಿ ಪೊಲೀಸರು ಮೂವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಿಕೊಂಡಿದ್ದು, ತನಿಖೆ ಆರಂಭಿಸಿದ್ದಾರೆ.

ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಸ್ಪಷ್ಟನೆ: ಗೋಪಾಲ್ ಜೋಶಿ ನನ್ನ ಸಹೋದರ ಅದರಲ್ಲಿ ಯಾವುದೇ ಅನುಮಾನವಿಲ್ಲ. ಈಗ ಅವರಿಗೂ ನನಗೂ ಯಾವುದೇ ಕೌಟುಂಬಿಕ ಹಾಗೂ ಹಣಕಾಸಿಕ ಸಂಬಂಧ ಇಲ್ಲ ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಸ್ಪಷ್ಟಪಡಿಸಿದ್ದಾರೆ.

ಗುರುವಾರ ನನ್ನ ಸಹೋದರನ ಮೇಲೆ ಎಫ್‌ಐಆರ್ ದಾಖಲಾಗಿದೆ. ಇಂದು ಕಾಂಗ್ರೆಸ್ ನಾಯಕರು ಪ್ರತಿಭಟನೆ ಮಾಡಿದ್ದಾರೆ. ನನಗೆ ಯಾರೂ ಸಹೋದರಿ ಇಲ್ಲ. ನಾವು ನಾಲ್ಕು ಜನ ಸಹೋದರರು, 1984ರಲ್ಲಿ ಒಬ್ಬ ಸಹೋದರ ತೀರಿ ಹೋದರು. ಈಗ ಮೂವರು ಇದ್ದೇವೆ. ಗೋಪಾಲ್ ಜೋಶಿ ಅವರು ನನ್ನ ಹಿರಿಯ ಸಹೋದರ ಇದರ ಜೊತೆಗೆ ಸಹೋದರಿ ಅಂತಲೂ ಬರುತ್ತಿದೆ ಅವರು ಯಾರು ಗೊತ್ತಿಲ್ಲ ಎಂದಿದ್ದಾರೆ.

ನನ್ನ ಹಿರಿಯ ಸಹೋದರ ಗೋಪಾಲ್ ಜೋಶಿ ಅವರು ನಾನು ಬೇರೆಯಾಗಿ 33 ವರ್ಷಗಳು ಕಳೆದಿವೆ. ಈ ಹಿಂದೆಯೂ ಅವರ ವಿರುದ್ಧ ಎರಡು ಸಲ ಆರೋಪ ಕೇಳಿ ಬಂದಿತ್ತು. ಅದಕ್ಕಾಗಿ ನಾನು ಹಿಂದೆಯೇ ಗೋಪಾಲ್ ಜೋಶಿ ಅವರೊಂದಿಗೆ ನನ್ನ ಹೆಸರು ಲಿಂಕ್ ಮಾಡಬಾರದು ಎಂದು ಕೋರ್ಟ್‌ನಿಂದ ಆದೇಶ ತಂದಿದ್ದೇನೆ. ಸಾಮಾಜಿಕವಾಗಿ, ಆರ್ಥಿಕವಾಗಿ ಯಾವುದೇ ಸಂಬಂಧ ಇಲ್ಲ ಎಂದು ಕೋರ್ಟ್‌ಗೆ ಮಾಹಿತಿ ನೀಡಿದ್ದೇನೆ ಎಂದು ಅವರು ತಿಳಿಸಿದ್ದಾರೆ.

ಎಂಆರ್‌ಸಿ ಅಧ್ಯಕ್ಷರಾಗಿ ಕೆ.ಎನ್.ಸುರೇಶ್ ಕುಮಾರ್ ಆಯ್ಕೆ



ಮೈಸೂರು, ಅ.18–ಮೈಸೂರು ರೇಸ್ ಕ್ಲಬ್ (ಎಂಆರ್‌ಸಿ) ಅಧ್ಯಕ್ಷ ಹಾಗೂ ಸೀನಿಯರ್ ಸ್ಟೀವರ್ಡ್ ಆಗಿ ಕೆ.ಎನ್.ಸುರೇಶ್ ಕುಮಾರ್ ಅವರನ್ನು ಆಯ್ಕೆ ಮಾಡಲಾಗಿದೆ. ಇಂದು ನಡೆದ ಸಭೆಯಲ್ಲಿ ಈ ಆಯ್ಕೆ ಮಾಡಲಾಗಿದ್ದು, 56ನೇ ವಾರ್ಷಿಕ ಮಹಾಸಭೆ ಮುಕ್ತಾಯದವರೆಗೆ ಇದು ಅನ್ವಯವಾಗುತ್ತದೆ.

ಬಿ.ಇಡಿ ಕೋರ್ಸ್‌ಗೆ ಅರ್ಜಿ ಆಹ್ವಾನ

ಮೈಸೂರು,ಅ.18– ಸರ್ಕಾರಿ ಶಿಕ್ಷಕ ಮಹಾವಿದ್ಯಾಲಯದ ವತಿಯಿಂದ 2024–25ನೇ ಸಾಲಿನಲ್ಲಿ 2 ವರ್ಷದ ಬಿ.ಇಡಿ ಕೋರ್ಸ್‌ನ ವ್ಯಾಸಂಗಕ್ಕಾಗಿ ರಾಜ್ಯದ ಸರ್ಕಾರಿ ಮತ್ತು ಮಾನ್ಯತೆ ಪಡೆದ ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಬಿ.ಇಡಿ. ಕಾಲೇಜುಗಳಲ್ಲಿನ ಸರ್ಕಾರಿ ಕೋಟಾದ ಸೀಟುಗಳ ದಾಖಲಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ

ಆಸಕ್ತರು ಇಲಾಖೆ ವೆಬ್‌ಸೈಟ್ www.schooleducation.karnataka.gov.in ಮೂಲಕ ಅರ್ಜಿಯನ್ನು ನ.14 ರೊಳಗೆ ಸಲ್ಲಿಸಬಹುದಾಗಿದ್ದು, ವೆಬ್‌ಸೈಟ್‌ನಲ್ಲಿ ಜಿಲ್ಲಾವಾರು ಬಿ.ಇಡಿ ಶಿಕ್ಷಣ ಸಂಸ್ಥೆಗಳ ಪಟ್ಟಿ, ಅರ್ಹತೆ, ಮೀಸಲಾತಿ, ವಿವರ ಹಾಗೂ ಇತರೆ ಸೂಚನೆಗಳನ್ನು ನೀಡಲಾಗಿರುತ್ತದೆ. ಅಭ್ಯರ್ಥಿಗಳು ಕಡ್ಡಾಯವಾಗಿ ಅವುಗಳನ್ನು ಓದಿಕೊಂಡು ಆನ್‌ಲೈನ್ ಮೂಲಕ ಅರ್ಜಿಗಳನ್ನು ಕ್ರಮಬದ್ಧವಾಗಿ ಹಾಗೂ ಪೂರ್ಣವಾಗಿ ಭರ್ತಿ ಮಾಡುವ ಮೂಲಕ ಅನುಕೂಲ ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 0821–2420764 ಅನ್ನು ಸಂಪರ್ಕಿಸಬಹುದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೆಆರ್ ಬ್ಯಾಂಕ್ ಚುನಾವಣಾ ಪ್ರಚಾರ



ಅ. 20ರಂದು ನಡೆಯಲಿರುವ ಕೆಆರ್ ಬ್ಯಾಂಕ್ ಆಡಳಿತ ಮಂಡಳಿ ಚುನಾವಣೆ ಅಂಗವಾಗಿ ಶುಕ್ರವಾರ ಬ್ಯಾಂಕ್‌ಗೆ ಆಗಮಿಸಿದ್ದ ಸದಸ್ಯರಿಗೆ ಕರಪತ್ರ ನೀಡಿ ಮತಯಾಚನೆ ಮಾಡಲಾಯಿತು. ಈ ಸಂದರ್ಭದಲ್ಲಿ ಬ್ಯಾಂಕಿನ ಹಾಲಿ ಅಧ್ಯಕ್ಷ ಪ್ರತಿಷ್ಠಾ ಪ್ರಸಾದ್, ಮಾಜಿ ಅಧ್ಯಕ್ಷ ನು.ಸಿದ್ದಪ್ಪ ಉಪಾಧ್ಯಕ್ಷರಾದ ಬಸವರಾಜ್, ಬಸಪ್ಪ ನಿರ್ದೇಶಕರಾದ ಪಾರ್ಥಸಾರಥಿ, ಸರ್ವ ಮಂಗಳ ಭಾಸ್ಕರ್, ಗಣೇಶ್ ಮೂರ್ತಿ ತಾಯೂರು, ಅರುಣ್ ಸಿದ್ದಪ್ಪ, ಸದಸ್ಯ ಮಂಜು ಉಪಸ್ಥಿತರಿದ್ದರು

2ನೇ ಟೆಸ್ಟ್: ಕೀವಿಸ್‌ಗೆ ಭಾರತ ತಿರುಗೇಟು!

3ನೇ ದಿನದಂತ್ಯಕ್ಕೆ ಭಾರತ 231ಕ್ಕೆ 3, ನ್ಯೂಜಿಲೆಂಡ್ 402ಕ್ಕೆ ಆಲೌಟ್



ಕೊಹ್ಲಿ–ಸರ್ಫರಾಜ್ ಜುಗಲ್ಬಂದಿ: ಮೂರನೇ ವಿಕೆಟ್‌ಗೆ ಜೊತೆಯಾದ ವಿರಾಟ್ ಕೊಹ್ಲಿ ಹಾಗೂ ಸರ್ಫರಾಜ್ ಖಾನ್ ಆಕರ್ಷಕ ಶತಕದ ಜತೆಯಾಟವಾಡುವ ಮೂಲಕ ತಂಡಕ್ಕೆ ಆಸರೆಯಾದರು. ಸರ್ಫರಾಜ್ ಖಾನ್ ಆರಂಭದಿಂದಲೇ ಸ್ಫೋಟಕ ಬ್ಯಾಟಿಂಗ್ ನಡೆಸಿದರೆ, ವಿರಾಟ್ ಕೊಹ್ಲಿ ಎಚ್ಚರಿಕೆಯ ಬ್ಯಾಟಿಂಗ್ ನಡೆಸಿದರು. ನ್ಯೂಜಿಲೆಂಡ್ ಬೌಲರ್‌ಗಳನ್ನು ಸಮರ್ಥವಾಗಿ ಎದುರಿಸಿದ ಕೊಹ್ಲಿ ಆಕರ್ಷಕ ಕವರ್ ಡ್ರೈವ್ ಹಾಗೂ ಸಿಕ್ಸರ್ ಮೂಲಕ ಅಭಿಮಾನಿಗಳನ್ನು ರಂಜಿಸಿದರು. ಅಲ್ಲದೇ ಸರ್ಫರಾಜ್ ಜೊತೆಗೂಡಿ 136 ರನ್‌ಗಳ ಜೊತೆಯಾಟವಾಡಿದರು. ದಿನದಾಟ ಮುಕ್ತಾಯಕ್ಕೆ ಕೆಲ ಎಸೆತಗಳು ಬಾಕಿ ಇದ್ದಾಗ ವಿರಾಟ್ ಕೊಹ್ಲಿ, ಗ್ಲೆನ್ ಫಿಲಿಫ್ಸ್‌ಗೆ ವಿಕೆಟ್ ಒಪ್ಪಿಸಿದರು. ವಿಕೆಟ್ ಒಪ್ಪಿಸುವ ಮುನ್ನ 102 ಎಸೆತಗಳಲ್ಲಿ 8 ಬೌಂಡರಿ, ಒಂದು ಸಿಕ್ಸರ್ ಸಹಿತ 70 ರನ್ ಗಳಿಸಿದರು.

ಬೆಂಗಳೂರು, ಅ.18– ನಾಯಕ ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ ಹಾಗೂ ಸರ್ಫರಾಜ್ ಖಾನ್ ಅವರ ಅರ್ಧಶತಕಗಳ ನೆರವಿನಿಂದ ಭಾರತ 3ನೇ ದಿನದಂತ್ಯಕ್ಕೆ 2ನೇ ಇನ್ನಿಂಗ್ಸ್‌ನಲ್ಲಿ 3 ವಿಕೆಟ್ ನಷ್ಟಕ್ಕೆ 231 ರನ್ ಗಳಿಸಿದ್ದು, 125 ರನ್‌ಗಳ ಹಿನ್ನಡೆಯಲ್ಲಿದೆ. ಆ ಮೂಲಕ ಬೆಂಗಳೂರು ಟೆಸ್ಟ್ ಪಂದ್ಯದಲ್ಲಿ ನ್ಯೂಜಿಲೆಂಡ್ ಎದುರು ತಿರುಗೇಟು ನೀಡುವತ್ತ ಭಾರತ ದಿಟ್ಟ ಹೆಜ್ಜೆ ಇಟ್ಟಿದೆ.

ಇಲ್ಲಿನ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ 3 ವಿಕೆಟ್ ನಷ್ಟಕ್ಕೆ 180 ರನ್‌ಗಳಿಂದ ದಿನದಾಟ ಆರಂಭಿಸಿದ ನ್ಯೂಜಿಲೆಂಡ್ 402 ರನ್‌ಗಳಿಗೆ ಆಲೌಟಾಯಿತು. ನಂತರ 356 ರನ್‌ಗಳ ಬೃಹತ್ ಹಿನ್ನಡೆಯೊಂದಿಗೆ 2ನೇ ಇನ್ನಿಂಗ್ಸ್ ಆರಂಭಿಸಿದ ಭಾರತ ಉತ್ತಮ ಆರಂಭ ಪಡೆಯಿತು. ಮೊದಲ ವಿಕೆಟ್‌ಗೆ ನಾಯಕ ರೋಹಿತ್ ಶರ್ಮಾ ಹಾಗೂ ಯಶಸ್ವಿ ಜೈಸ್ವಾಲ್ 72 ರನ್‌ಗಳ ಜೊತೆಯಾಟವಾಡಿದರು. ಈ ಜೋಡಿ ಬೇರ್ಪಡಿಸುವಲ್ಲಿ ಅಝಾಜ್ ಪಟೇಲ್ ಯಶಸ್ವಿಯಾದರು. ಜೈಸ್ವಾಲ್ 35 ರನ್ ಗಳಿಸಿದ್ದ ವೇಳೆ ಮುನ್ನುಗ್ಗಿ ಸಿಕ್ಸ್ ಬಾರಿಸುವ ಯತ್ನದಲ್ಲಿ ಸ್ಟಂಪ್ ಔಟ್ ಆಗಿ ಪೆವಿಲಿಯನ್ ಹಾದಿ ಹಿಡಿದರು. ಇದರ ಬೆನ್ನಲ್ಲೇ ಮತ್ತೊಂದು ತುದಿಯಲ್ಲಿ ಆಕ್ರಮಣಕಾರಿ ಆಟವಾಡಿದ ನಾಯಕ ರೋಹಿತ್ ಶರ್ಮಾ 63 ಎಸೆತಗಳಲ್ಲಿ 8 ಬೌಂಡರಿ, ಒಂದು ಸಿಕ್ಸರ್ ಒಳಗೊಂಡ 52 ರನ್ ಗಳಿಸಿ ಅಝಾಜ್ ಪಟೇಲ್ ಎಸೆತದಲ್ಲಿ ಕ್ಲೀನ್ ಬೌಲ್ಡ್ ಆಗಿ ಪೆವಿಲಿಯನ್ ಹಾದಿ ಹಿಡಿದರು.

ಇನ್ನೂ 78 ಎಸೆತಗಳಲ್ಲಿ 7 ಬೌಂಡರಿ, 3 ಸಿಕ್ಸ್ ಒಳಗೊಂಡ ಅಜೇಯ 70 ರನ್ ಗಳಿಸಿರುವ ಸರ್ಫರಾಜ್ ಖಾನ್ 4ನೇ ದಿನಕ್ಕೆ ಬ್ಯಾಟಿಂಗ್ ಕಾಯ್ದುಕೊಂಡಿದ್ದಾರೆ.


ಇದಕ್ಕೂ ಮುನ್ನಾ ಶುಕ್ರವಾರ ಬೆಳಗ್ಗೆ ಇನ್ನಿಂಗ್ಸ್ ಆರಂಭಿಸಿದ ನ್ಯೂಜಿಲೆಂಡ್ ಪರ ರಚಿನ್ ರವೀಂದ್ರ 134 ರನ್ ಗಳಿಸಿ ವಿಕೆಟ್ ಒಪ್ಪಿಸಿದರೇ, ಡ್ಯಾರಿಯಲ್ ಮಿಚೆಲ್ 18, ಗ್ಲೇನ್ ಫಿಲಿಪ್ 14, ಟೀಮ್ ಸೌಥಿ 65 ರನ್ ಗಳಿಸಿದರು. ಭಾರತದ ಪರ ಕುದೀಪ್ ಯಾದವ್, ರವೀಂದ್ರ ಜಡೇಜಾ ತಲಾ 3, ಮೊಹಮ್ಮದ್ ಸಿರಾಜ್ 2, ಬೂಮ್ರಾ ಹಾಗೂ ರವಿಚಂದ್ರನ್ ಅಶ್ವಿನ್ ತಲಾ ಒಂದೊಂದು ವಿಕೆಟ್ ಕಬಳಿಸಿದರು.

9000 ರನ್ ಕ್ಲಬ್‌ಗೆ ವಿರಾಟ್ ಕೊಹ್ಲಿ

ಭಾರತದ ರನ್ ಮಷೀನ್ ವಿರಾಟ್ ಕೊಹ್ಲಿ ಟೆಸ್ಟ್ ಕ್ರಿಕೆಟ್‌ನಲ್ಲಿ 9000 ರನ್ ಬಾರಿಸಿದ ಬ್ಯಾಟರ್‌ಗಳ ಕ್ಲಬ್‌ಗೆ ಸೇರಿದ್ದಾರೆ. ಕಿವೀಸ್ ಎದುರಿನ ಎರಡನೇ ಇನ್ನಿಂಗ್ಸ್‌ನಲ್ಲಿ 53 ರನ್ ಬಾರಿಸುತ್ತಿದ್ದಂತೆಯೇ 9000 ಟೆಸ್ಟ್ ರನ್ ಕ್ಲಬ್‌ಗೆ ಸೇರ್ಪಡೆಯಾಗಿದ್ದಾರೆ. ಈ ಮೂಲಕ ಈ ಸಾಧನೆ ಮಾಡಿದ ಭಾರತದ 4ನೇ ಬ್ಯಾಟ್ಸ್‌ಮನ್ ಎನ್ನುವ ಹಿರಿಮೆಗೆ ವಿರಾಟ್ ಕೊಹ್ಲಿ ಪಾತ್ರರಾಗಿದ್ದಾರೆ. ಕೊಹ್ಲಿಗೂ ಮೊದಲು ಸಚಿನ್ ತೆಂಡುಲ್ಕರ್(15,921), ರಾಹುಲ್ ದ್ರಾವಿಡ್(13,265) ಹಾಗೂ ಸುನೀಲ್ ಗವಾಸ್ಕರ್(10,122) ಈ ಸಾಧನೆ ಮಾಡಿದ್ದಾರೆ.

ದೇಶ - ವಿದೇಶ

ಹಮಾಸ್ ಮುಖ್ಯಸ್ಥನ ಹೊಡೆದುರುಳಿಸಿದ ಇಸ್ರೇಲ್ ಸೇನೆ



ಟೆಲ್ ಅವೀವ್: ಅ.7ರ ಇಸ್ರೇಲಿಗರ ಮೇಲಿನ ದಾಳಿಯ ರೂವಾರಿ, ಹಮಾಸ್ ಉಗ್ರ ಸಂಘಟನೆ ಮುಖ್ಯಸ್ಥ ಯಾಹ್ಯಾ ಸಿನ್ವಾರ್‌ನನ್ನು ಕೊನೆಗೂ ಇಸ್ರೇಲ್ ಸೇನೆ ಹೊಡೆದುರುಳಿಸಿದ್ದು, ಇಡೀ ಇಸ್ರೇಲ್ ಇದೀಗ ಸಂಭ್ರಮಾಚರಣೆಯಲ್ಲಿ ತೊಡಗಿದೆ.

ಗಾಜಾದಲ್ಲಿ ನಡೆದ ದಾಳಿಯಲ್ಲಿ ಹಮಾಸ್ ಮುಖ್ಯಸ್ಥ ಯಾಹ್ಯಾ ಸಿನ್ವಾರ್‌ನನ್ನು ಕೊಂದಿರುವುದಾಗಿ ಇಸ್ರೇಲ್ ಸೇನೆ ಗುರುವಾರ ಹೇಳಿಕೊಂಡಿದೆ. ಇದಕ್ಕೆ ಇಂಬು ನೀಡುವಂತೆ ಇಸ್ರೇಲ್ ಸೇನೆ ಡ್ರೋನ್ ವಿಡಿಯೋ ಕೂಡ ಬಿಡುಗಡೆ ಮಾಡಿದ್ದು, ಸಿನ್ವಾರ್‌ನನ್ನು ಹೊಡೆದುರುಳಿಸಿರುವುದಾಗಿ ಹೇಳಿದೆ.

ತಲೆಗೆ ಗುಂಡೇಟು ಬಿದ್ದು ಕೈ ಕಟ್ ಆದ ಸ್ಥಿತಿಯಲ್ಲಿ ಯಾಹ್ಯಾ ಸಿನ್ವಾರ್ ಪತ್ತೆಯಾಗಿದ್ದು, ಇಸ್ರೇಲ್ ಸೇನಾ ಪಡೆಗಳು ಆತನ ಮೃತದೇಹವನ್ನು ಹೊತ್ತು ಸಾಗಿರುವ ವಿಡಿಯೋ ಇದೀಗ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಒಂದೆಡೆ ಯಾಹ್ಯಾ ಸಿನ್ವಾರ್ ಹತ್ಯೆಯನ್ನು ಇಡೀ ಇಸ್ರೇಲಿಗರು ಸಂಭ್ರಮಿ ಸುತ್ತಿದ್ದರೆ, ಮತ್ತೊಂದೆಡೆ ಹಮಾಸ್ ಕುರಿತು ಸಾಫ್ಟ್ ಕಾರ್ನರ್ ಹೊಂದಿರುವ ಜಾಗತಿಕ ನಾಯಕರು ಆಘಾತ ವ್ಯಕ್ತಪಡಿಸಿದ್ದಾರೆ

ಆರೋಪದಿಂದ ಮುಕ್ತ; ಸದ್ಗುರುಗೆ ಬಿಗ್ ರಿಲೀಫ್



ನವದೆಹಲಿ: ತಮಿಳುನಾಡಿನ ಕೊಯಮತ್ತೂರಿನಲ್ಲಿರುವ ಪ್ರಸಿದ್ಧ ಇಶಾ ಫೌಂಡೇಶನ್‌ನ ಆಶ್ರಮದಲ್ಲಿ ತಮ್ಮ ಮಕ್ಕಳನ್ನು ಅಕ್ರಮವಾಗಿ ಇಟ್ಟುಕೊಳ್ಳಲಾಗಿದೆ ಎಂಬ ಆರೋಪದಡಿ ಸದ್ಗುರು ಜಗ್ಗಿ ವಾಸುದೇವ್ ವಿರುದ್ಧ ಮದ್ರಾಸ್ ಹೈಕೋರ್ಟ್‌ನಲ್ಲಿ ಪ್ರಕರಣ ದಾಖಲಾಗಿತ್ತು. ಇದೀಗ ಸುಪ್ರೀಂಕೋರ್ಟ್ ಈ ಪ್ರಕರಣವನ್ನು ವಜಾಗೊಳಿಸಿದೆ. ಸುಪ್ರೀಕೋರ್ಟ್ ತೀರ್ಪಿನಿಂದ ಸದ್ಗುರು ಅವರಿಗೆ ನಿರಾಳವಾಗಿದೆ

ಮಕ್ಕಳಿಬ್ಬರ ಬುದ್ದಿಯ ಮೇಲೆ ಮಂಕು ಬೂದಿ ಎರಚಿ ತಮ್ಮ ಆಶ್ರಮದಲ್ಲಿ ಜಗ್ಗಿ ವಾಸುದೇವ್ ಅಕ್ರಮವಾಗಿ ಇರಿಸಿಕೊಂಡಿದ್ದಾರೆ ಎಂದು ತಮಿಳುನಾಡಿನ ನಿವೃತ್ತ ಪ್ರಾಧ್ಯಾಪಕರೊಬ್ಬರು ದೂರು ನೀಡಿದ್ದರು. ಇವರ ದೂರಿನ ಮೇರೆಗೆ ಸದ್ಗುರು ವಿರುದ್ಧ ಪ್ರಕರಣ ದಾಖಲಿಸಲಾಗಿತ್ತು. ಮದ್ರಾಸ್ ಹೈಕೋರ್ಟ್‌ನಲ್ಲೂ ದೂರು ದಾಖಲಿಸಿದ್ದರಿಂದ ದಾಳಿಗೆ ಸೂಚಿಸಲಾಗಿತ್ತು ಈ ಸಂಬಂಧ ಸದ್ಗುರು ಸುಪ್ರೀಂಕೋರ್ಟ್ ಮೆಟ್ಟಿಲು ಏರಿದ್ದರು. ಕೋರ್ಟ್‌ಗೆ ಸಲ್ಲಿಕೆಯಾದ ವರದಿ ಪ್ರಕಾರ ಪ್ರಕರಣವನ್ನು ಸುಪ್ರೀಂಕೋರ್ಟ್ ವಜಾಗೊಳಿಸಿದೆ

ಕೊಯಮತ್ತೂರಿನ ಇಶಾ ಫೌಂಡೇಶನ್‌ಗೆ ಸೇರಿದ ಆಶ್ರಮದಲ್ಲಿ ಸದ್ಗುರು ಅವರು ಯಾರನ್ನೂ ಅಕ್ರಮವಾಗಿ ಇರಿಸಿಲ್ಲ ಎಂಬ ಅಲ್ಲಿನ ಸ್ಥಳೀಯರ ಹೇಳಿಕೆಯನ್ನು ಆಲಿಸಿದ ಸುಪ್ರೀಕೋರ್ಟ್, ಅವರ ಪ್ರಕರಣವನ್ನು ವಜಾಗೊಳಿಸಿ ಆದೇಶ ಹೊರಡಿಸಿದೆ.

ಅಮೆರಿಕದಲ್ಲಿ ಪನ್ನು ಹತ್ಯೆ ಯತ್ನ: ರಾ ಅಧಿಕಾರಿ ಕೈವಾಡದ ಆರೋಪ



ನ್ಯೂಯಾರ್ಕ್ (ಅಮೆರಿಕ): ಖಲಿಸ್ತಾನ್ ಭಯೋತ್ಪಾದಕ ಗುರುಪತ್ವಂತ್ ಸಿಂಗ್ ಪನ್ನು ಹತ್ಯೆ ಯತ್ನ ಪ್ರಕರಣ ಸಂಬಂಧ ಭಾರತದ ನಿವೃತ್ತ ಬೇಹುಗಾರಿಕಾ ಅಧಿಕಾರಿಯೊಬ್ಬರನ್ನು ಆರೋಪಿ ಎಂದು ಅಮೆರಿಕ ಗುರ್ತಿಸಿದೆ. ಅಮೆರಿಕದ ನ್ಯೂಯಾರ್ಕ್ ನಗರದಲ್ಲಿ ನೆಲೆಸಿರುವ ಗುರುಪತ್ವಂತ್ ಸಿಂಗ್ ಪನ್ನು ಅವರನ್ನು ಹತ್ಯೆ ಮಾಡಲು ಕಳೆದ ವರ್ಷ ಯತ್ನ ನಡೆದಿತ್ತು.

ಭಾರತದ ನಿವೃತ್ತ ಬೇಹುಗಾರಿಕಾ ಅಧಿಕಾರಿ ಭಾರತದ ಬೇಹುಗಾರಿಕಾ ಪಡೆ 'ರಾ'ನಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು ಎಂದು ಅಮೆರಿಕದ ನ್ಯಾಯ ಇಲಾಖೆ ಮಾಹಿತಿ ನೀಡಿದೆ. ಅಮೆರಿಕ ಹಾಗೂ ಕೆನಡಾದ ದ್ವಿಪೌರತ್ವ ಹೊಂದಿರುವ ಗುರುಪತ್ವಂತ್ ಸಿಂಗ್ ಪನ್ನು ಅವರನ್ನು ಹತ್ಯೆ ಮಾಡಲು ಈ ನಿವೃತ್ತ ಅಧಿಕಾರಿ ಹಣ ನೀಡಿ ಹಂತಕರನ್ನು ನಿಯೋಜಿಸಿದ್ದರು ಎಂದು ಆಪಾದಿಸಲಾಗಿದೆ. ಜೊತೆಯಲ್ಲೇ ಇವರ ವಿರುದ್ಧ ಅಕ್ರಮ ಹಣ ವರ್ಗಾವಣೆ ಪ್ರಕರಣವನ್ನೂ ದಾಖಲು ಮಾಡಲಾಗಿದೆ ಈ ಕುರಿತಾಗಿ ಮಾಹಿತಿ ನೀಡಿರುವ ಎಫ್‌ಬಿಐ ನಿರ್ದೇಶಕ ಕ್ರಿಸ್ಟೋಫರ್ ವ್ರೇ, ಅಮೆರಿಕ ನೆಲದಲ್ಲಿ ಈ ರೀತಿಯ ಕೃತ್ಯಗಳನ್ನು ಎಸಗುವ ಪ್ರಯತ್ನವನ್ನು ಎಫ್‌ಬಿಐ ಯಾವುದೇ ಕಾರಣಕ್ಕೂ ಸಹಿಸೋದಿಲ್ಲ ಎಂದಿದ್ದಾರೆ.


ಜೈಪುರದಲ್ಲಿ ಆರ್‌ಎಸ್‌ಎಸ್ ಕಾರ್ಯಕರ್ತರ ಮೇಲೆ ದಾಳಿ; 10 ಮಂದಿಗೆ ಗಾಯ

ಜೈಪುರ: ಜೈಪುರದ ದೇವಸ್ಥಾನವೊಂದರ ಧಾರ್ಮಿಕ ಕಾರ್ಯಕ್ರಮದ ವೇಳೆ ರಾಷ್ಟ್ರೀಯ ಸ್ವಯಂಸೇವಕ ಸಂಘ(ಆರ್‌ಎಸ್‌ಎಸ್)ದ ಕಾರ್ಯಕರ್ತರ ಮೇಲೆ ದಾಳಿ ನಡೆಸಲಾಗಿದ್ದು, ಘಟನೆಯಲ್ಲಿ ಹತ್ತು ಮಂದಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ಶುಕ್ರವಾರ ತಿಳಿಸಿದ್ದಾರೆ.

ಶರದ್ ಪೂರ್ಣಿಮೆಯ ನಿಮಿತ್ತ ಗುರುವಾರ ರಾತ್ರಿ ದೇವಸ್ಥಾನದಲ್ಲಿ ಜಾಗ್ರಣ ಕಾರ್ಯಕ್ರಮ ನಡೆಯುತ್ತಿತ್ತು. ಭಕ್ತಾದಿಗಳಿಗೆ ಪ್ರಸಾದ ವಿನಿಯೋಗ ಮಾಡುತ್ತಿದ್ದಾಗ ಅಕ್ಕಪಕ್ಕದ ಇಬ್ಬರು ವ್ಯಕ್ತಿಗಳು ತಡರಾತ್ರಿ ಕಾರ್ಯಕ್ರಮ ನಡೆಸಲು ಆಕ್ಷೇಪ ವ್ಯಕ್ತಪಡಿಸಿದರು. ಈ ವಿಷಯದ ಬಗ್ಗೆ ವಾಗ್ವಾದದ ನಂತರ, ಆರೋಪಿಗಳು ಇತರರನ್ನು ಕರೆದು ಆರ್‌ಎಸ್‌ಎಸ್ ಕಾರ್ಯಕರ್ತರ ಮೇಲೆ ಚಾಕುವಿನಿಂದ ಹಲ್ಲೆ ನಡೆಸಿದರು. ಘಟನೆಯಲ್ಲಿ 10 ಮಂದಿ ಗಾಯಗೊಂಡಿದ್ದಾರೆ ಎಂದು ಹೇಳಿದ್ದಾರೆ.

ಗಾಯಗೊಂಡ ಆರು ಮಂದಿಯನ್ನು ಚಿಕಿತ್ಸೆಗಾಗಿ ಸವಾಯಿ ಮಾನ್‌ಸಿಂಗ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಆರೋಪಿ ನಸೀಬ್ ಚೌಧರಿ ಮತ್ತು ಆತನ ಮಗನನ್ನು ವಶಕ್ಕೆ ಪಡೆಯಲಾಗಿದ್ದು, ದಾಳಿಯಲ್ಲಿ ಭಾಗಿಯಾಗಿರುವ ಇತರರನ್ನು ಬಂಧಿಸುವ ಪ್ರಯತ್ನಗಳು ನಡೆಯುತ್ತಿವೆ ಎಂದು ಪೊಲೀಸರು ತಿಳಿಸಿದ್ದಾರೆ. ಘಟನೆಯಿಂದ ಆಕ್ರೋಶಗೊಂಡ ಕೆಲವರು ತಡರಾತ್ರಿ ದೆಹಲಿ–ಅಜ್ಮೀರ್ ರಾಷ್ಟ್ರೀಯ ಹೆದ್ದಾರಿ ತಡೆದು ಪ್ರತಿಭಟನೆ ನಡೆಸಿದರು.

ಕಾಶ್ಮೀರಕ್ಕೆ ರಾಜ್ಯದ ಸ್ಥಾನಮಾನ ಮರುಸ್ಥಾಪಿಸುವ ನಿರ್ಣಯ ಅಂಗೀಕರಿಸಿದ ಒಮರ್ ಕ್ಯಾಬಿನೆಟ್



ಶ್ರೀನಗರ: ಜಮ್ಮು ಮತ್ತು ಕಾಶ್ಮೀರ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ನೇತೃತ್ವದಲ್ಲಿ ನಡೆದ ಮೊದಲ ಸಚಿವ ಸಂಪುಟ ಸಭೆಯಲ್ಲಿ ರಾಜ್ಯದ ಸ್ಥಾನಮಾನ ಮರುಸ್ಥಾಪಿಸುವ ನಿರ್ಣಯವನ್ನು ಅಂಗೀಕರಿಸಿದೆ.

ಸಿಎಂ ಒಮರ್ ಅಬ್ದುಲ್ಲಾ ನೇತೃತ್ವದ ಸಚಿವ ಸಂಪುಟ ಸಭೆ ಗುರುವಾರ ಸಿವಿಲ್ ಸೆಕ್ರೆಟರಿಯೇಟ್‌ನಲ್ಲಿ ನಡೆಯಿತು. ಡಿಸಿಎಂ ಸುರೀಂದರ್ ಚೌಧರಿ, ಸಚಿವರಾದ ಸಕೀನಾ ಇಟ್ಟೂ, ಜಾವೇದ್ ದಾರ್, ಜಾವೇದ್ ರಾಣಾ ಮತ್ತು ಸತೀಶ್ ಶರ್ಮಾ, ಮುಖ್ಯ ಕಾರ್ಯದರ್ಶಿ ಅಟಲ್ ದುಲೂ ಸಭೆಯಲ್ಲಿ ಭಾಗವಹಿಸಿದ್ದರು.

ಸಭೆಯು ಜಮ್ಮು ಮತ್ತು ಕಾಶ್ಮೀರ ಕಣಿವೆಗೆ ಪೂರ್ಣ ಪ್ರಮಾಣದ ರಾಜ್ಯದ ಸ್ಥಾನಮಾನವನ್ನು ಪುನಃಸ್ಥಾಪಿಸುವಂತೆ ಪ್ರಧಾನಿ ಮೋದಿ ನೇತೃತ್ವದ ಕೇಂದ್ರ ಸರ್ಕಾರವನ್ನು ಒತ್ತಾಯಿಸಿತು ಎಂದು ಮೂಲಗಳು ತಿಳಿಸಿವೆ. ಆಗಸ್ಟ್ 5, 2019 ರಂದು, ಕೇಂದ್ರ ಸರ್ಕಾರ ಜಮ್ಮು ಮತ್ತು ಕಾಶ್ಮೀರ ವಿಶೇಷ ಸ್ಥಾನಮಾನವನ್ನು ರದ್ದುಗೊಳಿಸಿತು ಮತ್ತು ಹಿಂದಿನ ರಾಜ್ಯವನ್ನು ಎರಡು ಕೇಂದ್ರಾಡಳಿತ ಪ್ರದೇಶಗಳಾಗಿ ವಿಭಜಿಸಿತು.

ಮೈಸೂರು ಮಿತ್ರ ಶನಿವಾರ 19 ಅಕ್ಟೋಬರ್ 2024

ಬಾಳೆಲೆ ದೇವನೂರು ಗ್ರಾಮದ ಸುತ್ತ 7 ಜಾನುವಾರುಗಳನ್ನು ಕೊಂದಿರುವ

ಹುಲಿ ಸೆರೆ ಕಾರ್ಯಾಚರಣೆ ಆರಂಭ



ಬಾಳೆಲೆ ದೇವನೂರು ಗ್ರಾಮದಲ್ಲಿ ಹುಲಿ ಸೆರೆಗೆ ಸಾಕಾನೆಗಳ ಮೂಲಕ ಕಾರ್ಯಾಚರಣೆ ಆರಂಭಿಸಿರುವುದು.

> ಹುಲಿ ಸೆರೆಗೆ ಕ್ರಮ ಕೈಗೊಳ್ಳಲಾಗಿದ್ದು, ಕೂಂಬಿಂಗ್ ನಡೆಸಿ ಹುಲಿ ಇರುವು ವಿಕೆಯನ್ನು ಖಚಿತ ಮಾಡಿಕೊಳ್ಳಲಾಗುವುದು. ನಂತರ ಹುಲಿಯನ್ನು ಅರಣ್ಯಕ್ಕೆ ವಾಪಸ್ ಓಡಿಸಲಾಗುವುದು. 2ನೇ ಹಂತದ ಕಾರ್ಯಾಚರಣೆಯಾಗಿ ಬೋನು ಅಳವಡಿಸಿ ಜಾನುವಾರು ಕಳೇಬರ ಇರಿಸಿ, ಅರವಳಿಕೆ ಪ್ರಯೋಗಿಸಿ ಸೆರೆ ಹಿಡಿಯಲಾಗುವುದು.
>
> –ಸೀಮಾ, ಡಿಸಿಎಫ್

ಮಡಿಕೇರಿ, ಅ.18–ಪೊನ್ನಂಪೇಟೆ ತಾಲೂಕಿನ ಬಾಳೆಲೆ ದೇವನೂರು ಗ್ರಾಮದ ಸುತ್ತಮುತ್ತ ಒಂದೂವರೆ ತಿಂಗಳಿನಿಂದ 7 ಜಾನುವಾರುಗಳನ್ನು ಕೊಂದು ಹಾಕಿರುವ ಹುಲಿ ಸೆರೆಗೆ ಕಾರ್ಯಾಚರಣೆ ಆರಂಭಿಸಲಾಗಿದೆ.

ಜಾನುವಾರುಗಳ ಮೇಲೆ ದಾಳಿ ನಡೆಸುತ್ತಿರುವ ಹುಲಿ ಸೆರೆಗೆ ಶುಕ್ರವಾರ ಕಾರ್ಯಾಚರಣೆ ಆರಂಭಗೊಂಡಿದ್ದು, ರಾಜ್ಯ ವನ್ಯಜೀವಿ ಮಂಡಳಿ ಸದಸ್ಯ ಮೇರಿಯಂಡ ಸಂಕೇತ್ ಪೂವಯ್ಯ ಉಸ್ತುವಾರಿಯಲ್ಲಿ ಕಾರ್ಯಾಚರಣೆ ನಡೆಸಲಾಗುತ್ತಿದೆ.

ಜಾನುವಾರುಗಳ ಮೇಲೆ ಹುಲಿ ದಾಳಿ ನಡೆಸಿರುವುದು ಕ್ಯಾಮರಾದಲ್ಲಿ ಸೆರೆಯಾಗಿದೆ. ಹುಲಿ ಗಣತಿಯಲ್ಲಿ ದೊರೆತ ಮಾಹಿತಿ ಪ್ರಕಾರ ಜಾನುವಾರುಗಳ ಮೇಲೆ ದಾಳಿ ನಡೆಸಿದ್ದ ಹುಲಿಯನ್ನು 'ನಾಗರಹೊಳೆ–ಯು–61' ಎಂದು ಗುರುತಿಸಲಾಗಿದೆ. ಈ ಹುಲಿ ಗಾತ್ರದಲ್ಲಿ ಸಣ್ಣದಾಗಿದ್ದು, ಗಂಡು ಹುಲಿ ಎಂಬುದು ಪತ್ತೆಯಾಗಿದೆ.

ನಾಗರಹೊಳೆ ಹುಲಿ ಸಂರಕ್ಷಣಾ ಮೀಸಲು ಪ್ರದೇಶದ ಡಿಸಿಎಫ್ ಸೀಮಾ, ಹುಣಸೂರು ವನ್ಯಜೀವಿ ಉಪವಿಭಾಗದ ಎಸಿಎಫ್ ಲಕ್ಷ್ಮೀಕಾಂತ್, ನಾಗರಹೊಳೆ ಪಶು ವೈದ್ಯಾಧಿಕಾರಿ ಡಾ.ರಮೇಶ್ ಹಾಗೂ ಆನೆಚೌಕೂರು ಆರ್‌ಎಫ್ಓ ದೇವರಾಜ್ ಮತ್ತು ಸಿಬ್ಬಂದಿ ಹುಲಿ ಸೆರೆಗೆ ಕೂಂಬಿಂಗ್ ನಡೆಸುತ್ತಿದ್ದಾರೆ. ಮತ್ತಿಗೋಡು ಸಾಕಾನೆ ಶಿಬಿರದಿಂದ ಅಶೋಕ್ ಮತ್ತು ಅಭಿಮನ್ಯು ಸಾಕಾನೆಗಳು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿವೆ.

ಕಾರ್ಯಾಚರಣೆ ಕುರಿತು ಮಾಹಿತಿ ನೀಡಿದ ರಾಜ್ಯ ವನ್ಯಜೀವಿ ಮಂಡಳಿ ಸದಸ್ಯ ಸಂಕೇತ್ ಪೂವಯ್ಯ, ಹುಲಿ ಗುರುತು ಕ್ಯಾಮರಾದಲ್ಲಿ ಸೆರೆಯಾದ ಬೆನ್ನಲ್ಲೇ ಶಾಸಕ ಎ.ಎಸ್.ಪೊನ್ನಣ್ಣ ಅವರು ಅರಣ್ಯ ಸಚಿವ ಈಶ್ವರ್ ಖಂಡ್ರೆ ಹಾಗೂ ವನ್ಯಜೀವಿ ಪಿಸಿಸಿಎಫ್ ಪುಷ್ಕರ್ ಅವರೊಂದಿಗೆ ಚರ್ಚಿಸಿ ಹುಲಿ ಸೆರೆಗೆ ಅನುಮತಿ ಕೊಡಿಸಿದ್ದಾರೆ. ಹುಲಿ ಗುರುತು ಪತ್ತೆಯಾಗಿರುವುದರಿಂದ ಕಾರ್ಯಾಚರಣೆ ಸುಲಭವಾಗಲಿದೆ ಎಂದರು.

ದೇವಟ್ ಪರಂಬುವಿನಲ್ಲಿ ಸಿಎನ್‌ಸಿ ವಿಶೇಷ ಪ್ರಾರ್ಥನೆ



ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ನೇತೃತ್ವದಲ್ಲಿ ದೇವಟ್ ಪರಂಬುವಿನಲ್ಲಿ ದೋಸೆ ಮತ್ತು ಪುಟ್ಟ್ ಅನ್ನು ಇರಿಸಿ ವಿಶೇಷ ಪ್ರಾರ್ಥನೆ ಸಲ್ಲಿಸಲಾಯಿತು.

ಮಡಿಕೇರಿ, ಅ.18–ಕಾವೇರಿ ತುಲಾ ಸಂಕ್ರಮಣ ಅಂಗವಾಗಿ ಕಾವೇರಿ ತೀರ್ಥೋದ್ಭವ ಮರುದಿನ ಶುಕ್ರವಾರ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ದೇವಟ್ ಪರಂಬುವಿನ ದುರಂತ ಸ್ಥಳದಲ್ಲಿ ದೋಸೆ ಮತ್ತು ಪುಟ್ಟ್ ಭಕ್ಷ್ಯಗಳನ್ನಿಟ್ಟು ವಿಶೇಷ ಪ್ರಾರ್ಥನೆ ಸಲ್ಲಿಸಿತು.

ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ನೇತೃತ್ವದಲ್ಲಿ ಕೊಡವ ಸಾಂಪ್ರದಾಯಿಕ ಉಡುಪಿನೊಂದಿಗೆ ದೇವಟ್ ಪರಂಬುವಿಗೆ ತೆರಳಿದ ಪ್ರಮುಖರು, ಬೊತ್ತ್ ಬಳ್ಳಿ ಎಂದು ಕರೆಯಲಾಗುವ ಗಿಡಮೂಲಿಕೆಗಳಿಂದ ಹೆಣೆದಿರುವ ಬೊತ್ತ್ ಕಂಬದಲ್ಲಿ ದೋಸೆ ಮತ್ತು ಪುಟ್ಟ್ ಅನ್ನು ಶಾಸ್ತ್ರೋಕ್ತವಾಗಿ ಇರಿಸಿ ಪ್ರಾರ್ಥಿಸಿದರು.

ಈ ಸಂದರ್ಭ ಮಾತನಾಡಿದ ಎನ್.ಯು. ನಾಚಪ್ಪ, ಕಾವೇರಿ ತೀರ್ಥೋದ್ಭವ ಮರುದಿನ ಹಿರಿಯರಿಗೆ ದೋಸೆ ಮತ್ತು ಪುಟ್ಟ್ ಇಡುವ ಸಂಪ್ರದಾಯ ಅನಾದಿ ಕಾಲದಿಂದಲೂ ನಡೆದುಕೊಂಡು ಬಂದಿದೆ. ಇದೊಂದು ಜನಪದ ಪದ್ಧತಿ. ಪ್ರತಿ ವರ್ಷ ಕಾವೇರಿ ತೊಲೆಯಾರ್ ಚಂಗ್ರಾಂದಿ ಆಚರಣೆಗೆ ಸಂಬಂಧಿಸಿದಂತೆ ಕೊಡವರು ತಮ್ಮ ಜೌಗು ಪ್ರದೇಶ, ಭತ್ತದ ಗದ್ದೆ, ಭತ್ತದ ಖಣಜ, ದನದ ಸಗಣಿ ಗುಂಡಿ, ಕೊಟ್ಟಿಗೆ, ಬಾವಿ, ಗೇಟ್‌ಗಳು ಮತ್ತು ಅವರ ವಸತಿ ಗೃಹಗಳ ಮುಂಭಾಗದ ಪ್ರದೇಶದಲ್ಲಿ 2 ಅಥವಾ 3 ದಿನ ಮೊದಲು ಬೊತ್ತ್ ಕುತ್ತುವುದು ಸಾಂಪ್ರದಾಯಿಕವಾಗಿ ನಡೆದುಕೊಂಡು ಬಂದಿದೆ ಎಂದರು.

ತಲಕಾವೇರಿ ತೀರ್ಥಯಾತ್ರೆಗೆ ಭೇಟಿ ನೀಡುವ ಪ್ರತಿಯೊಬ್ಬ ಕೊಡವರು, ದೇವಟ್ ಪರಂಬು ನರಮೇಧದ ಸ್ಮಾರಕ ಸ್ಥಳದಲ್ಲಿ ಗೌರವಪೂರ್ವಕವಾಗಿ ಹಸಿರು ಎಲೆಗಳನ್ನು ಅರ್ಪಿಸುತ್ತಾರೆ. ಕೊಡವ ಬುಡಕಟ್ಟು ಜನರು ಈ ಸ್ಥಳವನ್ನು ಅತ್ಯಂತ ಪವಿತ್ರವಾದ ಗರ್ಭಗುಡಿ ಎಂದು ಪರಿಗಣಿಸುತ್ತಾರೆ. ದೇವಟ್ ಪರಂಬು ಸ್ಮಾರಕಕ್ಕೆ ಆಧ್ಯಾತ್ಮಿಕ ಮತ್ತು ಧಾರ್ಮಿಕ ಪಾವಿತ್ರ್ಯ ನೀಡುವ ಸಲುವಾಗಿ, ಸಿಎನ್‌ಸಿ ಕಳೆದ ಹಲವು ವರ್ಷಗಳಿಂದ ಶ್ರದ್ಧಾಭಕ್ತಿಯಿಂದ ಶ್ರದ್ಧಾಂಜಲಿ ಅರ್ಪಿಸುತ್ತಿದೆ ಎಂದು ತಿಳಿಸಿದರು.

ಬಳಿಕ ಸಿಎನ್‌ಸಿ ಪ್ರಮುಖರು ದೇವಟ್ ಪರಂಬು ದುರಂತ ಸ್ಮಾರಕದಲ್ಲಿ ಪ್ರಾರ್ಥನೆ ಸಲ್ಲಿಸಿ ಅಗಲಿದ ಆತ್ಮಗಳಿಗೆ ಕಾವೇರಿ ಪವಿತ್ರ ತೀರ್ಥ ಅರ್ಪಿಸಿದರು. ಪಟ್ಟಮಾಡ ಕುಶ, ಮಂದಪಂಡ ಮನೋಜ್, ಬೊಳ್ಳಾರ್ಪಂಡ ಚೆಂಗಪ್ಪ, ಮಂದಪಂಡ ಸೂರಜ್, ಮಣವಟ್ಟೀರ ಚಿಣ್ಣಪ್ಪ, ಚೀಯಬೇರ ಸತೀಶ್, ಪುಟ್ಟಿಚಂಡ ದೇವಯ್ಯ, ಬೊಳ್ಳಾರ್ಪಂಡ ಮಾಚಯ್ಯ ಭಾಗವಹಿಸಿದ್ದರು.

ವಿರಾಜಪೇಟೆಯಲ್ಲಿ ಎಟಿಎಂ ಕೇಂದ್ರ ಉದ್ಘಾಟನೆ...



ವಿರಾಜಪೇಟೆಯಲ್ಲಿ ಹಿಟಾಚಿ ಸಂಸ್ಥೆ ಎಟಿಎಂ ಕೇಂದ್ರವನ್ನು ಅರಮೇರಿ ಕಳಂಚೇರಿ ಮಠಾಧ್ಯಕ್ಷರಾದ ಶ್ರೀ ಶಾಂತಮಲ್ಲಿಕಾರ್ಜುನಸ್ವಾಮೀಜಿ ಉದ್ಘಾಟಿಸಿದರು. ಸಂತ ಅನ್ನಮ್ಮ ಕಾಲೇಜಿನ ಪ್ರಾಂಶುಪಾಲ ಫಾದರ್ ಮದಲೈ ಮುತ್ತು, ಪುರಸಭೆ ಉಪಾಧ್ಯಕ್ಷೆ ಫಾಸಿಹ ತಬಸುಮ್, ಸದಸ್ಯ ಸಿ.ಕೆ.ಪೃಥ್ವಿನಾಥ್, ವಕೀಲ ಎಸ್.ಆರ್.ಜಗದೀಶ್, ಬ್ಯಾಂಕ್ ಆಫ್ ಬರೋಡಾ ಸೀನಿಯರ್ ಬ್ರಾಂಚ್ ಮ್ಯಾನೇಜರ್ ಸಿ.ದೀಪ್ತಿ, ಕೊಡವ ಸಮಾಜ ಅಧ್ಯಕ್ಷ ಕುಂಬೇರ ಎ.ಮನುಕುಮಾರ್, ಟೌನ್ ಬ್ಯಾಂಕ್ ಅಧ್ಯಕ್ಷ ಕರ್ನಂಡ ರಘು ಸೋಮಯ್ಯ ಕೊಡವ ಸೌಹಾರ್ದ ಬ್ಯಾಂಕ್ ಅಧ್ಯಕ್ಷ ನೆಲ್ಲಮಕ್ಕಡ ಪಿ. ಮುತ್ತಣ್ಣ, ಅಮ್ಮಣಿಚಂಡ ಎನ್.ಉತ್ತಪ್ಪ, ನಿವೃತ್ತ ಡಿಡಿಪಿಐ ಮಚಾಡೋ, ಪ್ರಾಂಶುಪಾಲ ಚಾರ್ಲ್ಸ್ ಡಿಸೋಜ, ಪಿ.ಶಕೀಲ್, ಮಧೋಷ್ ಪೂವಯ್ಯ ಇದ್ದರು.

ಬಲಮುರಿ ಜಾತ್ರೋತ್ಸವದಲ್ಲಿ ನದಿಗೆ ಬಿದ್ದ ಭಕ್ತನ ರಕ್ಷಣೆ



ನಾಪೋಕ್ಲು: ಸಮೀಪದ ಇತಿಹಾಸ ಪ್ರಸಿದ್ಧ ಬಲಮುರಿ ಶ್ರೀ ಆಗಸ್ತ್ಯೇಶ್ವರ ದೇವಾಲಯದ ಕಾವೇರಿ ಜಾತ್ರೆಗೆ ಬಂದಿದ್ದ ಭಕ್ತರೊಬ್ಬರು ಕಾವೇರಿ ಆರತಿ ವೇಳೆ ಸೇತುವೆ ಮೇಲಿಂದ ಆಕಸ್ಮಿಕವಾಗಿ ನದಿಗೆ ಬಿದ್ದು ಕೊಚ್ಚಿಹೋಗುತ್ತಿದ್ದ ವೇಳೆ, ಸ್ಥಳೀಯರು ಆತನನ್ನು ರಕ್ಷಿಸಿದ್ದಾರೆ.

ಹೊದ್ದೂರು ಗ್ರಾಪಂ ವ್ಯಾಪ್ತಿ ಕಬಡಗೇರಿ ಗ್ರಾಮದ ವಾಸು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಕಾವೇರಿ ತೀರ್ಥೋದ್ಭವ ಮುಗಿದ ಮರುದಿನ ಶುಕ್ರವಾರ ಬಲಮುರಿ ಆಗಸ್ತ್ಯೇಶ್ವರ ದೇವಾಲಯದಲ್ಲಿ ಕಾವೇರಿ ಜಾತ್ರೆ ನಡೆಯುತ್ತಿತ್ತು. ಈ ವೇಳೆ ಕಾವೇರಿ ಮಾತೆಗೆ ಆರತಿ ಮಾಡಲಾಗುತ್ತಿದ್ದು, ಸೇತುವೆ ಮೇಲೆ ವಾಸು ನಡೆದುಕೊಂಡು ಬರುತ್ತಿದ್ದಾಗ ವಾಹನವೊಂದು ಎದುರಿಗೆ ಬಂದಿದೆ. ಈ ವೇಳೆ ಆಯತಪ್ಪಿ ನದಿಗೆ ಬಿದ್ದಿದ್ದಾರೆ.

ನೀರಿನ ರಭಸದಲ್ಲಿ ಕೊಚ್ಚಿಕೊಂಡು ಹೋಗುತ್ತಿದ್ದ ಆತನನ್ನು ಕಂಡ ಭಕ್ತರು ಕಿರುಚಿಕೊಂಡಿದ್ದಾರೆ. ತಕ್ಷಣ ಸ್ಥಳೀಯ ನಿವಾಸಿಯಾದ ಈಜು ಪರಿಣಿತ ಎಂ.ಆರ್. ಬಿಪಿನ್ ಅವರು ನದಿಗೆ ಹಾರಿ ಕೊಚ್ಚಿ ಹೋಗುತ್ತಿದ್ದ ವಾಸುನನ್ನು ಹರಸಾಹಸಪಟ್ಟು ರಕ್ಷಿಸಿದ್ದಾರೆ.

ಎಂ.ಆರ್.ಬಿಪಿನ್ ಅವರ ಸಮಯಪ್ರಜ್ಞೆ ಮತ್ತು ಸಾಹಸದ ಬಗ್ಗೆ ನೆರೆದ ಜನಸ್ತೋಮ ಮೆಚ್ಚುಗೆ ವ್ಯಕ್ತಪಡಿಸಿದರು. ಬಲಮುರಿ ಹಳೇ ಸೇತುವೆ ಮಳೆಗಾಲದಲ್ಲಿ ಸಂಪೂರ್ಣವಾಗಿ ಮುಳುಗಡೆಯಾಗುತ್ತದೆ. ಸೇತುವೆಗೆ ಯಾವುದೇ ತಡೆಗೋಡೆ ಇಲ್ಲದಿರುವುದರಿಂದ ಅಪಾಯ ಎದುರಾಗಿದೆ.

ಚಿಕ್ಕಮುಂಡೂರಲ್ಲಿ ತಂದೆ ಕೊಲೆಗೈದ ಮಗ

ಗೋಣಿಕೊಪ್ಪ, ಅ.18–ಕ್ಷುಲ್ಲಕ ವಿಚಾರವಾಗಿ ತಂದೆ ಹಾಗೂ ಮಗನ ನಡುವೆ ನಡೆದ ಜಗಳ ಕೊಲೆಯಲ್ಲಿ ಅಂತ್ಯವಾಗಿದ್ದು, ತಂದೆ ಕೊಲೆಯಾದ ಘಟನೆ ಪೊನ್ನಂಪೇಟೆ ತಾಲೂಕಿನ ಚಿಕ್ಕಮುಂಡೂರು ಗ್ರಾಮದಲ್ಲಿ ಗುರುವಾರ ರಾತ್ರಿ ನಡೆದಿದೆ.

ಗ್ರಾಮದ ಚಿಂಡಮಾಡ ಎನ್.ನಾಣಯ್ಯ (70) ಕೊಲೆಯಾಗಿದ್ದು, ಆರೋಪಿ ದೀಪು (45) ತಲೆಮರೆಸಿಕೊಂಡಿದ್ದಾನೆ. ಗುರುವಾರ ರಾತ್ರಿ ತಂದೆ ಎನ್.ನಾಣಯ್ಯ ಹಾಗೂ ಮಗ ದೀಪು ನಡುವೆ ಕ್ಷುಲ್ಲಕ ವಿಚಾರವಾಗಿ ಮಾತಿಗೆ ಮಾತು ಬೆಳೆದು ಜಗಳ ಆರಂಭವಾಗಿದೆ. ಈ ವೇಳೆ ಮಗ ತಂದೆಗೆ ದೊಣ್ಣೆಯಿಂದ ಹಲ್ಲೆ ನಡೆಸಿದ್ದಾನೆ. ಪರಿಣಾಮ ತಂದೆ ನಾಣಯ್ಯ ಕುಸಿದು ಬಿದ್ದು ಮೃತಪಟ್ಟಿದ್ದಾರೆ.

ಈ ಸಂಬಂಧ ಶ್ರೀಮಂಗಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಡಿಕೇರಿಯಲ್ಲಿ ಕಾವೇರಿ ತೀರ್ಥ ವಿತರಣೆ



ಮಡಿಕೇರಿಯಲ್ಲಿ ಕಾವೇರಿ ಭಕ್ತ ಮಂಡಳಿಯಿಂದ ಕಾವೇರಿ ತೀರ್ಥ ಮಂಟಪ ಮೆರವಣಿಗೆ ನಡೆಸಲಾಯಿತು.

ಮಡಿಕೇರಿ, ಅ.18–ನಗರದ ಶ್ರೀ ಕಾವೇರಿ ಭಕ್ತ ಮಂಡಳಿಯಿಂದ ಶುಕ್ರವಾರ ನಗರ ವ್ಯಾಪ್ತಿ ಭಕ್ತರಿಗೆ ಜೀವನದಿ ಕಾವೇರಿ ತೀರ್ಥ ವಿತರಿಸಲಾಯಿತು.

ಕಾವೇರಿ ಭಕ್ತ ಮಂಡಳಿ ಪದಾಧಿಕಾರಿಗಳು ತೀರ್ಥೋದ್ಭವ ದಿನ ತಲಕಾವೇರಿಗೆ ತೆರಳಿ ಪವಿತ್ರ ಕಾವೇರಿ ತೀರ್ಥ ತಂದು ನಗರದ ಜ.ತಿಮ್ಮಯ್ಯ ಜಿಲ್ಲಾ ಕ್ರೀಡಾಂಗಣ ಬಳಿ ಶುಕ್ರವಾರ ಬೆಳಗ್ಗೆ ಗಣಪತಿ ಹೋಮ, ಕಳಸ ಕಟ್ಟುವ ಧಾರ್ಮಿಕ ವಿಧಿ ವಿಧಾನಗಳು ನಡೆಸಿ, ಬಳಿಕ ತೀರ್ಥ ಪೂಜೆ ನೆರವೇರಿಸಿದರು. ಮಧ್ಯಾಹ್ನ ಅನ್ನಪ್ರಸಾದ ವಿತರಣೆ ನಂತರ ಕಾವೇರಿ ಮಾತೆ ಮಂಟಪದಲ್ಲಿ ಮಂಗಳ ವಾದ್ಯದೊಂದಿಗೆ ನಗರದ ವಿವಿಧ ಬಡಾವಣೆಗಳಿಗೆ ಮೆರವಣಿಗೆ ಮೂಲಕ ತೆರಳಿ ತೀರ್ಥ ವಿತರಿಸಲಾಯಿತು.

ಜಿಲ್ಲಾ ಕ್ರೀಡಾಂಗಣ ಮಾರ್ಗವಾಗಿ ಓಂಕಾರೇಶ್ವರ ಮುಖ್ಯ ರಸ್ತೆ, ಗೌಳಿ ಬೀದಿ ಸೇರಿದಂತೆ ನಗರದ ವಿವಿಧ ಬಡಾವಣೆಗಳಲ್ಲಿ ತೀರ್ಥ ಮಂಟಪ ಮೆರವಣಿಗೆ ನಡೆಸಲಾಯಿತು. ತೀರ್ಥ ವಿತರಣೆಯನ್ನು ಕಲಾವಿದ ದಿವಂಗತ ಅಣ್ಣು ಆರಂಭಿಸಿ 70 ವರ್ಷವಾಗಿದೆ. ಪ್ರಸ್ತುತ ಅಣ್ಣು ಅವರ ಮಕ್ಕಳಾದ ರವಿ, ಜಾಜಿ ಹಾಗೂ ಕಾವೇರಿ ಭಕ್ತ ಮಂಡಳಿ ಪದಾಧಿಕಾರಿಗಳು ತೀರ್ಥ ವಿತರಿಸುತ್ತಿದ್ದಾರೆ.

ಉದ್ಯಮ ಪರವಾನಗಿ ಅಭಿಯಾನಕ್ಕೆ ಚಾಲನೆ

● ವರ್ತಕರು ಪರವಾನಗಿ ಪಡೆದು ಆರ್ಥಿಕ ಅಭಿವೃದ್ಧಿ ಹೊಂದಿ ● ನಗರಸಭೆ ಅಧ್ಯಕ್ಷ ಸುರೇಶ್ ಸಲಹೆ



ಚಾಮರಾಜನಗರ ವರ್ತಕರ ಭವನದಲ್ಲಿ ನಡೆದ ಆಂದೋಲನದಲ್ಲಿ ವರ್ತಕರಿಗೆ ಉದ್ಯಮ ಪರವಾನಗಿ ನೀಡಲಾಯಿತು.

> ಪ್ಲಾಸ್ಟಿಕ್ ಮುಕ್ತ ನಗರಸಭೆ ಆಗಿಸಲು ಚಾಮರಾಜನಗರದಲ್ಲಿ ಪ್ಲಾಸ್ಟಿಕ್ ಬಳಕೆ ನಿಲ್ಲಿಸಬೇಕು. ಬಟ್ಟೆ ಬ್ಯಾಗ್‌ಗಳನ್ನು ಬಳಸಬೇಕು. ಪ್ಲಾಸ್ಟಿಕ್ ಮುಕ್ತ ಹಾಗೂ ಸ್ವಚ್ಛ ನಗರಸಭೆಗೆ ಎಲ್ಲರೂ ಸಹಕಾರ ನೀಡಬೇಕು.
>
> –ರಾಮದಾಸ್, ನಗರಸಭೆ ಪೌರಾಯುಕ್ತ

ಚಾಮರಾಜನಗರ, ಅ.18–ವರ್ತಕರು ನಗರಸಭೆಯಿಂದ ನೀಡುವ ಉದ್ಯಮ ಪರವಾನಗಿ ಪಡೆದು ವ್ಯಾಪಾರ ಮೊವಾಟು ನಡೆಸುವ ಜೊತೆಗೆ ಸ್ವಚ್ಛತೆಗೆ ಸಹಕಾರ ನೀಡಬೇಕು ಎಂದು ನಗರಸಭೆ ಅಧ್ಯಕ್ಷ ಸುರೇಶ್ ತಿಳಿಸಿದರು.

ನಗರದ ವರ್ತಕರ ಭವನದಲ್ಲಿ ಶುಕ್ರವಾರ ನಗರಸಭೆ ಹಾಗೂ ವರ್ತಕರ ಸಂಘದ ವತಿಯಿಂದ ನಡೆದ ಉದ್ಯಮ ಪರವಾನಗಿ ಆಂದೋಲನ ಚಾಲನೆ ನೀಡಿ ಮಾತನಾಡಿದ ಅವರು, ವರ್ತಕರು ಅಂಗಡಿ–ಮುಂಗಟ್ಟು ಹಾಗೂ ಇತರೆ ವ್ಯಾಪಾರಗಳಿಗೆ ನಗರಸಭೆಯಿಂದ ಪರವಾನಗಿ ಪಡೆದು ಕೊಳ್ಳಬೇಕು. ಪ್ರತಿವರ್ಷ ನಗರಸಭೆಗೆ ಅರ್ಜಿ ಸಲ್ಲಿಸಿದರೆ ಉದ್ಯಮ ಪರವಾನಗಿ ನವೀಕರಣ ಹಾಗೂ ಹೊಸದಾಗಿ ನೀಡಲಾಗುವುದು. ಸಿಬ್ಬಂದಿ ಕೊರತೆಯಿಂದ ಪರವಾನಗಿ ಪಡೆಯಲು ವಿಳಂಬವಾಗಬಹುದು. ಆದ್ದರಿಂದ ನಗರಸಭೆಯಿಂದಲ್ಲೇ ಪರವಾನಗಿ ಅಭಿಯಾನ ನಡೆಸಲಾಗುತ್ತಿದೆ ಎಂದರು.

ಎರಡು ದಿನಗಳ ಕಾಲ ನಗರದ ವರ್ತಕರ ಭವನದಲ್ಲಿ ಆಂದೋಲನ ನಡೆಯಲಿದ್ದು, ನಗರಸಭೆ ಅಧಿಕಾರಿಗಳು ಇಂಟರ್‌ನೆಟ್ ಹಾಗೂ ಇತರೆ ಸೌಲಭ್ಯಗಳೊಂದಿಗೆ ವ್ಯಾಪಾರಿಗಳ ಬಳಿಗೆ ಬಂದಿದ್ದಾರೆ. ನಗರದ ಎಲ್ಲಾ ವರ್ತಕರು ಅಗತ್ಯ ದಾಖಲಾತಿಗಳನ್ನು ನೀಡಿ, ಉದ್ಯಮಿ ಪರವಾನಗಿ ಪಡೆದುಕೊಳ್ಳಬೇಕು. ಅಲ್ಲದೆ, ನಗರಸಭೆ ಸ್ವಚ್ಛತೆಗೆ ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ನಗರಸಭೆ ಪೌರಾಯುಕ್ತ ರಾಮದಾಸ್ ಮಾತನಾಡಿ, ನಗರಸಭೆಯಿಂದ ವರ್ತಕರಿಗೆ ಉದ್ಯಮ ಪರವಾನಗಿ ನೀಡುವ ಅಭಿಯಾನ ಕೈಗೊಳ್ಳಲಾಗಿದೆ. ಬಹಳಷ್ಟು ವರ್ತಕರು ಉದ್ಯಮ ಪರವಾನಗಿ ಪಡೆದಿಲ್ಲ. ತಾವು ವ್ಯಾಪಾರ ಆರಂಭಿಸುವ ಮುನ್ನ ಪರವಾನಗಿ ಪಡೆಯಬೇಕು. ಆದರೆ, ವರ್ತಕರು ಬ್ಯಾಂಕ್‌ನಲ್ಲಿ ಸಾಲ ಪಡೆಯಲು ಮಾತ್ರ ಪರವಾನಗಿಗೆ ಅರ್ಜಿ ಸಲ್ಲಿಸುತ್ತಾರೆ. ಇದು ಸರಿಯಾದ ಕ್ರಮವಲ್ಲ. ಪ್ರತಿ ವರ್ಷ ಪರವಾನಗಿ ನವೀಕರಿಸಬೇಕು. ಅಂಗಡಿಗಳಲ್ಲಿ ಪರವಾನಗಿಯನ್ನು ಅಳವಡಿಸಬೇಕು. ಅಧಿಕಾರಿಗಳು ಪರಿಶೀಲನೆಗೆ ಬಂದಾಗ ಖಾತರಿ ಪಡಿಸಲು ಸಹಕಾರಿಯಾಗುತ್ತದೆ ಎಂದರು.

ಇದೇ ವೇಳೆ ಕೆಲ ವ್ಯಾಪಾರಿಗಳಿಗೆ ಉದ್ಯಮಿ ಪರವಾನಗಿ ನೀಡಲಾಯಿತು. ವರ್ತಕರ ಸಂಘದ ಅಧ್ಯಕ್ಷ ಶಂಕರ್, ವರ್ತಕರ ಸೌಹಾರ್ದ ಸಹಕಾರ ಸಂಘದ ಅಧ್ಯಕ್ಷ ಪದ್ಮ ಪ್ರಸಾದ್, ಕಾರ್ಯದರ್ಶಿ ಚಿದಾನಂದ ಗಣೇಶ, ಕಾರ್ಯದರ್ಶಿ ಸತೀಶ್, ನಗರಸಭೆ ಸದಸ್ಯ ಕಲೀಲ್, ಯೋಜನಾ ನಿರ್ದೇಶಕಿ ಪಿ.ಸುಧಾ, ಹಿರಿಯ ಆರೋಗ್ಯ ನಿರೀಕ್ಷಕರಾದ ಮಂಜು, ಸುಷ್ಮಾ, ವರ್ತಕರ ಸಂಘದ ಪದಾಧಿಕಾರಿಗಳು ಹಾಗೂ ಸದಸ್ಯರು ಇದ್ದರು.

ಮಲೆಯೂರು ಗ್ರಾಪಂ ಅಧ್ಯಕ್ಷೆಯಾಗಿ ಮಹಾಲಕ್ಷ್ಮಿ ಆಯ್ಕೆ



ಮಲೆಯೂರು ಗ್ರಾಮ ಪಂಚಾಯಿತಿ ಅಧ್ಯಕ್ಷೆ ಮಹಾಲಕ್ಷ್ಮಿ ಅವರನ್ನು ಸದಸ್ಯರು ಹಾಗೂ ಬಿಜೆಪಿ ಕಾರ್ಯಕರ್ತರು ಸನ್ಮಾನಿಸಿದರು.

ಚಾಮರಾಜನಗರ: ತಾಲೂಕಿನ ಮಲೆಯೂರು ಗ್ರಾಮ ಪಂಚಾಯಿತಿ ನೂತನ ಅಧ್ಯಕ್ಷೆಯಾಗಿ ಬಿಜೆಪಿ ಬೆಂಬಲಿತ ಮಹಾಲಕ್ಷ್ಮಿ ಅವಿರೋಧವಾಗಿ ಆಯ್ಕೆಯಾದರು.

ಮಹದೇವಮ್ಮ ಅವರ ರಾಜೀನಾಮೆಯಿಂದ ತೆರವಾದ ಅಧ್ಯಕ್ಷ ಸ್ಥಾನಕ್ಕೆ ಶುಕ್ರವಾರ ನಡೆದ ಚುನಾವಣೆಯಲ್ಲಿ ಮಹಾಲಕ್ಷ್ಮಿ ಒಬ್ಬರೇ ನಾಮಪತ್ರ ಸಲ್ಲಿಸಿದ್ದರು. ನಂತರ ಚುನಾವಣಾಧಿಕಾರಿ ಮಹದೇವಸ್ವಾಮಿ ಅವಿರೋಧ ಆಯ್ಕೆ ಘೋಷಿಸಿದರು.

ಸದಸ್ಯರಾದ ಎಂ.ಬಿ.ಮಹದೇವಪ್ಪ, ಪುಟ್ಟಸ್ವಾಮಿ, ನವೀನ್, ರಾಚಪ್ಪ, ನಾಗೇಂದ್ರ, ಗಿರೀಶ್, ಮಾದೇಶ್, ಚಿಕ್ಕತಾಯಮ್ಮ ಕೋಮಲ, ಪಂಕಜ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಶೃತಿ, ಬಿಜೆಪಿ ಮುಖಂಡರಾದ ಮಲೆಯೂರು ನಾಗೇಂದ್ರ, ಎಂ.ಬಿ.ಶಿವಮಲ್ಲಪ್ಪ, ಗೌಡಿಕೆ ರೇವಣ್ಣ, ಎಂ.ಎಲ್.ರೇವಣ್ಣ, ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಮೂಡ್ನಾಕೂಡು ಪ್ರಕಾಶ್, ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಮಲೆಯೂರು ಕಮಲಮ್ಮ, ಆಶಾ, ಮೂಡ್ನಾಕೂಡು ಶಿವಬಸಪ್ಪ, ಕುಮಾರ್ ಕೆಂಡ, ಚಿ.ಗೌ.ಪ್ರಕಾಶ್, ಎಂ.ಸಿ.ಮಲ್ಲಣ್ಣ, ಎಂ.ಸಿ.ಬಸವಶೆಟ್ಟಿ, ಉಮೇಶ್ ಇತರರು ಹಾಜರಿದ್ದರು.

ಮದ್ದೂರು ಸುತ್ತ ಚಿರತೆ ಕಾಟ; ಗ್ರಾಮಸ್ಥರಲ್ಲಿ ಆತಂಕ

ಯಳಂದೂರು, ಅ.18–ತಾಲೂಕಿನ ಮದ್ದೂರು ಗ್ರಾಮದ ಹೊರವಲಯದಲ್ಲಿ ಚಿರತೆ ಕಾಣಿಸಿಕೊಂಡಿದ್ದು, ಇದರಿಂದ ಗ್ರಾಮಸ್ಥರಿಗೆ ಆತಂಕ ಉಂಟಾಗಿದೆ.

ರಾಜಮ್ಮ ರಂಗಸ್ವಾಮಿ ಅವರ ಜಮೀನಿನ ಬಳಿ ಬೀದಿ ನಾಯಿಯನ್ನು ತಿಂದಿದ್ದು, ಈ ಸ್ಥಳದಲ್ಲಿ ನಾಯಿಯ ರಕ್ತದ ಕಲೆ, ಮಾಂಸದ ತುಂಡುಗಳು ಪತ್ತೆಯಾಗಿದೆ. ಹಿಂದೆಯೂ ಬೆಕ್ಕು ಹಾಗೂ ನಾಯಿಯನ್ನು ಹೊತ್ತೊಯ್ದು ಚಿರತೆ ಈ ಜಾಗದಲ್ಲೇ ತಿಂದು ಹಾಕಿತ್ತು. ಜೊತೆಗೆ ಈ ಭಾಗದ ಜಮೀನುಗಳ ಸುತ್ತ ಚಿರತೆ ಹೆಜ್ಜೆ ಗುರುತುಗಳು ಪತ್ತೆಯಾಗಿವೆ.

ಗದ್ದೆಗಳಿಗೆ ರೈತರು ತೆರಳಲು ಭಯಪಡುವ ಸ್ಥಿತಿ ನಿರ್ಮಾಣವಾಗಿದೆ. ಹಿಂದೆ ಗ್ರಾಮದ ಸುವರ್ಣಾವತಿ ನದಿ ತೀರ ಹಾಗೂ ಕಾಲುವೆ ಬಳಿ ಚಿರತೆ ಕಾಣಿಸಿಕೊಂಡಿತ್ತು. ಅರಣ್ಯ ಇಲಾಖೆ ಅಧಿಕಾರಿಗಳು ಬೋನು ಅಳವಡಿಸಿ ಚಿರತೆ ಸೆರೆ ಹಿಡಿಯುವಂತೆ ಗ್ರಾಮಸ್ಥರು ಆಗ್ರಹಿಸಿದ್ದಾರೆ.



ಮದ್ದೂರು ಗ್ರಾಮದ ಜಮೀನಿನ ಬಳಿ ನಾಯಿಯ ರಕ್ತದ ಕಲೆ ಪತ್ತೆಯಾಗಿರುವುದು.

ಅ.21ರಿಂದ ಜಾನುವಾರುಗಳಿಗೆ ಲಸಿಕೆ


ಚಾಮರಾಜನಗರ, ಅ.18–ಪಶುಪಾಲನೆ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ವತಿಯಿಂದ ಜಿಲ್ಲಾಡಳಿತ ಹಾಗೂ ಕರ್ನಾಟಕ ಹಾಲು ಒಕ್ಕೂಟ ಮಹಾಮಂಡಳಿ ಸಹಯೋಗದಲ್ಲಿ 6ನೇ ಸುತ್ತಿನ ಜಾನುವಾರುಗಳಿಗೆ ಕಾಲುಬಾಯಿ ಜ್ವರ ಲಸಿಕೆ ಕಾರ್ಯಕ್ರಮವನ್ನು ಜಿಲ್ಲೆಯಲ್ಲಿ ಅ.21ರಿಂದ ನ.20ರವರೆಗೆ ಹಮ್ಮಿಕೊಳ್ಳಲಾಗಿದೆ.

2,49,370 ದನಗಳು (ಸ್ಥಳೀಯ ಹಾಗೂ ಮಿಶ್ರತಳಿ), 9909 ಎಮ್ಮೆಗಳು ಸೇರಿದಂತೆ ಒಟ್ಟು 2,59,279 ಜಾನುವಾರುಗಳಿಗೆ ಸಾಮೂಹಿಕ ಹಾಗೂ ಉಚಿತವಾಗಿ ಲಸಿಕೆ ನೀಡಲಾಗುವುದು. ಜಿಲ್ಲೆಯಾದ್ಯಂತ ಒಟ್ಟು 27 ಲಸಿಕೆ ತಂಡಗಳನ್ನು ರಚಿಸಲಾಗಿದ್ದು, ಪ್ರತಿ ದಿನ ಗ್ರಾಮಗಳಲ್ಲಿ ಬೆಳಗ್ಗೆ 6 ರಿಂದ 10.30 ಹಾಗೂ ಸಂಜೆ 5 ರಿಂದ ರಾತ್ರಿ 7 ಗಂಟೆವರೆಗೆ ಲಸಿಕೆ ನೀಡಲಾಗುವುದು ಎಂದು ಪಶುಪಾಲನೆ ಇಲಾಖೆ ಉಪನಿರ್ದೇಶಕರು ತಿಳಿಸಿದ್ದಾರೆ.

ಕಾಡಾನೆ ದಾಳಿಯಿಂದ ಪಾರಾದ ಬೈಕ್ ಸವಾರ

ಗುಂಡ್ಲುಪೇಟೆ, ಅ.18– ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿಯಲ್ಲಿ ಬೈಕ್ ಸವಾರನೊಬ್ಬ ಕಾಡಾನೆಗಳ ದಾಳಿಯಿಂದ ಕೂದಲೆಳೆ ಅಂತರದಲ್ಲಿ ಪಾರಾಗಿರುವ ಘಟನೆ ಶುಕ್ರವಾರ ನಡೆದಿದೆ.

ಊಟಿ ಕಡೆಯಿಂದ ಮೈಸೂರು ಕಡೆಗೆ ಬೈಕ್‌ನಲ್ಲಿ ಬರುವಾಗ ಹೆದ್ದಾರಿಯಲ್ಲಿ ಕಾಡಾನೆ ಎದುರಾಗಿ, ಏಕಾಏಕಿ ದಾಳಿ ಮಾಡಲು ಮುಂದಾಗಿದೆ. ಇದರಿಂದ ವಿಚಲಿತಗೊಂಡ ಸವಾರ ರಸ್ತೆಯ ಮೇಲೆ ಬೈಕ್ ಬಿಟ್ಟು ಕಾಡಿನತ್ತ ಓಡುವಾಗ ಮತ್ತೆ ಆನೆಗಳ ಹಿಂಡಿನೊಳಗೆ ಸಿಲುಕಿದ್ದಾನೆ. ಅದೃಷ್ಟವಶಾತ್ ಆನೆಗಳು ದಾಳಿ ಮಾಡದೆ ಕಾಡಿನೊಳಗೆ ತೆರಳಿವೆ. ಈ ಎಲ್ಲ ದೃಶ್ಯಗಳನ್ನು ಸಮೀಪದಲ್ಲಿದ್ದ ವಾಹನ ಸವಾರರು ಸೆರೆ ಹಿಡಿದಿದ್ದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.



ಕಾಡಿನ ಮಧ್ಯೆ ರಸ್ತೆಗಳಲ್ಲಿ ಪ್ರಯಾಣ ಮಾಡುವಾಗ ದ್ವಿಚಕ್ರ ವಾಹನ ಸವಾರರು ಎಚ್ಚರಿಕೆಯಿಂದ ಇರಬೇಕು. ದಾರಿಯಲ್ಲಿ ಪ್ರಾಣಿಗಳನ್ನು ಕಂಡರೆ ದೂರ ನಿಲ್ಲಬೇಕು. ಆನೆ ಮರಿಗಳ ಜೊತೆ ರಸ್ತೆ ದಾಟುವಾಗ ದಾಳಿ ಮಾಡುವ ಸಂಭವ ಹೆಚ್ಚಾಗಿರುತ್ತದೆ ಎಂದು ಬಂಡೀಪುರ ಹುಲಿ ಸಂರಕ್ಷಿತ ಅರಣ್ಯದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ನವೀನ್ ಕುಮಾರ್ ತಿಳಿಸಿದರು.

ಗುಂಡ್ಲುಪೇಟೆ ಡಿಪೋನಲ್ಲಿ ವಾಲ್ಮೀಕಿ ಜಯಂತಿ ಆಚರಣೆ

ಗುಂಡ್ಲುಪೇಟೆ, ಅ.18–ಪಟ್ಟಣದ ಡಿಪೋನಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ ಆಚರಿಸಲಾಯಿತು.


ಕಾರ್ಯಕ್ರಮದಲ್ಲಿ ಮಾತನಾಡಿದ ಸಾರಿಗೆ ಇಲಾಖೆ ವಿಭಾಗೀಯ ನಿಯಂತ್ರಣಾಧಿಕಾರಿ ಆರ್.ಅಶೋಕ್ ಕುಮಾರ್, ವಾಲ್ಮೀಕಿ ರಚಿಸಿದ ರಾಮಾಯಣ ಮಹಾಕಾವ್ಯ ಇಂದಿಗೂ ಆದರ್ಶವಾಗಿದೆ. ರಾಮಾಯಣ ತನ್ನದೆ ವಿಭಿನ್ನತೆ ಹಾಗೂ ವೈಶಿಷ್ಟ್ಯಗಳನ್ನು ಹೊಂದಿದೆ. ಜೊತೆಗೆ ಇಂದಿಗೂ ಪ್ರಸ್ತುತವಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮುಖ್ಯ ಭಾಷಣಕಾರ ಉಪನ್ಯಾಸಕ ಪುಟ್ಟರಾಜು, ಸಮಿತಿ ಅಧ್ಯಕ್ಷ ಎಸ್.ವಿಠಲ, ಗೌರವಾಧ್ಯಕ್ಷರಾದ ಕೃಷ್ಣನಾಯಕ, ಮಹೇಶ್ ಹೊಸೂರು, ವಿಭಾಗೀಯ ಸಂಚಾರ ಅಧಿಕಾರಿ ಹೇಮಂತ್, ಸಹಾಯಕ ಸಂಚಾರ ಅಧಿಕ್ಷಕ ಹರೀಶ್ ಕುಮಾರ್, ಸಂಚಾರ ನಿರೀಕ್ಷಕ ಉಮ್ಮತ್ತೂರಯ್ಯ, ಸಿಬ್ಬಂದಿ ಪಾಂಡು, ಚಂದ್ರು, ವೆಂಕಟೇಶ, ರೇವಣ್ಣ, ನಿವೃತ್ತ ಚಾಲಕ ನಾಗನಾಯ್ಕ (ಕಾಕಾಸೂರ) ಇತರರು ಇದ್ದರು.



ಗುಂಡ್ಲುಪೇಟೆ ಡಿಪೋನಲ್ಲಿ ಆಯೋಜಿಸಿದ್ದ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಅಶೋಕ್ ಕುಮಾರ್ ಅವರನ್ನು ಸನ್ಮಾನಿಸಲಾಯಿತು.

ವಾಲ್ಮೀಕಿ ಪುತ್ಥಳಿ ನಿರ್ಮಾಣಕ್ಕೆ ಚಾಲನೆ ನೀಡದಿದ್ದರೆ ಹೋರಾಟ



ಸುದ್ದಿಗೋಷ್ಠಿಯಲ್ಲಿ ನಾಯಕರ ವಿದ್ಯಾಭಿವೃದ್ಧಿ ಸಂಘದ ಉಪಾಧ್ಯಕ್ಷ ಪು.ಶ್ರೀನಿವಾಸ ನಾಯಕ ಮಾತನಾಡಿದರು.

ಚಾಮರಾಜನಗರ, ಅ.18–ಡಿ.17ರೊಳಗೆ ಜಿಲ್ಲಾಡಳಿತ ಭವನ ಎದುರು ಶ್ರೀ ಮಹರ್ಷಿ ವಾಲ್ಮೀಕಿ ಪುತ್ಥಳಿ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸದಿದ್ದರೆ ಉಗ್ರ ಹೋರಾಟ ನಡೆಸಲಾಗುವುದು ಎಂದು ತಾಲೂಕು ನಾಯಕರ ವಿದ್ಯಾಭಿವೃದ್ಧಿ ಸಂಘದ ಉಪಾಧ್ಯಕ್ಷ ಪು.ಶ್ರೀನಿವಾಸನಾಯಕ ಎಚ್ಚರಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಿ.17ರೊಳಗೆ ಪುತ್ಥಳಿ ನಿರ್ಮಾಣಕ್ಕೆ ಚಾಲನೆ ನೀಡಬೇಕು. ಕಳೆದ 10 ವರ್ಷಗಳಿಂದಲೂ ಜಿಲ್ಲಾಡಳಿತ ಭವನ ಎದುರು ವಾಲ್ಮೀಕಿ ಪುತ್ಥಳಿ ನಿರ್ಮಾಣಕ್ಕೆ ಮನವಿ ಮಾಡಲಾಗುತ್ತಿದೆ. ಆದರೆ, ಸರ್ಕಾರ, ಜಿಲ್ಲಾಡಳಿತ ನಿರ್ಲಕ್ಷ್ಯ ವಹಿಸುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಜಿಲ್ಲಾಡಳಿತ ವತಿಯಿಂದ ನಡೆದ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಸಮಾಜದ ಕೆಲವರು ಭಾಗವಹಿಸಿ ಸಮಾಜವನ್ನು ಇಬ್ಭಾಗ ಮಾಡುವ ಕೆಲಸ ಮಾಡುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಸಮುದಾಯದಿಂದ ನಡೆಯುವ ಯಾವುದೇ ಕಾರ್ಯಕ್ರಮಗಳಿಗೂ ಅವರನ್ನು ಆಹ್ವಾನಿಸುವುದಿಲ್ಲ ಎಂದರು.

ಸುದ್ದಿಗೋಷ್ಠಿಯಲ್ಲಿ ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರು, ಚುಡಾ ಮಾಜಿ ಅಧ್ಯಕ್ಷ ಆರ್.ಸುಂದರ್, ಮುಖಂಡರಾದ ಜಯಸುಂದರ್, ಚೆಂಗುಮಣಿ, ವಿರಾಟ್ ಶಿವು ಹಾಜರಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಮೈಸೂರು ನಗರದಲ್ಲಿ ಕಡಿಮೆ ಬೆಲೆಯಲ್ಲಿ ಮೂಡಾ ಅನುಮೋದಿತವಾಗಿರುವ ಹಾಗೂ ಈ ಕೂಡಲೇ ನೋಂದಣಿಗೆ ಸಿದ್ಧವಿರುವ ನಿವೇಶನಗಳು ಮಾರಾಟಕ್ಕಿವೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ ಹಾಗೂ ನೋಂದಾಯಿಸಿಕೊಳ್ಳಿ.
ಶೋಭ ಡೆವಲಪರ್ಸ್ ಅಂಡ್ ಕನ್‌ಸ್ಟ್ರಕ್ಷನ್ಸ್
9980719398 / 7795863614
9844255441

ನಿವೇಶನ ಮಾರಾಟಕ್ಕಿದೆ
ಮೈಸೂರಿನ ಗದ್ದಿಗೆ ರಸ್ತೆ, ಮಾನಸ ತೇಜ್ ಲೇಔಟ್, (ಮರಟಿಕ್ಯಾತನಹಳ್ಳಿ ಗೇಟ್ ಪಕ್ಕ)ನಲ್ಲಿ 30x50 ಅಳತೆಯ ನಿವೇಶನ ಮಾರಾಟಕ್ಕಿದೆ. Sqft Rs. 4900, ನೇರ ನೆಗೋಶಿಯೇಬಲ್. ಸಂಪರ್ಕಿಸಿ:
9945352446

ಹೊಸ ಮನೆ ಮಾರಾಟಕ್ಕಿದೆ
30x40 ಮನೆ ಗ್ರೌಂಡ್ ಫ್ಲೋರ್, ಫಸ್ಟ್ ಫ್ಲೋರ್ ಮನೆ
ಬೆಲೆ: ರೂ. 1,45,00,000/–
ಸುಬ್ರಮಣ್ಯನಗರ, ನಮೂನೆ–3, ವಿಜಯನಗರ 3ನೇ ಹಂತದ ಹತ್ತಿರ, ಮೈಸೂರು.
Mob: 9900629888

SITE FOR SALE
40x60 W/F
Brahmins Layout 'A' Block.
Mob: 9620461052

ಮನೆ ಮಾರಾಟಕ್ಕಿದೆ
20x30 ಪೂರ್ವ ದಿಕ್ಕಿನ ಎರಡು ಅಂತಸ್ತಿನ ಮನೆ #10938, ವಿಜಯನಗರ 4ನೇ ಹಂತ, 2ನೇ ಫೇಸ್, ಸಂಕಲ್ಪ ಅಪಾರ್ಟ್‌ಮೆಂಟ್ ಹತ್ತಿರ.
8660726140

ಬೇಕಾಗಿದ್ದಾರೆ
ಮೈಸೂರಿನ ಹೆಬ್ಬಾಳನಲ್ಲಿರುವ ಪೆಟ್ರೋಲ್ ಬಂಕ್‌ನಲ್ಲಿ ಕೆಲಸಕ್ಕಾಗಿ ಪುರುಷರು / ಮಹಿಳೆಯರು ಬೇಕಾಗಿದ್ದಾರೆ. ಸಮಯ: ಬೆಳಗ್ಗೆ 8 ರಿಂದ ಸಂಜೆ 5. ಸಂಬಳ: 15,000.
8892258814

ಶ್ರೀ ಗೌರೀಶಂಕರ ಟ್ರಾವೆಲ್ಸ್
28–11–24 (7 ದಿನ): ದೆಹಲಿ, ಆಗ್ರಾ, ಮಥುರ, ಅಯೋಧ್ಯೆ, ಕಾಶಿ, ಗಯಾ, ಬುದ್ಧಗಯಾ.
12–12–24 (9 ದಿನ): ಉಜ್ಜಯಿನಿ, ಓಂಕಾರೇಶ್ವರ, ನಾಗೇಶ್ವರ, ಸೋಮನಾಥ್, ಮಾತೃಗಯಾ, ದ್ವಾರಕ, ಅಹಮದಾಬಾದ್, ವಡೋದರ, ಪೋರ್‌ಬಂದರ್, ಎಸ್‌ವಿಪಿ ಸ್ಟ್ಯಾಚ್ಯು, ಇತ್ಯಾದಿ.
(ವಿಮಾನ, ಬಸ್, ಊಟ, ರೂಂ)
Mob: 9620002114

ತಕ್ಷಣ ಬೇಕಾಗಿದ್ದಾರೆ
ಟಿ.ನರಸೀಪುರ ರಸ್ತೆ, ಆಲನಹಳ್ಳಿ, ಚಿಕ್ಕಳ್ಳಿ ಮೇಟಗಳ್ಳಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಆಫೀಸರ್, ಸೆಕ್ಯೂರಿಟಿ ಸೂಪರ್‌ವೈಸರ್ ಮತ್ತು ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ಸಂಪರ್ಕಿಸಿ:
8971367078 / 9141940749

ವಾಹನ ಬಾಡಿಗೆಗೆ ಬೇಕಾಗಿದೆ
ಮೈಸೂರಿನಿಂದ ಬೆಂಗಳೂರಿಗೆ ಮತ್ತು ಬೆಂಗಳೂರಿನಿಂದ ಮೈಸೂರಿಗೆ 11.10 Eicher ಕಂಟೈನರ್ ವಾಹನವು ಬಾಡಿಗೆಗೆ ಬೇಕಾಗಿದೆ.
Mob: 9449870898

WANTED
A reputed lodge in the heart of the city is looking for a receptionist role. Those having previous experience & freshers also can apply (having computer & hotel Industry knowledge Prefered
ರೂಂ ಬಾಯ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
9663747452
9663427888

SITES FOR SALE @ IT Park
30X40 @ Rs. 16 Lakhs
9880055095

ಹೊಸ ಮನೆ ಮಾರಾಟಕ್ಕಿದೆ
30x40 ಸೈಟ್ – ಉತ್ತರ, ಬಾಗಿಲು – ಪೂರ್ವ, ಗ್ರೌಂಡ್ ಮತ್ತು ಫಸ್ಟ್ ಫ್ಲೋರ್, ವಿದ್ಯಾಶಂಕರ ಲೇಔಟ್. ಶಕ್ತಿನಗರ, ಡಾ|| ರಾಜ್‌ಕುಮಾರ್ ರೋಡ್ ಹತ್ತಿರ, ಮೈಸೂರು
9880623476

ಬೋಳು ತಲೆಯ ಸಮಸ್ಯೆಯೇ?

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethara Road, kuvempunagar, Mysuru
MYSURU 9611028523 MANGALORE 9343142258

KSHATRIYA MOTORS WE ARE HIRING
JOB POSITIONS
Experienced team leaders & Sales Exexutives
Location : Mysore, Kodagu, Mandya, Chamarajanagara, Ramanagara, Required Minimum 1 year Experience send your cv to kshatriyaforcesales@gmail.com
0821-2404555, 9632263202

ಸಮಾಜ ಸೇವೆಗಾಗಿ
ಪ್ರಾಣ ವೈಲೆಟ್ ಹೀಲಿಂಗ್ ಅಕ್ಟೋಬರ್ 16 ರಿಂದ 27ರವರೆಗೆ ಎಲ್ಲಾ ನೋವುಗಳು ಮತ್ತು ಭಾವನಾತ್ಮಕ ಸಮಸ್ಯೆಗಳನ್ನು ಹೋಗಲಾಡಿಸಲು **ಉಚಿತ** ಕಾರ್ಯಾಗಾರವನ್ನು ನಡೆಸುತ್ತಿದೆ. ಸಂಪರ್ಕಕ್ಕೆ
9916935669 / 9686118117

CONSTRUCTIONS
New Residential, Commercial & Industrial Constructions
Repair / Alteration / Renovation Works &
ALL KINDS OF CIVIL WORKS
Itallian Kitchen, Aluminium Partition, Gypsum Partition & Fall Ceiling
8296698852

ಸೈಟು ಮಾರಾಟಕ್ಕಿದೆ
30x40 ಅಡಿ
N/F KBL
Silicon City
Bastipura
9945632875

ಬೇಕಾಗಿದ್ದಾರೆ
ಅನುಭವವುಳ್ಳ, ವಿದ್ಯಾವಂತ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ಹಿನಕಲ್ ಮೇಟಗಳ್ಳಿ ಬೋಗಾದಿ ಮತ್ತು ಜೆ.ಪಿ.ನಗರ, ವರ್ಣ ಹಾಗೂ ಮೈಸೂರಿನ ಸುತ್ತ ಮುತ್ತ
9035269781
9538886328

ತಿ.ನರಸೀಪುರ
ಫಂಕ್ಷನ್ ಹಾಲ್ ತಿಂಗಳಗೆ ಬಾಡಿಗೆ /ಭೋಗ್ಯಕ್ಕೆ ದೊರೆಯುತ್ತದೆ
ಸರ್ಕಾರಿ ಆಸ್ಪತ್ರೆ ಮುಖ್ಯ ರಸ್ತೆ.

9448390643

IMKTA - PRE-SCHOOL TEACHER TRAINING
Diploma Courses for SSLC, PU or any Degree Candidates.
Regular / Saturday / Correspondence Courses with practical training.
www: imkta.in
ALPHA INTERNATIONAL SCHOOL @ Srirampura
Call: 7829937469
ONLINE TRAINING AVAILABLE

ಹಾಸ್ಟೆಲ್‌ನಲ್ಲಿ ಕೆಲಸ ಮಾಡಲು
ಅಡುಗೆ ಭಟ್ಟರು ಬೇಕಾಗಿದ್ದಾರೆ
(ಸಸ್ಯಹಾರ & ಮಾಂಸಹಾರ)
ವೇತನ–20000/– ರಿಂದ 25000/–
ಪಾಂಡವಪುರ, ಮಂಡ್ಯ
ದೂ: 7338138083

ತಕ್ಷಣ ಬೇಕಾಗಿದ್ದಾರೆ
WANTED
Sri Sapthagiri Builders & Developers
Telecallers-3 Members (Experience)
9606977963/9591828444
8095856607

ಮನೆ ಬಾಡಿಗೆಗೆ ಇದೆ
ರಾಜಶೇಖರ ಆಸ್ಪತ್ರೆ ಹಿಂಭಾಗ, ಮನೆ ನಂ. 172, ರಾಗಿಮಿಲ್ 2ನೇ ಅಡ್ಡ ರಸ್ತೆ, ಮೊದಲನೇ ಮಹಡಿ, 3 ಬೆಡ್‌ರೂಂ ಹಾಲ್, ಅಡುಗೆ ಮನೆ, ಊಟದ ಹಾಲ್, ದೇವರ ಮನೆ, ಸ್ನಾನದ ಮನೆ, ಸೋಲಾರ್, ಗೀಸರ್, ನೀರಿನ ಸೌಕರ್ಯ, ಉತ್ತರ ಬಾಗಿಲು
7975023201
7815812948

NORTH EAST CONSTRUCTIONS "Turn your Dream into Address"
SITE FOR SALE
20X30, 30X40, @ Prime Location in Mysuru Starting from 20 Lakhs
Fully Furnished Newly Built 3 BHK House for Sale @ Prime Location in Mysuru
Real Estate, Construction, Architecture, Structural Design, Interiors, Renovation, Material Supply
Call: 98800 65122, 76193 99919

JOBNET
ಮೊಬೈಲ್‌ನಲ್ಲಿ ಕೆಲಸ
ಮನೆಯಲ್ಲೆ ಕುಳಿತು ಮೊಬೈಲ್ ಮೂಲಕ ಫಾರಂ ಫಿಲ್ಲಿಂಗ್ ಮಾಡಿ ಪ್ರತಿ ತಿಂಗಳಿಗೆ 10,000 ರಿಂದ 20,000 ಸಂಪಾದಿಸಿ
9731891409

FOR SALE
1. Properties at Kuvempu Nagar Starting @ 35L
2. 20x30 Site @Vijaya Nagar 4th stg
3. 14x100 Old Hs @ Ramavilas Rd
4. Old Hs @ Krishnamurthy Puram
5. Properties For Sale at Vidyaranyapuram
6. 20x30 Site Near SBM Lyt, Bogadhi
7. Ready to Move Apartments @ Hebbal
8. Commercial Properties @ Saraswathi Puram, Kuvempu Ngr & Hunsur Rd
PRAKRUTHI PROPERTIES
95386 90359, 90359 90359

ಇಂದೇ ಸಂಪರ್ಕಿಸಿ
ಮೈಸೂರಿನ ಪ್ರಸಿದ್ಧ ಕಂಪನಿ, ಆಫೀಸ್ ಮತ್ತು ಶೋರೂಂಗಳಿಗೆ 7th, 10th, PUC, ITI, Diploma, any Degree pass / fail ಆದವರಿಗೆ Cashier, Billing, Tele-calling, Receptionist, Data Entry, helper, quality ಮುಂತಾದ ಕೆಲಸಗಳಿಗೆ ಬೇಕಾಗಿದ್ದಾರೆ. ಸಂಬಳ 16000 – 42000 (ESI+PF+OT) ಸೇರಿ. ಸಂಪರ್ಕಿಸಿ:
9740468212, 6364103418

HOUSE SALE
Kuvempunagar
MUDA,2+1 BHK, Residential Old House, 35x55,N/F,Park Opposite, Price -2.10 Cr,
Near Vijaya Bank Circle, Contact Owner.Brokers Excuse
9035412545

ಮನೆ ಬಾಡಿಗೆಗೆ ಇದೆ
3 ಬೆಡ್ ರೂಂ ಇರುವ ಮನೆ ಬಾಡಿಗೆಗೆ ಇದೆ. ಉಡುಪಿ ಹೋಟೇಲ್ ಹಿಂಭಾಗ M Block, Near Kuvempunagar bus stand. Contact: Nagegowda
6362429022

ಬೇಕಾಗಿದ್ದಾರೆ
ಹೋಟೇಲ್ ಕೆಲಸಕ್ಕೆ ಸಪ್ಲಯರ್ ಹಾಗೂ ಕ್ಲೀನರ್ ಬೇಕಾಗಿದ್ದಾರೆ.
ಸ್ಥಳ: ಅಪೋಲೊ ಆಸ್ಪತ್ರೆ ಹತ್ತಿರ, ಸರಸ್ವತಿಪುರಂ, ಮೈಸೂರು.
9738405038/9740804888

ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ (ಮೋಡಿ ಮಾಂತ್ರಿಕರು)
MOB: 9880583804
ಇವರು ಕೊಳ್ಳೇಗಾಲದ ಚೌಡಿ, ಭೂತರಾಯ ಅಘೋಚರ ಶಕ್ತಿಯಿಂದ ಸ್ತ್ರೀ ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರು ದೋಷ, ಸಾಲ ಬಾಧೆ, ಯಾವುದೇ ಸಮಸ್ಯೆಗಳಿಗೆ ಮೋಡಿ ಮಾಂತ್ರಿಕ ಶಕ್ತಿಯಿಂದ ಚೌಡಿ ಮತ್ತು ಭೂತರಾಯನ ಪ್ರಯೋಗದಿಂದ ಎರಡೇ ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು–1

Sites for Sale @ IT Park
Call
Mob: 9108606262

ಪ್ರಸಿದ್ಧ ಕೇರಳ
ಶ್ರೀ ಭಗವತಿ ಜ್ಯೋತಿಷ್ಯರು
ಪಂ|| ಕುಮಾರ್ ಪ್ರಸಾದ್ ಗುರೂಜಿ
Mob: 9731839596
ಸ್ತ್ರೀ–ಪುರುಷಪ್ರೇಮ, ಸಂತಾನ, ದಾಂಪತ್ಯ, ಸಮಸ್ಯೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ, ಅಷ್ಟಮಂಗಳ, ಪ್ರಶ್ನೆಯಿಂದ, ನೇರ ಉತ್ತರ ಹಾಗೂ ಶಾಶ್ವತ ಪರಿಹಾರಕ್ಕಾಗಿ, ಚೋಟನೀಕರ, ಭಗವತಿ ತಾಯಿ, ರಾಜರಾಜೇಶ್ವರಿ, ಕುಟ್ಟಿಚೇತನ್, ಕೇರಳದ, ಮಾಂತ್ರಿಕ ಶಕ್ತಿಯಿಂದ, 2 ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ಮನೆ ವಿಳಾಸ: ಲಕ್ಷ್ಮಿ ನಿವಾಸ ನಂ.19/D2, ಬುದ್ಧ ಮಾರ್ಗ, ಹೋಟೆಲ್ ದೋಸೆ ಕಾರ್ನರ್ ಪಕ್ಕ, ಹೊಸ DC ಆಫೀಸ್ ಎದುರು, ಸಿದ್ಧಾರ್ಥ ಲೇಔಟ್, ಮೈಸೂರು

SOBHA DEVELOPERS
SITES FOR SALE
Sites available in "Sobha Retreat" Gated Community Layout @ Bogadi Road.
Mob: 9886048471

ಕೇರಳ ಕೊಳ್ಳೇಗಾಲದ ಶ್ರೀ ಭದ್ರಕಾಳಿ ಶ್ರೀ ಭಗವತಿ ಜ್ಯೋತಿಷ್ಯರು
ಪಂಡಿತ|| ಕುಮಾರ್ ಗುರುನಂದನ್
9972290933
ಇವರು ಕೇರಳದ ಮಡಯಿಕಾವು ಶ್ರೀರಾಜರಾಜೇಶ್ವರಿ ಭದ್ರಕಾಳಿ ಶ್ರೀ ಭಗವತಿ, ಶಕ್ತಿಯಿಂದ, ಅಕಪೂಜಾ, ಗುರುಸಿ ಕರೀಂಕಳಸ, ತವಪಲಿದೀಪ, ರಕ್ತಪುಷ್ಪಾಂಜಲಿ ಮತ್ತು ಕೊಳ್ಳೇಗಾಲದ ಚೌಡಿ, ಭೂತರಾಯ, ಅಗೋಚರ, ಕಾಟೇರಿ, ಪ್ರಯೋಗದಿಂದ, ಸ್ತ್ರೀ ಪುರುಷ, ಪ್ರೇಮ ದಾಂಪತ್ಯ ಸಮಸ್ಯೆ, ವ್ಯಾಪಾರ, ಸಂತಾನ, ಮದುವೆ, ಸಾಲ ಬಾಧೆ, ಶತ್ರುಸಂಹಾರ, ವಿದೇಶ ಪ್ರಯಾಣ, ರಾಜಕೀಯ, ತನ್ನವರೆ ತನಗೆ ಶತ್ರು, ಪ್ರೇತಬಾದೆ, ಇನ್ನೂ ಯಾವುದೇ ಗುಪ್ತನಿಗೂಢ ಸಮಸ್ಯೆಗಳಿಗೆ ಮೇಲಿನ ಪೂಜಾ ಶಕ್ತಿಯಿಂದ 2 ದಿನದಲ್ಲಿ ಪರಿಹಾರ ಶತಸಿದ್ಧ
ವಿಳಾಸ: ನಂ.19, ಶಿವಕಾಂಪ್ಲೆಕ್ಸ್, ಅಯಾರಿ ಹೋಟೆಲ್ ಪಕ್ಕ, ದೇವೇಗೌಡ ಸರ್ಕಲ್, ಮೈಸೂರು

REQUIRED
For a Reputed company in Hebbal Industrial Estate
Sales Executive - 2 nos
Qualification: B.Sc,B.Com, ITI, Diploma
Experience: 2 years, Salary - 20,000 /-
9481170783

ಬೇಕಾಗಿದೆ
ಮನೆ ಬಾಡಿಗೆಗೆ ಬೇಕಾಗಿದೆ Ground Floor, ರಾಮಾನುಜ ರೋಡ್, ಬಸವೇಶ್ವರ ರೋಡ್, ಚಾಮುಂಡಿಪುರಂ, ವಿದ್ಯಾರಣ್ಯಪುರಂ ಸುತ್ತಮುತ್ತ.
9353700917

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7975101020

V-GUARD

10 ವರ್ಷಗಳ ವ್ಯಾರಂಟಿ
ದಸರಾ ಹಬ್ಬದ ಶುಭಾಶಯಗಳು
Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

ಬೇಕಾಗಿದ್ದಾರೆ
ಮೈಸೂರಿನ MNC Co.ಗೆ 26 ರಿಂದ 65 ವರ್ಷದೊಳಗಿನ ಅಭ್ಯರ್ಥಿ ಬೇಕಾಗಿದ್ದಾರೆ. ಅರ್ಹತೆ ಪಿಯುಸಿ / ಯಾವುದೇ ಪದವೀಧರರು. ಸಂದರ್ಶನ: ಸೋಮವಾರ ಬೆಳಿಗ್ಗೆ 11.30ಕ್ಕೆ. ಸಂಪರ್ಕಿಸಿ: ಉಷಾ
Mob: 9480177425

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8861401315

WANTED
Lady Customer Care Executives. Age 27-42 years, any PUC / Degree / Diploma with computer knowledge must. Vanaja Rao Matrimony Saraswathipuram
9343175000

BALAJI PROPERTIES
MUDA Approved site for sale 30x40, 40x60 Location: Elvala, Mysore. Buy and sale contact
8105819378
6362219378

WANTED
FMCG Sales Executive
Minimum 2 years experience. Driver cum helper. Age: 30-40. Salary (Driver): 15,000. Place: Mysore. Contact:
Mob: 9482026633
Contact time: 12 pm to 3 pm

MUDA ALLOTTED
SITE FOR SALE
40x60 W/F
6000/- Per Sq.ft.
Vijayanagar 4th Stage, 2nd Phase.
Mob: 7338445412

ಬೇಕಾಗಿದ್ದಾರೆ
ಟೆಲಿಕಾಲಿಂಗ್ / Office Assistance ವಯಸ್ಸು: 25–35 ರ ಮೈಸೂರಿನ ಮಹಿಳೆಯರು ಬೇಕಾಗಿದ್ದಾರೆ.
Computer Knowledge is must.
Mob: 866026710
Landline: 0821-4532797

SITE FOR SALE
40x60 site sale
Judicial Layout (ನ್ಯಾಯಾಂಗ ಬಡಾವಣೆ)
Near Dattagalli.
Mob: 9880273834

SITE FOR SALE
30x50 East face, Suvarna Nagar, Bogadi Road.
Mob: 9880273834

WANTED
* Office Work (only for ladies)
* Required computer knowledge
* Qualification: PUC / above.
* Working place: Saraswathipuram.
For more details:
7975368452

A leading real estate company in Mysore required for following positions.
1) Marketing Executives: 02 posts (Min. qualification PUC, Male candidates)
2) Telecallers: 01 post (Min. qualification PUC, Female candidate)
Work location: JP Nagar, Mysore.
For more details:
8073033496, 9008285689

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ತಕ್ಷಣ ಬೇಕಾಗಿದ್ದಾರೆ
1) ಸಹಾಯಕ ನಿರ್ವಹಣೆ ಸಿಬ್ಬಂದಿ (ವಿದ್ಯುತ್, ನೀರು, ಎಸ್.ಟಿ.ಪಿ. ಮತ್ತು ಜನರೇಟರ್ ನಿರ್ವಹಣೆ ಮಾಡಲು) ; 2) ಚಾಲಕರು (ವಸತಿ ಶಾಲೆ ಮತ್ತು ಪದವಿ ಪೂರ್ವ ಕಾಲೇಜಿನ ಆವರಣಕ್ಕೆ) ; 3) ಅಕೌಂಟೆಂಟ್ (ಅಕೌಂಟ್ಸ್ ಮತ್ತು ಟ್ಯಾಲಿ ಅನುಭವ ಇರಬೇಕು). ಆಕಾಂಕ್ಷಿಗಳು ಕಛೇರಿ ಸಮಯದಲ್ಲಿ ಬೆಳಿಗ್ಗೆ 10 ರಿಂದ ಸಂಜೆ 4ರ ಒಳಗೆ ಖುದ್ದಾಗಿ ಭೇಟಿ ಮಾಡಬಹುದು. ವಿಳಾಸ: ಪರಿವರ್ತನ ಶಾಲೆ ಮತ್ತು ಪದವಿ ಪೂರ್ವ ಕಾಲೇಜು, ಚೆಕ್‌ಪೋಸ್ಟ್ ಹತ್ತಿರ, ಬೆಂಗಳೂರು–ಮೈಸೂರು ಹೆದ್ದಾರಿ, ಶ್ರೀರಂಗಪಟ್ಟಣ–571438, ಮಂಡ್ಯ ಜಿಲ್ಲೆ.
7899729937, 9900847777

ನಿರ್ಮಲ ಸರ್ವೀಸ್
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

SITE FOR SALE
N/E Corner 60x70
Suvarna Nagara, Bogadi Road.
8050821108

SITE FOR SALE
40x52 North Face Gejjagalli 3000 per sq.ft. Fixed price.
Brokers excuse
9342558588

2 HOUSE & 5 SHOPS FOR SALE
30x65 commercial property beside South India Paper Mill, Chikkaiahana Chatra, Mysore-Ooty Main Road.
Mob: 9036460909
Broker Excuse

SITE FOR SALE
30x40 MUDA allotted site for sale (owner) Vijayanagar 4th Stage, 3rd Phase. East facing.
Contact:
9916317225, 9482110954

ಜಮೀನು ಮಾರಾಟಕ್ಕಿದೆ
ಮೈಸೂರಿನ ಹೆಚ್.ಡಿ. ಕೋಟೆ ರಸ್ತೆಯ ಚಿತ್ರವನ ರೆಸಾರ್ಟ್‌ನಿಂದ 3 ಕಿ.ಮೀ ದೂರದಲ್ಲಿರುವ (KHB ಕೆಂಚಲಗೂಡು ಹಿಂಭಾಗ) 18 ಗುಂಟೆ ಜಮೀನು ಸುತ್ತಲೂ 7 ಅಡಿ ಕಾಂಪೌಂಡ್ ಮತ್ತು ಒಂದು ಮನೆಯನ್ನು ಹೊಂದಿರುವ ಆಸ್ತಿ. ಮೊ:
9449929350

SITE FOR SALE ನಿವೇಶನ ಮಾರಾಟಕ್ಕಿದೆ
40x60 Near H.D. Kote Ring Road Junction.
7760221455

ಉಚಿತವಾಗಿ ಗುಣಪಡಿಸುತ್ತೇವೆ
ಎಲ್ಲಾ ರೀತಿಯ ಆರೋಗ್ಯಕ್ಕೆ "ಔಷಧವಿಲ್ಲದ ಚಿಕಿತ್ಸೆ" ಮತ್ತು ಇತರ ಸಮಸ್ಯೆಗಳಿಗೆ ಪ್ರಾಣಶಕ್ತಿಯಿಂದ ಪರಿಹಾರವನ್ನು ಉಚಿತವಾಗಿ 27–10–2024ರ ಭಾನುವಾರ ಕಲಿಸಿಕೊಡುತ್ತೇವೆ. ಹೆಸರನ್ನು ನೋಂದಾಯಿಸಿಕೊಳ್ಳಿ.
9916935669, 9686118117

ಬೇಕಾಗಿದ್ದಾರೆ
ದಿನಸಿ ಅಂಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು / ಕಂಪ್ಯೂಟರ್ ಬಿಲ್ಲಿಂಗ್, ಕ್ಯಾಶಿಯರ್ಸ್ ಹಾಗೂ ಕ್ಲೀನಿಂಗ್ ಮತ್ತು ಪ್ಯಾಕಿಂಗ್‌ಗೆ ಬೇಕಾಗಿದ್ದಾರೆ.ಉತ್ತಮ ಸಂಬಳ ಕೊಡಲಾಗುವುದು. ಊಟದ ವ್ಯವಸ್ಥೆ ಇರುವುದು. ಇಚ್ಛೆಯುಳ್ಳವರು ಸಂಪರ್ಕಿಸಿ: ಬಾಲಕೃಷ್ಣ ಪ್ರಾವಿಷನ್ ಸ್ಟೋರ್ಸ್ ಕರ್ನಾಟಕ ಬ್ಯಾಂಕ್ ಹತ್ತಿರ, ನಜರ್‌ಬಾದ್, ಮೈಸೂರು

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವೇ ಬಿಡಿಸಿ ಉಳಿದ ಹಣವನ್ನು ತಕ್ಷಣ ಕೊಡುತ್ತೇವೆ. ಒಂದು ಗ್ರಾಂ ಚಿನ್ನಕ್ಕೆ ರೂ.7400 (24 CT)
9148436811

PRIME LAND FOR SALE
35+1 gunta land at Hampapura, 4 kms from Mysore Satellite bus stand with a water well and borewell suitable for resort / farm house / conversion. Property is fenced, legal clear documents. Contact:
9900322033, 9980006212

FOR SALE
1) ಅರ್ಪಣಾ ಬಡಾವಣೆ ಅಂಗಾಬುಧಿ 40x42
2) ವಿಶ್ವಪ್ರಜ್ಞ ಬಡಾವಣೆ ಹಂಚ್ಯಾ 40x57
3) ಸುವರ್ಣ ಬಡಾವಣೆ 50x80
4) ಭಾರತಿ ಮೊನಾರ್ಕ್ 30x40
9900154322

ಸೈಟ್ ಮಾರಾಟಕ್ಕೆ ಇದೆ
30x50, East Face, Yesh Developers ಪಕ್ಕ, ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ರಸ್ತೆ, ಗುಂಗ್ರಾಲ್ ಛತ್ರ Main Road.
ಬೆಲೆ: 2500 Sq.ft.
9448946352

RUNNING BEAUTY PARLOUR FOR SALE / RENT.
Shakthi Nagar, JSS Layout, in good location.
9945098017

FOR RENT
2000 sq. building, suitable for agency cum godown in Gayathripuram, main road or for Shamiyana godown, Mysore.
9742934598, 9480966998

WANTED
Mechanical / Civil Engineer (Male)Diploma / BE completed.
2 to 3 years experience.
For construction company.
7337801422

WANTED
Sales Representative
PUC and above.
2 wheeler DL.
Contact:
7204368222

ಬೇಕಾಗಿದ್ದಾರೆ
ಮೈಸೂರಿನ ಕಾಳಿದಾಸ ರಸ್ತೆ – ಜಯಲಕ್ಷ್ಮೀಪುರಂ ದಲ್ಲಿ ಇರುವ ಶುದ್ಧ ಸಸ್ಯಾಹಾರಿ ಹೋಟೆಲ್ ಗೆ ಅನುಭವ ಇರುವ ದೋಸಾ ಭಟ್ರು (Dosa Chef) , ಕೌಂಟರ್ (Parcel packing), ಸರ್ವೀಸ್ (Waiter - supplier), ಸೌತ್ ಕಿಚನ್ allrounder (South Assistant) ಕೆಲಸಕ್ಕೆ ಬೇಕಾಗಿದ್ದಾರೆ. ಉತ್ತಮ ಸಂಬಳ, ಊಟ ಮತ್ತು ವಸತಿ ಸೌಲಭ್ಯ ಇದೆ ಸಂಪರ್ಕಿಸಿ ;
9019916266

ವಧು–ವರಾನ್ವೇಷಣೆ
ಒಕ್ಕಲಿಗ / ಕುರುಬ / ಲಿಂಗಾಯತ / ನಾಯಕ SC & ಎಲ್ಲಾ ಜಾತಿಯ ವಧು–ವರರಿಗಾಗಿ ಕೂಡಲೇ ಸಂಪರ್ಕಿಸಿ.
(2nd Marriages also)
9343175000

Job opening for female (Day shift)
Paid internship work for Engineers & other Degree.
Data Entry Operator
Salary upto 15,000.
Location: Hebbal 1st Stage, Mysore.
7338224174

Water Proofing, Tiles Work, Plumbing, Electrical Work
ಮಾಡಲಾಗುತ್ತದೆ. ಹಾಗೂ ಹಳೇ ಮನೆಗಳನ್ನು Renovation ಮಾಡಿಕೊಡಲಾಗುತ್ತದೆ.
8660384527

ಸೈಟುಗಳು ಮಾರಾಟಕ್ಕಿದೆ
20x30, 30x40
ಶ್ರೀರಾಂಪುರ ರಿಂಗ್ ರೋಡ್, ಮೈಸೂರು
8050345574

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ನಂಜನಗೂಡು ಬಳಿ ಕತ್ತು ಕೊಯ್ದು ಗಾರೆ ಕೆಲಸಗಾರನ ಹತ್ಯೆ

ನಂಜನಗೂಡು/ಮಲ್ಕುಂಡಿ, ಅ.18– ಗಾರೆ ಕೆಲಸಗಾರನ ಕತ್ತು ಕೊಯ್ದು ಹತ್ಯೆ ಮಾಡಿರುವ ಘಟನೆ ಶುಕ್ರವಾರ ಬೆಳಗ್ಗೆ ತಾಲೂಕಿನ ಮಡುವಿನ ಹಳ್ಳಿ ಸಮೀಪ ನಡೆದಿದೆ.



ತಾಲೂಕಿನ ಮಲ್ಕುಂಡಿ ಗ್ರಾಮದ ನಿವಾಸಿ ಆಂಜನಯ್ಯನವರ ಪುತ್ರ ಸದಾಶಿವ(45) ಕೊಲೆಯಾದವರು. ಈತ ಗಾರೆ ಕೆಲಸ ಮಾಡಿ ಕೊಂಡು ಜೀವನ ಸಾಗಿಸುತ್ತಿದ್ದರು. ಈತನನ್ನು ಗುರು ವಾರ ರಾತ್ರಿ ಮಡುವಿನಹಳ್ಳಿ ಗ್ರಾಮದ ಸರ್ಕಾರಿ ಪ್ರೌಢಶಾಲೆ ಬಳಿಯ ನೀರು ಹರಿಯುವ ಹಳ್ಳದ ಸಮೀಪ ದುಷ್ಕರ್ಮಿಗಳು ಕತ್ತು ಕೊಯ್ದು ಚರಂಡಿಗೆ ಬಿಸಾಡಿ ಹೋಗಿದ್ದಾರೆ ಎನ್ನಲಾಗಿದೆ. ಶುಕ್ರವಾರ ಬೆಳಗ್ಗೆ ಸದಾಶಿವ ರಕ್ತದ ಮಡುವಿನಲ್ಲಿ ಚೀರಾಡುತ್ತಾ ಬಿದ್ದಿರುವುದನ್ನು ಸ್ಥಳೀಯರು ಗಮನಿಸಿ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಈ ವೇಳೆ ಸ್ಥಳಕ್ಕಾಗಮಿಸಿದ ಪೊಲೀಸರು ಸ್ಥಳೀಯರ ನೆರವಿನೊಂದಿಗೆ ಆಂಬುಲೆನ್ಸ್‌ನಲ್ಲಿ ಚಿಕಿತ್ಸೆಗಾಗಿ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯೆ ಆತ ಸಾವನ್ನಪ್ಪಿದ್ದಾನೆ. ಬಳಿಕ ಮೃತದೇಹವನ್ನು ನಂಜನಗೂಡು ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆಗೊಳಪಡಿಸಿ ವಾರಸುದಾರರಿಗೆ ಹಸ್ತಾಂತರಿಸಲಾಯಿತು. ಈ ಸಂಬಂಧ ಮೃತನ ಸಹೋದರ ರಂಗರಾಮು ಎಂಬುವರು ಹುಲ್ಲಹಳ್ಳಿ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಪೊಲೀಸರು ಮುಂದಿನ ತನಿಖೆ ಕೈಗೊಂಡಿದ್ದಾರೆ.

ವಾಮಾಚಾರದ ಶಂಕೆ

ಇನ್ನು ರಕ್ತದ ಮಡುವಿನಲ್ಲಿ ಬಿದ್ದಿದ್ದ ಸದಾಶಿವನ ದೇಹದ ಸಮೀಪದಲ್ಲೇ ನಿಂಬೆಹಣ್ಣು, ಎಲೆ ಅಡಿಕೆ ಹಾಗೂ 101 ರೂ. ಸೇರಿದಂತೆ ಹೊಸ ಬ್ಲೇಡ್‌ಗಳು ಪತ್ತೆಯಾಗಿದ್ದು, ಇದರಿಂದ ವಾಮಾಚಾರ ನಡೆಸಲಾಗಿದೆ ಎಂದು ಕೆಲ ಸ್ಥಳೀಯರು ದೂರಿದ್ದಾರೆ. ಗುರುವಾರ ಹುಣ್ಣಿಮೆಯಾಗಿದ್ದರಿಂದ ನರಬಲಿಯಾಗಿರಬಹುದು ಎಂದು ಕೆಲವರು ಅನುಮಾನ ವ್ಯಕ್ತಪಡಿಸಿದ್ದರೇ, ಮತ್ತೆ ಕೆಲವರು ದುಷ್ಕರ್ಮಿಗಳು ಕೊಲೆ ಮುಚ್ಚಿ ಹಾಕಲು ವಾಮಾಚಾರ ನಡೆಸಿರುವ ಹಾಗೇ ಮಾಡಿದ್ದಾರೆ ಎಂದು ಶಂಕೆ ವ್ಯಕ್ತಪಡಿಸಿದ್ದಾರೆ. ಸ್ಥಳಕ್ಕೆ ಭೇಟಿ ನೀಡಿದ್ದ ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ, ಅಡಿಷನಲ್ ಎಸ್ಪಿ ನಾಗರಾಜು ಮತ್ತು ನಂಜನಗೂಡಿನ ಡಿವೈಎಸ್ಪಿ ರಘು, ಸರ್ಕಲ್ ಇನ್ಸ್‌ಪೆಕ್ಟರ್ ಚಂದ್ರಶೇಖರ್, ಹುಲ್ಲಹಳ್ಳಿ ಠಾಣೆ ಎಸ್‌ಐ ಚೇತನ್ ಕುಮಾರ್ ಕೃತ್ಯದ ಬಗ್ಗೆ ಎಲ್ಲಾ ಆಯಾಮದಲ್ಲಿಯೂ ತನಿಖೆ ನಡೆಸುವುದಾಗಿ ಮೃತನ ಕುಟುಂಬದವರಿಗೆ ಭರವಸೆ ನೀಡಿದ್ದು, ಆರೋಪಿಗಳ ಪತ್ತೆಗೆ ಬಲೆ ಬೀಸಿದ್ದಾರೆ.

ಕಟ್ಟೆಮಳಲವಾಡಿ ತಂಬಾಕು ಮಾರುಕಟ್ಟೆಗೆ

ಹರಾಜು ಮಂಡಳಿ ನಿರ್ದೇಶಕರ ಭೇಟಿ

ರೈತರ ಸಮಸ್ಯೆ ಆಲಿಸಿ ಸಮಸ್ಯೆ ಬಗೆಹರಿಸುವ ಭರವಸೆ

ಹಿರೀಕ್ಯಾತನಹಳ್ಳಿ, ಅ.18– ತಂಬಾಕು ಹರಾಜು ಮಾರುಕಟ್ಟೆಗೆ ತಂಬಾಕು ಹರಾಜು ಮಂಡಳಿ ನಿರ್ದೇಶಕರು ಭೇಟಿ ನೀಡಿ ರೈತರ ಸಮಸ್ಯೆ ಆಲಿಸಿದರು.

ಕಟ್ಟೆಮಳಲವಾಡಿ ಗ್ರಾಮದ ಡಿ.ದೇವರಾಜು ಅರಸು ತಂಬಾಕು ಮಂಡಳಿ ಕಚೇರಿಗೆ ಭೇಟಿ ನೀಡಿದ ತಂಬಾಕು ಮಂಡಳಿಯ ಹರಾಜು ನಿರ್ದೇಶಕ ಶ್ರೀನಿ ವಾಸ್ ಡಿ.ಸಿ. ರೈತರ ಸಮಸ್ಯೆಗಳನ್ನು ಆಲಿಸಿದರು. ರೈತ ಸಂಘದ ಜಿಲ್ಲಾಧ್ಯಕ್ಷ ಹೊಸೂರು ಕುಮಾರ್ ನಿರ್ದೇಶಕರಿಗೆ ಮನವಿ ಮಾಡಿ ಪ್ರಾರಂಭದಲ್ಲಿ ಕಡಿಮೆ ಪ್ರಮಾಣದಲ್ಲಿ ಬೆಳೆದಿರುವ ಸೊಪ್ಪನ್ನು ಕಡಿಮೆ ಬೆಲೆಗೆ ಮಾರಾಟ ಮಾಡಿಕೊಳ್ಳುತ್ತಾರೆ. ಆದರೆ ಆಂಧ್ರದಲ್ಲಿ ದೊಡ್ಡ ಪ್ರಮಾಣದಲ್ಲಿ ತಂಬಾಕನ್ನು ಉತ್ಪಾದನೆ ಮಾಡುವ ದೊಡ್ಡ ರೈತರಿದ್ದಾರೆ. 2 ಸಾವಿರ ಕೆ.ಜಿ ತಂಬಾಕಿಗೆ ನಷ್ಟವಾದರೆ ಮತ್ತೆ ಇನ್ನೂ 2 ಸಾವಿರ ಕೆಜಿಯಲ್ಲಿ ಲಾಭ ಹೊಂದುತ್ತಾರೆ. ಆದ್ದರಿಂದ ಕರ್ನಾಟಕದಲ್ಲಿ ಮೊದಲು ಬಿಡುವ ರೈತನಿಗೆ ಕಡಿಮೆ ಆಗಬಾರದು. ಮಾರುಕಟ್ಟೆ ಸರಾಸರಿ ಬೆಲೆ 350 ರೂ. ಸಿಗಬೇಕು ಎಂದರು.

ಇತ್ತೀಚಿನ ಉತ್ಪಾದನಾ ವೆಚ್ಚ 250 ರಿಂದ 270 ರೂ.ಗಳವರೆಗೆ ಆಗಿದೆ. ಆದ್ದರಿಂದ ರೈತರನ್ನು ಉಳಿಸುವ ಕೆಲಸ ಮಾಡಬೇಕಿದೆ. ಜೊತೆಗೆ ತಂಬಾಕು ಹದಗೊಳಿಸುವ ಬ್ಯಾರೆನ್‌ಗಳು ಅಗ್ನಿ ಅನಾಹುತ ಹಾಗೂ ಮಳೆಗೆ ಆಹುತಿಯಾದರೆ ಮಂಡಳಿ ಕೇವಲ 50 ಸಾವಿರ ನೀಡುತ್ತಿದ್ದು, ಒಂದು ತಂಬಾಕು ಹದಗೊಳಿಸುವ ಬ್ಯಾರೆನ್ ನಿರ್ಮಾಣಕ್ಕೆ 5 ಲಕ್ಷ ಖರ್ಚಾಗುತ್ತಿದೆ. ಆದ್ದರಿಂದ ಮಂಡಳಿಯೂ ರೈತನಿಗೆ 5 ಲಕ್ಷ ಪರಿಹಾರ ನೀಡಬೇಕು ಎಂದು ಮಾಹಿತಿ ನೀಡಿದರು.



ಕಟ್ಟೆಮಳಲವಾಡಿ ತಂಬಾಕು ಹರಾಜು ಮಾರುಕಟ್ಟೆಗೆ ಭೇಟಿ ನೀಡಿದ ಹರಾಜು ನಿರ್ದೇಶಕ ಡಿ.ಸಿ.ಶ್ರೀನಿವಾಸ್ ಅವರನ್ನು ರೈತ ಮುಖಂಡರು ಸನ್ಮಾನಿಸಿದರು.

ರೈತ ಮುಖಂಡ ಅಶೋಕ್ ಮಾತನಾಡಿ, ಜೊತೆಗೆ ರೈತರಿಗೆ ಹರಾಜು ಮಾರುಕಟ್ಟೆಯಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸುವುದರ ಜೊತೆಗೆ ರೈತರು ಹಾಗೂ ಲೇಬರ್‌ಗಳ ಸಮಸ್ಯೆಯನ್ನು ಬಗೆಹರಿಸಬೇಕು. ಟ್ರೇಡರ್, ಬೈಯರ್, ಅಧಿಕಾರಿಗಳನ್ನು ಒಳಗೊಂಡಂತೆ ರೈತರ ಸಭೆ ಕರೆದು ಮಾರುಕಟ್ಟೆಯ ಹಾಗೂ ರೈತರ ಕುಂದು ಕೊರತೆಗಳ ಸಭೆ ನಡೆಸಬೇಕು ಎಂದು ಮನವಿ ಮಾಡಿದರು. ರೈತರ ಸಮಸ್ಯೆಗಳನ್ನು ಆಲಿಸಿ ಮಂಡಳಿ ನಿರ್ದೇಶಕ ಡಿ.ಸಿ.ಶ್ರೀನಿವಾಸ್ ಮಾತನಾಡಿ, ರೈತರ ಹಾಗೂ ಮಾರುಕಟ್ಟೆಯ ಸಮಸ್ಯೆಗಳ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದು ಎಲ್ಲಾ ಬೈಯರ್‌ಗಳ ಜೊತೆ ಮಾತನಾಡಿ ತಂಬಾಕು ಬೆಳೆಗಾರರು ಹಾಗೂ ಕಂಪನಿ ಅಧಿಕಾರಿಗಳನ್ನು ಒಳಗೊಂಡ ಸಭೆಯನ್ನು ಆಂಗೋಜಿಸಿ ರೈತರ ಹತ್ತಾರು ಸಮಸ್ಯೆಗಳಿಗೆ ನೇರವಾಗಿ ಪರಿಹಾರ ಸಿಗುವ ನಿಟ್ಟಿನಲ್ಲಿ ಸಭೆ ಮಾಡುವುದಾಗಿ ರೈತ ಮುಖಂಡರಿಗೆ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ತಂಬಾಕು ಮಂಡಳಿಯ ಹರಾಜು ಅಧೀಕ್ಷಕರಾದ ಸಿದ್ದರಾಜು, ಬ್ರಿಜ್ ಭೂಷಣ್, ಚಂದ್ರಶೇಖರ್, ರೈತ ಮುಖಂಡರಾದ ರಾಮೇಗೌಡ, ಉಂಡವಾಡಿ ಚಂದ್ರೇಗೌಡ, ಪ್ರಭಾಕರ್, ಶಿವಣ್ಣ, ಶ್ರೀಧರ, ರಾಜು ಹಾಗೂ ಮಹಾದೇವ ಸೇರಿದಂತೆ ಹಲವು ರೈತರು ಇದ್ದರು.

ಅಭಿವೃದ್ಧಿ ವಿಚಾರದಲ್ಲಿ ರಾಜಕೀಯ ಮಾಡಲ್ಲ

ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಜಿ.ಡಿ.ಹರೀಶ್‌ಗೌಡ ಗುದ್ದಲಿಪೂಜೆ

ಹುಣಸೂರು, ಅ.18– ನಗರದ ಸಮಗ್ರ ಅಭಿವೃದ್ಧಿ ನನಗೆ ಮುಖ್ಯವಾಗಿದ್ದು, ಅನುದಾನದಲ್ಲಿ ನಾನೆಂದೂ ರಾಜಕೀಯ ಮಾಡುವುದಿಲ್ಲ ಎಂದು ಶಾಸಕ ಜಿ.ಡಿ. ಹರೀಶ್‌ಗೌಡ ತಿಳಿಸಿದರು.

ನಗರದ ಹೊಸಮಾರುತಿ ಬಡಾವಣೆಯಲ್ಲಿ 2024–25ನೇ ಸಾಲಿನ 15ನೇ ಹಣಕಾಸು ಯೋಜನೆ ಹಾಗೂ ಎಸ್‌ಎಫ್‌ಸಿ ಯೋಜನೆಯಡಿ ಒಟ್ಟು 144.30 ಕೋಟಿ ರೂ.ಗಳ ವಿವಿಧ ಅಭಿವೃದ್ಧಿ ಕಾಮಗಾರಿ ಹಾಗೂ ನಗರ ವ್ಯಾಪ್ತಿಯಲ್ಲಿ ಕಾವೇರಿ ಕುಡಿಯುವ ನೀರು ಸರಬರಾಜು ಕಾಮಗಾರಿಗೆ ಗುದ್ದಲಿಪೂಜೆ ನೆರವೇರಿಸಿ ಮಾತನಾಡಿದ ಅವರು, ನನಗೆ ಪಕ್ಷ ಬೇಧವಿಲ್ಲ. 31 ನಗರಸಭೆ ಸದಸ್ಯರು ಒಂದೇ. ಅಭಿವೃದ್ಧಿ ವಿಚಾರದಲ್ಲಿ ರಾಜಕೀಯ ಮಾಡುವುದಿಲ್ಲ ಎಂದರು. ಯುಜಿಡಿ, ಡ್ರೈನೇಜ್, ರಸ್ತೆ ಸೇರಿದಂತೆ ನಗರದ ಸಮಗ್ರ ಅಭಿವೃದ್ಧಿಗೆ 78 ಕೋಟಿ ಹಣದ ಅವಶ್ಯಕತೆ ಇದೆ. ಆದರೆ ಇಂದಿನ ಸರ್ಕಾರದಲ್ಲಿ ಗ್ಯಾರಂಟಿ ಯೋಜನೆಗೆ ವರ್ಷಕ್ಕೆ 55 ಸಾವಿರ ಕೋಟಿ ಹಣದ ಅವಶ್ಯಕತೆ ಇರುವುದರಿಂದ ಈ ಸರ್ಕಾರದಲ್ಲಿ ಅಭಿವೃದ್ಧಿ ಕಾಣುತ್ತಿಲ್ಲ ಎಂದರು.



ಹುಣಸೂರಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಜಿ.ಡಿ. ಹರೀಶ್‌ಗೌಡ ಗುದ್ದಲಿಪೂಜೆ ನೇರವೇರಿಸಿದರು.

ಅನಧಿಕೃತ ಬಡಾವಣೆ ಅಧಿಕೃತ ಬಡಾವಣೆ ಆಗಬೇಕು ಎಂಬ ಮಹತ್ವಾಕಾಂಕ್ಷೆಯೊಂದಿಗೆ ಮೊದಲ ಬಾರಿಗೆ ನೀವು ಶಾಸಕನಾಗಿ ಆಯ್ಕೆ ಮಾಡಿದ ಕೂಡಲೇ ವಿಧಾನಸಭೆಯಲ್ಲಿ ಚರ್ಚಿಸಿದ್ದೇನೆ. ಇದು ನಮ್ಮೂರಿನ ಸಮಸ್ಯೆ ಮಾತ್ರವಲ್ಲ. ಇದು ರಾಜ್ಯದ ಸಮಸ್ಯೆಯಾಗಿದ್ದು, ಇದಕ್ಕೆ ಸುಮಾರು ನೂರು ಶಾಸಕರು ಬೆಂಬಲ ಸೂಚಿಸಿದ್ದಾರೆ. ಈಗಾಗಲೇ ಸರ್ಕಾರದ ಮಟ್ಟದಲ್ಲಿದ್ದು, ಸದ್ಯದಲ್ಲೆ ಸಮಸ್ಯೆ ಬಗೆಹರಿಯಲಿದೆ ಎಂದರು. 27ನೇ ವಾರ್ಡ್‌ನಲ್ಲಿ ಇನ್ನುಳಿದ ಮೂಲ ಸೌಕರ್ಯ ಮತ್ತು ಇಲ್ಲಿ ಹಿಂದುಳಿದ ವರ್ಗದವರು ಹೆಚ್ಚು ಇರುವ ಕಾರಣ ಸಮುದಾಯ ಭವನವನ್ನು ನಿರ್ಮಿಸಲು ಶ್ರಮಿಸುವೆ. ಹಾಗೆ ನಮ್ಮ ತಂದೆ ಜಿ.ಟಿ. ದೇವೇಗೌಡರು ನಿರ್ಮಿಸಿದ್ದ ಅಶ್ವತ್ಥಕಟ್ಟೆ ಶಿಥಿಲವಾಗಿದ್ದು, ನನ್ನ ಸ್ವಂತ ಖರ್ಚಿನಲ್ಲಿ ಕಾಯಕಲ್ಪ ಮಾಡಿಕೊಡುವೆ ಎಂದರು.

ನಗರಸಭೆ ಅಧ್ಯಕ್ಷ ಶರವಣ ಮಾತನಾಡಿ, ನಗರಾಭಿವೃದ್ಧಿ 15 ವರ್ಷಗಳಿಂದ ಆಗದ ಕೆಲಸವನ್ನು ಒಂದು ವರ್ಷದಲ್ಲಿ ಮಾಡಿಸುವ ಪ್ರಯತ್ನವಾಗಿದೆ. ಶಾಸಕ ಜಿ.ಡಿ.ಹರೀಶ್‌ಗೌಡ ಎಲ್ಲಾ ನಗರಸಭೆ ಸದಸ್ಯರಿಗೂ ಆದ್ಯತೆ ನೀಡಿ ಅಭಿವೃದ್ಧಿಗೆ ಮುಂದಾಗಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ನಗರಸಭೆ ಉಪಾಧ್ಯಕ್ಷೆ ಆಶಾ, ಸದಸ್ಯರಾದ ರಾಧ, ಸತೀಶ್ ಕುಮಾರ್, ಕೃಷ್ಣಗುಪ್ತ, ಗಣೇಶ್, ಕುಮಾರಸ್ವಾಮಿ, ಶ್ರೀನಾಥ್, ದೇವರಾಜ್, ಸಿರಾಜ್, ಮಲ್ಲಿಕ್‌ಪಾಷ, ರಾಣಿ ಪೆರಿಮಾಳ್, ನಗರ ಪೌರಾಯುಕ್ತೆ ಮಾನಸ, ಶರ್ಮಿಳಾ, ಸಮಂತ್, ಶಶಿಕಲಾ ಬಸವಲಿಂಗಯ್ಯ, ದಲಿತ ಮುಖಂಡ ಬಸವಲಿಂಗಯ್ಯ, ಬಸವರಾಜ್, ಅಮ್ಜದ್ ಅಬ್ದುಲ್ ಇದ್ದರು.

ಲಂಚ ಸ್ವೀಕರಿಸುವ ವೇಳೆ ಲೋಕಾಯುಕ್ತರ ಬಲೆಗೆ ಸಿಕ್ಕಿ ಬಿದ್ದ ಪಿಡಿಓ

ಚುಂಚನಕಟ್ಟೆ, ಅ.18– ಇ–ಸ್ವತ್ತು ಮಾಡಿಕೊಡಲು ಲಂಚ ಸ್ವೀಕರಿಸುತ್ತಿದ್ದ ವೇಳೆ ಪಿಡಿಓ ಲೋಕಾಯುಕ್ತ ಪೊಲೀಸರ ಬಲೆಗೆ ಸಿಕ್ಕಿಬಿದ್ದಿದ್ದಾರೆ.



ತಾಲೂಕಿನ ಕರ್ಪೂರವಳ್ಳಿ ಗ್ರಾಮ ಪಂಚಾಯತಿ ಪಿಡಿಓ ಕುಳ್ಳೇಗೌಡ ಎಂಬುವರೇ ಲೋಕಾಯುಕ್ತ ಬಲೆಗೆ ಬಿದ್ದವರು. ಇವರು ಭಾಸ್ಕರ್ ಹಾಗೂ ಗೌರಮ್ಮ ಎಂಬುವರಿಗೆ ಇ–ಸ್ವತ್ತು ಮಾಡಿಕೊಡಲು ತಲಾ 4 ಸಾವಿರ ರೂ.ಗಳಂತೆ ಇಬ್ಬರಿಂದ ಒಟ್ಟು 8 ಸಾವಿರ ರೂ.ಗಳನ್ನು ಲಂಚ ಸ್ವೀಕರಿಸುವ ವೇಳೆ ಲೋಕಾಯುಕ್ತರ ಬಲೆಗೆ ಬಿದ್ದಿದ್ದಾರೆ. ಇವರನ್ನು ನ್ಯಾಯಾಲಯಕ್ಕೆ ಹಾಜರು ಪಡಿಸುವುದಾಗಿ ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ. ಲೋಕಾಯುಕ್ತ ಡಿವೈಎಸ್‌ಪಿ ಮಾಲತೇಶ್, ಸಬ್‌ಇನ್ಸ್‌ಪೆಕ್ಟರ್‌ಗಳಾದ ಅಶೋಕ್ ಕುಮಾರ್, ರವಿಕುಮಾರ್, ರೂಪಶ್ರೀ, ಸಿಬ್ಬಂದಿಗಳಾದ ಲೋಕರಾಜ್ ಅರಸ್, ಮೋಹನ್ ಕುಮಾರ್, ದಿನೇಶ್, ಗೋಪಿ, ಶೇಖರ್, ಪರಶುರಾಮ್, ನೇತ್ರಾವತಿ, ತ್ರಿವೇಣಿ ಅವರುಗಳು ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ವಾಲ್ಮೀಕಿಯನ್ನು ಒಂದು ಸಮುದಾಯಕ್ಕೆ ಸೀಮಿತಗೊಳಿಸದೆ

ರಾಷ್ಟ್ರೀಯ ನಾಯಕರನ್ನಾಗಿ ನೋಡಬೇಕು



ವರುಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ತಾಯೂರು ಗ್ರಾಮದಲ್ಲಿ ಮಹರ್ಷಿ ವಾಲ್ಮೀಕಿ ನಾಯಕ ಜನಾಂಗದ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಶ್ರೀ ಮಹರ್ಷಿ ವಾಲ್ಮೀಕಿ ಜಯಂತೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ತಿ.ನರಸೀಪುರ, ಅ.18– ಬುಡಕಟ್ಟು ಸಮುದಾಯದಲ್ಲಿ ಜನಿಸಿದ ಶ್ರೀ ಮಹರ್ಷಿ ವಾಲ್ಮೀಕಿಯವರು ರಾಮಾಯಣ ಮಹಾಕಾವ್ಯ ರಚಿಸುವ ಮೂಲಕ ಜಗತ್ತಿಗೆ ವಿಶೇಷ ಕೊಡುಗೆ ನೀಡಿದ್ದು, ಇಂತಹ ಮಹನೀಯರನ್ನು ಒಂದು ಸಮುದಾಯಕ್ಕೆ ಸೀಮಿತಗೊಳಿಸದೇ ರಾಷ್ಟ್ರೀಯ ನಾಯಕರನ್ನಾಗಿ ನೋಡಬೇಕು ಎಂದು ಕರ್ನಾಟಕ ರಾಜ್ಯ ವಾಲ್ಮೀಕಿ ನಾಯಕ ಸಂಘಗಳ ಒಕ್ಕೂಟದ ಮೈಸೂರು ಜಿಲ್ಲಾಧ್ಯಕ್ಷ ತಾಯೂರು ಪ್ರಕಾಶ್ ಹೇಳಿದರು.

ವರುಣ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ತಾಯೂರು ಗ್ರಾಮದಲ್ಲಿ ಮಹರ್ಷಿ ವಾಲ್ಮೀಕಿ ನಾಯಕ ಜನಾಂಗದ ಕ್ಷೇಮಾಭಿವೃದ್ಧಿ ಸಂಘವು ಗ್ರಾಮದ ವಾಲ್ಮೀಕಿ ವೃತ್ತದಲ್ಲಿ ಗುರುವಾರ ಹಮ್ಮಿಕೊಂಡಿದ್ದ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ವಾಲ್ಮೀಕಿ ಮಹರ್ಷಿಯವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದರು. ಬುದ್ಧ, ಬಸವ, ಅಂಬೇಡ್ಕರ್ ಸೇರಿದಂತೆ ಮಹರ್ಷಿ ವಾಲ್ಮೀಕಿಯವರು ಯಾವುದೇ ಒಂದು ಜಾತಿಗೆ ಸೀಮಿತರಾದವರಲ್ಲ. ಸರ್ವ ಧರ್ಮವನ್ನು ಮೀರಿ ಬೆಳೆದ ಮಹಾನ್ ನಾಯಕರು ಇವರಾಗಿದ್ದಾರೆ. ಆದರೆ ಪ್ರಸಕ್ತ ಸನ್ನಿವೇಶದಲ್ಲಿ ಒಂದೊಂದು ಜಾತಿಗೆ ಒಬ್ಬೊಬ್ಬ ಮಹಾನ್ ನಾಯಕರನ್ನು ಸೀಮಿತಗೊಳಿಸುತ್ತಿರುವುದು ಬೇಸರದ ಸಂಗತಿಯಾಗಿದೆ ಎಂದರು.

ಮಹರ್ಷಿ ವಾಲ್ಮೀಕಿಯವರು ಕವಿ, ಲೇಖಕರು ಮಾತ್ರವಲ್ಲ, ಅವರು ಅರಿವಿನ ಬೆಳಕಾಗಿದ್ದಾರೆ. ಅವರ ಬೆಳಕು ಜಗತ್ತಿನಾದ್ಯಂತ ಹಬ್ಬಿದೆ. ರಾಮಾಯಣದಲ್ಲಿ ಬರುವ ಪಾತ್ರಗಳನ್ನು ಜನರು ಪೂಜಿಸುತ್ತಾರೆ, ಆದರೆ ಜಗತ್ತಿಗೆ ರಾಮಾಯಣ ನೀಡಿದ ಧೀಮಂತ ವ್ಯಕ್ತಿಯನ್ನು ಕಡೆಗಣಿಸಲಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದ ಅವರು ಇಂದು ಸರ್ಕಾರ ವಾಲ್ಮೀಕಿ ಜಯಂತಿಯನ್ನು ಯಾವ ನೈತಿಕತೆಯಡಿ ಆಚರಣೆ ಮಾಡುತ್ತಿದೆ. ವಾಲ್ಮೀಕಿ ಸಮುದಾಯಕ್ಕೆ ಸೇರಬೇಕಾದ 187 ಕೋಟಿ ರೂ.ಗಳನ್ನು ಅನ್ಯ ಉದ್ದೇಶಗಳಿಗೆ ಬಳಕೆ ಮಾಡಿಕೊಳ್ಳುವ ಮೂಲಕ ಹಿಂದುಳಿದ ನಮ್ಮ ಸಮುದಾಯಕ್ಕೆ ದ್ರೋಹ ಎಸಗಿದೆ. ಸಮುದಾಯಕ್ಕೆ ಮೀಸಲಿಡಬೇಕಾದ ಹಣವನ್ನು ಸರ್ಕಾರ ದುರ್ಬಳಕೆ ಮಾಡಿಕೊಂಡಿದೆ. ಹಾಗಾಗಿ ಸರ್ಕಾರ ವಾಲ್ಮೀಕಿ ಜಯಂತಿ ಆಚರಣೆ ಮಾಡುವ ನೈತಿಕ ಹಕ್ಕನ್ನು ಕಳೆದುಕೊಂಡಿದೆ ಎಂದು ಕಿಡಿಕಾರಿದರು.

ಕಾರ್ಯಕ್ರಮದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ನಾಯಕ ಜನಾಂಗದ ಕ್ಷೇಮಾಭಿವೃದ್ಧಿ ಸಂಘದ ತಾಯೂರು ರಮೇಶ್, ಚಿನ್ನಸ್ವಾಮಿ, ನಾಗೇಶ್, ಮಂಜು, ಚಿಕ್ಕಬಸಪ್ಪ, ರೇವಣ್ಣ, ವೆಂಕಟಪ್ಪ, ಅಮಾಸ್ಯ, ಮಹೇಶ್ ರಮೇಶ್, ಸಿದ್ದು, ಮಾಧು ಉಮೇಶ್, ಪ್ರಕಾಶ್, ಲಕ್ಷ್ಮಣ್ ಪುಟ್ಟಸ್ವಾಮಿನಾಯಕ ಸೇರಿದಂತೆ ಸಂಘದ ಪದಾಧಿಕಾರಿಗಳು ಸದಸ್ಯರು ಗ್ರಾಮದ ಯಜಮಾನರು ಮತ್ತು ಗ್ರಾಮಸ್ಥರು ಹಾಜರಿದ್ದರು.

ಸರೋಜಮ್ಮ ನಿಧನ

ಕೆ.ಆರ್.ನಗರ, ಅ.18– ಸಾಲಿಗ್ರಾಮ ತಾಲೂಕಿನ ಜವರೇಗೌಡನಕೊಪ್ಪಲು ಗ್ರಾಮದ ಸರೋಜಮ್ಮ (55) ಗುರುವಾರ ರಾತ್ರಿ ನಿಧನರಾದರು. ಮೃತರು ಪತಿ, ಪುತ್ರ ವಕೀಲ ರಾಘವೇಂದ್ರ ಮತ್ತು ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಮಧ್ಯಾಹ್ನ ಸ್ವಗ್ರಾಮದ ಮೃತರ ಜಮೀನಿನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಹುಣಸೂರು ತಾಲೂಕು ನಾಯಕ ಸಮಾಜವನ್ನು ಒಡೆಯಲು ಹುನ್ನಾರ

ಶಾಸಕ ಅನಿಲ್ ಚಿಕ್ಕಮಾದು ವಿರುದ್ಧ ಆಕ್ರೋಶ

ಹುಣಸೂರು, ಅ.18– ವಾಲ್ಮೀಕಿ ಜಯಂತಿ ಆಚರಣೆ ವಿಚಾರದಲ್ಲಿ ಹೆಚ್.ಡಿ.ಕೋಟೆ ಶಾಸಕ ಅನಿಲ್ ಚಿಕ್ಕಮಾದು ಹುಣಸೂರು ತಾಲೂಕು ನಾಯಕ ಸಮಾಜವನ್ನು ಒಡೆಯುವ ಪ್ರಯತ್ನ ಮಾಡುತ್ತಿದ್ದಾರೆ ಎಂದು ತಾಲೂಕು ನಾಯಕ ಸಮಾಜದ ಉಪಾಧ್ಯಕ್ಷ ಕಾಳಿದಾಸನಾಯಕ ಆರೋಪಿಸಿದರು.

ನಗರದ ಪತ್ರಿಕಾ ಕಚೇರಿಯಲ್ಲಿ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ತಾಲೂಕಿನ ನಾಯಕ ಸಮಾಜ ಈಗಾಗಲೇ ನಾಲ್ಕು ಬಾರಿ ಸಭೆ ನಡೆಸಿ ವಾಲ್ಮೀಕಿ ಜಯಂತಿಯನ್ನು ಅಧಿಕೃತವಾಗಿ ಆಚರಿಸಲು ನಿರ್ಧರಿಸಿತ್ತು. ಆದರೆ ಹೆಚ್.ಡಿ. ಕೋಟೆ ಶಾಸಕ ಅನಿಲ್ ಚಿಕ್ಕಮಾದು ಇತ್ತೀಚೆಗೆ ಸಮಾಜದ ಕೆಲವೇ ಕೆಲವರ ಪಿತೂರಿಯಿಂದ ಸಭೆ ಕರೆದು ವಾಲ್ಮೀಕಿ ಜಯಂತಿಯನ್ನು ಅ.28ಕ್ಕೆ ಆಚರಿಸೋಣ ಎಂದು ನಿರ್ಧರಿಸಿರುವುದಕ್ಕೆ ನಮ್ಮ ವಿರೋಧವಿದೆ ಎಂದರು.

4 ಬಾರಿ ಸಭೆ ಕರೆದು ಇಡೀ ಸಮಾಜ ಒಕ್ಕೊರಲಿನಿಂದ ಮಾಡಿರುವ ತೀರ್ಮಾನವನ್ನು ದಿಕ್ಕು ತಪ್ಪಿಸಿ ಸಮಾಜವನ್ನು ದಾರಿ ತಪ್ಪಿಸುವ ಕೆಲಸ ಮಾಡಿದ್ದಾರೆ. ಇದು ಸಮಾಜ ಒಪ್ಪುವ ಕೆಲಸವಲ್ಲ. ಕಳೆದ ನಾಲ್ಕೈದು ವರ್ಷಗಳಿಂದ ತಾಲೂಕಿನಲ್ಲಿ ನಾಯಕ ಸಮಾಜದ ಕಷ್ಟ–ಸುಖಗಳನ್ನು ಅರಿಯದ ಯಾವುದೇ ಕಾರ್ಯಕ್ರಮಕ್ಕೆ ಬಂದು ಭಾಗವಹಿಸದ ಇವರು ಕೋಟೆಯನ್ನು ನೋಡಿಕೊಳ್ಳಲಿ. ಆದರೆ ಒಮ್ಮತದಿಂದಿರುವ ಹುಣಸೂರು ನಾಯಕ ಸಮಾಜದಲ್ಲಿ ಒಡಕು ಉಂಟು ಮಾಡುವ ಕೆಲಸ ಮಾತ್ರ ಮಾಡಬಾರದು ಎಂದರು. ಪತ್ರಿಕಾಗೋಷ್ಠಿಯಲ್ಲಿ ಆರೋಗ್ಯ ರಕ್ಷ ಸಮಿತಿ ಸದಸ್ಯ ಪ್ರಭಾಕರ, ಮಾಜಿ ಪುರಸಭಾ ಸದಸ್ಯ ಕೆ.ದೇವರಾಜು, ತಗಡನಾಯ್ಕ, ಬಸವರಾಜ್.ಕೆ ಇದ್ದರು.

ಹೆಚ್.ಡಿ.ಕೋಟೆಯಲ್ಲಿ ಕೆಸರು ಗದ್ದೆಯಾಗಿರುವ ರಸ್ತೆ

ಗುಂಡಿ ಬಿದ್ದಿರುವ ಕೊಳಚೆ ನೀರು ತುಂಬಿರುವ ರಸ್ತೆಯಲ್ಲಿ ಸಂಚಾರಕ್ಕೆ ಪರದಾಟ



ಹೆಚ್.ಡಿ.ಕೋಟೆ, ಅ.18– ಕಳೆದ ಒಂದು ವಾರದಿಂದ ಸುರಿಯುತ್ತಿರುವ ಭಾರೀ ಮಳೆಯಿಂದ ಹೆಚ್. ಡಿ. ಕೋಟೆ ಪಟ್ಟಣದ ರಂಗ ಅಯ್ಯಂಗಾರ್ ಬಡಾವಣೆ, ಮುಖ್ಯ ರಸ್ತೆ, ಕೆಸರುಗದ್ದೆಯಂತಾಗಿದ್ದು, ಬಾರೀ ಗಾತ್ರದ ಗುಂಡಿಗಳು ಬಿದ್ದು ಸಂಚಾರ ಅಸ್ತವ್ಯಸ್ತಗೊಂಡು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ.

ಪಟ್ಟಣದಲ್ಲಿ, ವ್ಯಾಪಾರ–ವಹಿವಾಟು ಅತಿ ಹೆಚ್ಚಾಗಿ ನಡೆಯುವ ಈ ಬಡಾವಣೆಯಲ್ಲಿ ಪ್ರತಿದಿನ ಸಾವಿರಾರು ಸಂಖ್ಯೆಯಲ್ಲಿ ಜನರು ಓಡಾಡುತ್ತಾರೆ. ಪ್ರಮುಖವಾಗಿ ಇದು ಧರ್ಮ ಸ್ಥಳದ ಮುಖ್ಯ ಕಚೇರಿ, ಶಿಶು ಅಭಿವೃದ್ಧಿ ಇಲಾಖೆ ಕಚೇರಿ, ಎಂಡಿಸಿಸಿ ಬ್ಯಾಂಕ್ ಹಾಗೂ ಗುರುಭವನಕ್ಕೆ ಹೋಗುವ ಪ್ರಮುಖ ರಸ್ತೆಯಲ್ಲಿ ದೊಡ್ಡ ದೊಡ್ಡ ಗುಂಡಿಗಳು ಬಿದ್ದಿದ್ದು, ವಾಹನ ಸಂಚಾರರು ಪರದಾಡುತ್ತಿದ್ದಾರೆ.

ಈ ರಸ್ತೆಯಲ್ಲಿ ಕೆಸರು ನೀರು ನಿಂತಿದೆ. ಇದು ದುರ್ನಾತ ಬೀರುತ್ತಿದೆ. ಇದರಿಂದ ಸಾಂಕ್ರಾಮಿಕ ರೋಗ ಹರಡುವ ಸಾಧ್ಯತೆಗಳು ಇವೆ. ಈ ಹಿಂದೆ ಅಧಿಕಾರಿಗಳು, ಪುರಸಭಾ ಸದಸ್ಯರು ಡಾಂಬರ್ ರಸ್ತೆ ಮಾಡುವ ಭರವಸೆ ನೀಡಿದ್ದರು. ಆದರೂ ರಸ್ತೆ ಮಾಡುವ ವಿಚಾರವಾಗಿ ವಿಳಂಬವಾಗುತ್ತಿದೆ. ಈ ರಸ್ತೆಯನ್ನು ಆದಷ್ಟು ಬೇಗನೆ ದುರಸ್ಥಿ ಮಾಡಿಸಿಕೊಡುವಂತೆ ವಕೀಲ ಡಿ.ಎಸ್. ನಿಂಗರಾಜು ತಿಳಿಸಿದ್ದಾರೆ.

ಇದೇ ಸಂದರ್ಭದಲ್ಲಿ ಬಾಬು, ಛಾಯಾಗ್ರಾಹಕ ವೆಂಕಿ, ನಲ್ಲಿ ಪ್ರಕಾಶ, ತಾರಚಂದ್, ಕುನ್ನರಾಮ್, ಅಭಿಬ್, ನೇಮಿಚಂದ್, ಶ್ರೀನಿವಾಸ್, ಮುಂತಾದವರು ಹಾಜರಿದ್ದರು.

ಮೀನುಗಾರರ ಹಿತ ಕಾಯಲು ಪರಿಣಾಮಕಾರಿ ಯೋಜನೆ

ಒಳನಾಡು ಮೀನುಗಾರರ ಸಂಘದ ಮಾಜಿ ಅಧ್ಯಕ್ಷ ಸಿದ್ದಲಿಂಗರಾಜು ಮನವಿ

ಮೈಸೂರು, ಅ.18(ಎಂಟಿವೈ)– ಬಂಡ ವಾಳಶಾಹಿಗಳ ಆರ್ಭಟಕ್ಕೆ ಸಿಲುಕಿ ನಲುಗುತ್ತಿರುವ ಮೀನುಗಾರರ ಹಿತ ಕಾಯಲು ಸರ್ಕಾರಗಳು ಪರಿಣಾಮಕಾರಿ ಯೋಜನೆ ರೂಪಿಸಬೇಕು ಎಂದು ಒಳನಾಡು ಮೀನುಗಾರರ ಸಂಘದ ಮಾಜಿ ಅಧ್ಯಕ್ಷ ಸಿದ್ದಲಿಂಗರಾಜು ಆಗ್ರಹಿಸಿದ್ದಾರೆ.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ಆಯೋಜಿಸಿದ್ದ ಮೀನುಗಾರರ ವಿಭಾಗದ ನೂತನ ಪದಾಧಿಕಾರಿಗಳ ಪದಗ್ರಹಣ ಹಾಗೂ ಸಂವಾದ ಕಾರ್ಯಕ್ರಮದಲ್ಲಿ ಮುಖ್ಯ ಭಾಷಣ ಮಾಡಿದ ಅವರು, ಮೀನುಗಾರರು ಹಲವು ವರ್ಷಗಳಿಂದ ವಿವಿಧ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಆದರೂ ಇದುವರೆಗೂ ಸರ್ಕಾರಗಳು ಮೀನುಗಾರರ ಸಮಸ್ಯೆಗಳನ್ನು ಬಗೆಹರಿಸಲು ಯಾವುದೇ ಕ್ರಮ ಕೈಗೊಂಡಿಲಿಲ್ಲ. ಇಂತಹ ಸಂದರ್ಭದಲ್ಲಿ ಬಂಡ ವಾಳಶಾಹಿಗಳ ಆರ್ಭಟಕ್ಕೆ ಬಡ ಮೀನುಗಾರರು ತತ್ತರಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಮೀನುಗಾರರ ಹಿತ ಕಾಯಲು ಶಾಶ್ವತ ಹಾಗೂ ಪರಿಣಾಮಕಾರಿ ಯೋಜನೆ ಅನುಷ್ಠಾನಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.


ಮೀನುಗಾರರ ಅಭಿವೃದ್ಧಿಗಾಗಿ ಸರ್ಕಾರ ಹಲವು ಯೋಜನೆಗಳನ್ನು ಜಾರಿಗೆ ತಂದಿದೆ. ಆದರೆ ಆ ಯೋಜನೆಗಳು ಅರ್ಹರಿಗೆ ತಲುಪುತ್ತಿಲ್ಲ. ಮೀನುಗಾರರ ಸಹಕಾರ ಸಂಘಗಳ ಅವ್ಯವಹಾರದಿಂದ ಮೀನುಗಾರರಿಗೆ ಅನ್ಯಾಯವಾಗುತ್ತಿದೆ. ಒಬ್ಬರ ಹಿತಕ್ಕಾಗಿ ಮೀನುಗಾರರನ್ನು ಸಂಕಷ್ಟಕ್ಕೆ ದೂಡಲಾಗುತ್ತಿದೆ ಎಂದು ಕಿಡಿಕಾರಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಶೋಷಿತರ ಪರವಾಗಿ ಕೆಲಸ ಮಾಡುತ್ತಿದೆ. ಅಲ್ಲದೆ, ಮೀನುಗಾರರಿಗೆ ಹಲವು ಸೌಲಭ್ಯ ಒದಗಿಸಿಕೊಟ್ಟಿದೆ. ಆದರೆ ಸರ್ಕಾರ ನೀಡುತ್ತಿರುವ ಬಲೆಗಳು, ದೋಣಿಗಳು ಉಳ್ಳವರ ಪಾಲಾಗುತ್ತಿವೆ. ಪ್ರಭಾವ ಬಳಸಿ ಬಡ ಮೀನುಗಾರರಿಗೆ ಮೋಸ ಮಾಡುತ್ತಿದ್ದು, ಒಳನಾಡು ಮೀನುಗಾರಿಕೆ ಬಹಳ ಕಷ್ಟವಾಗಿದೆ. ಸ್ಥಳೀಯ ಶಾಸಕರು ಈ ಸಂಬಂಧ ಗಮನಹರಿಸಬೇಕು. ಇಲ್ಲದಿದ್ದರೆ ಮೀನುಗಾರರಿಗೆ ಆಗುತ್ತಿರುವ ವಂಚನೆ ವಿರುದ್ಧ ದೊಡ್ಡಮಟ್ಟದ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಮೀನುಗಾರರ ವಿಭಾಗದ ಅಧ್ಯಕ್ಷ ಮಂಜುನಾಥ್ ಬಿ.ಸುಣಗಾರ್ ಮಾತನಾಡಿ, ಮೀನುಗಾರಿಕೆ ದೇಶದ 2ನೇ ಬೆನ್ನೆಲುಬಿನಂತಿದೆ. ಆದರೆ ಪ್ರಸ್ತುತ ಮೀನುಗಾರರು ಆರ್ಥಿಕ ಮತ್ತು ಸಾಮಾಜಿಕವಾಗಿ ಶೋಷಣೆಗೊಳಗಾಗುತ್ತಿದ್ದಾರೆ. ಮೀನುಗಾರಿಕೆ ಸಮುದಾಯಕ್ಕೆ ತನ್ನದೇ ಆದ ಇತಿಹಾಸವಿದ್ದು, ಪ್ರಪಂಚದ ಅತೀ ಹಿರಿಯ ವೃತ್ತಿಗಳಲ್ಲಿ ಮೀನುಗಾರಿಕೆ ಅಗ್ರಸ್ಥಾನದಲ್ಲಿದೆ. ಆದರೂ ಮೀನುಗಾರಿಕೆಗೆ ಇಂದು ದುಸ್ಥಿತಿ ಬಂದೊದಗಿದೆ ಎಂದು ವಿಷಾದಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ. ವಿಜಯ್ ಕುಮಾರ್ ಮಾತನಾಡಿ, ತಳ ಹಾಗೂ ವಂಚಿತ ಸಮುದಾಯಗಳಿಗೆ ಅಧಿಕಾರ ಸಿಕ್ಕಾಗ ಮಾತ್ರ ಸಂವಿಧಾನದ ಆಶಯಗಳು ಈಡೇರಲು ಸಾಧ್ಯ. ಮೀನುಗಾರರ ಆರ್ಥಿಕ ಮತ್ತು ಸಾಮಾಜಿಕ ಬಲವರ್ಧನೆಗೆ ಕೇಂದ್ರ ಸರ್ಕಾರ ರಾಷ್ಟ್ರೀಯ ಮೀನುಗಾರರ ನೀತಿಯನ್ನು ಜಾರಿಗೊಳಿಸಬೇಕು. ಜಿಲ್ಲೆಯಲ್ಲಿ ಮೀನುಗಾರರು ಸಂಕಷ್ಟಕ್ಕೀಡಾಗಿದ್ದಾರೆ. ಆಧುನಿಕ ವಿಧಾನದ ಮೂಲಕ ಮೀನುಗಾರಿಕೆ ವ್ಯಾಪ್ತಿಯನ್ನು ವಿಸ್ತರಿಸಿ, ಲಾಭ ಮಾಡಿಕೊಳ್ಳಲು ಮುಂದಾಗಬೇಕು ಎಂದು ಕರೆ ನೀಡಿದರು.


ಕಾರ್ಯಕ್ರಮದಲ್ಲಿ ಜಿಲ್ಲಾ ಮೀನುಗಾರರ ಘಟಕದ ಅಧ್ಯಕ್ಷ ಎಸ್.ಸಿದ್ದಯ್ಯ, ಡಿಸಿಸಿ ಉಪಾಧ್ಯಕ್ಷ ಹೆಡತಲೆ ಮಂಜುನಾಥ್, ಪ್ರಧಾನ ಕಾರ್ಯದರ್ಶಿ ಎಂ.ಶಿವಪ್ರಸಾದ್, ಉತ್ತನಹಳ್ಳಿ ಶಿವಣ್ಣ, ಡಿಸಿಸಿ ಕಾರ್ಯದರ್ಶಿಗಳಾದ ಎನ್.ಲಕ್ಷ್ಮಣ್, ಎನ್.ಆರ್.ಎಂ.ಮಂಜು, ಮುಖಂಡರಾದ ದೇವರಾಜ್ ಟಿ.ಕಾಟೂರ್, ಯೋಗೇಶ್, ಜವರೇ ಗೌಡ, ಪ್ರವೀಣ್ ಸಿದ್ದಲಿಂಗಪುರ ಹಾಗೂ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಶುಕ್ರವಾರ ಮೀನುಗಾರರ ಸಮಿತಿ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮದಲ್ಲಿ ಮಹರ್ಷಿ ವಾಲ್ಮೀಕಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಾಯಿತು.

ಉರುಳಿ ಬಿದ್ದ ರಾಸಾಯನಿಕ ಸಾಗಿಸುತ್ತಿದ್ದ ಟ್ಯಾಂಕರ್

ಸುತ್ತಮುತ್ತಲ ಜನರಲ್ಲಿ ಆತಂಕ



ಮೈಸೂರು, ಅ.18(ಎಸ್‌ಬಿಡಿ)– ಚಾಲಕನ ನಿಯಂತ್ರಣ ತಪ್ಪಿ ಟ್ಯಾಂಕರ್ ಮಾದರಿಯ ಬುಲೆಟ್ ಟ್ರಕ್ ಉರುಳಿ ಬಿದ್ದಿರುವ ಘಟನೆ ಮೈಸೂರು–ನಂಜನಗೂಡು ಹೆದ್ದಾರಿಯಲ್ಲಿ ಸಂಭವಿಸಿದೆ.

ನಂಜನಗೂಡಿನ ಏಷಿಯನ್ ಪೇಂಟ್ಸ್ ಘಟಕಕ್ಕೆ ಮೆಥಾಕ್ರಿಲಿಕ್ ಆಸಿಡ್ ಸಾಗಿಸುತ್ತಿದ್ದ 12 ಚಕ್ರದ ಬೃಹತ್ ಟ್ಯಾಂಕರ್, ಗೆಜ್ಜಗಳ್ಳಿ ಸರ್ಕಲ್ ಸಮೀಪದ ವರುಣ ಮೇಲ್ಸೇತುವೆ ಬಳಿ ಚಾಲಕನ ನಿಯಂತ್ರಣ ತಪ್ಪಿ ಹಳ್ಳಕ್ಕೆ ಉರುಳಿ ಬಿದ್ದಿದೆ. ಅದೃಷ್ಟವಶಾತ್ ಯಾವುದೇ ಸೋರಿಕೆಯಾಗಿಲ್ಲ. ಚಾಲಕ ಸೇರಿದಂತೆ ವಾಹನದಲ್ಲಿದ್ದವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಅಪಘಾತಕ್ಕೀಡಾಗಿರುವ ಟ್ಯಾಂಕರ್, ಚೆನ್ನೈ ಘಟಕದಿಂದ ಬಂದಿದ್ದಾಗಿ ಕಂಪನಿ ಮೂಲಗಳಿಂದ ತಿಳಿದು ಬಂದಿದೆ. ಆದರೆ ಅದು ಯಾವ ಮಾರ್ಗದಲ್ಲಿ ಮೈಸೂರಿಗೆ ಬಂದು ನಂಜನಗೂಡಿಗೆ ತೆರಳುತ್ತಿತ್ತು ಎಂಬುದರ ಬಗ್ಗೆ ಸ್ಪಷ್ಟ ಮಾಹಿತಿ ಲಭ್ಯವಾಗಿಲ್ಲ. ಗುರುವಾರ ತಡರಾತ್ರಿ ಈ ಘಟನೆ ಸಂಭವಿಸಿರಬಹುದು ಎನ್ನಲಾಗಿದೆ. ಚೆನ್ನೈನಿಂದ ಕಂಪನಿ ಪ್ರತಿನಿಧಿಗಳು ಬಂದ ನಂತರ ನಿಖರ ಮಾಹಿತಿ ಸಿಗಲಿದೆ.

ಅಗ್ನಿಶಾಮಕ ಸಿಬ್ಬಂದಿ ದೌಡು: ಯಾವುದೋ ಕೆಮಿಕಲ್ ತುಂಬಿರುವ ಟ್ಯಾಂಕರ್ ಉರುಳಿ ಬಿದ್ದಿದೆ ಎಂಬ ಮಾಹಿತಿ ದೊರೆತ ಕೂಡಲೇ ಅಗ್ನಿಶಾಮಕ ಸಿಬ್ಬಂದಿ ಸ್ಥಳಕ್ಕೆ ದೌಡಾಯಿಸಿ, ಪರಿಶೀಲನೆ ನಡೆಸಿ, ಟ್ಯಾಂಕರ್‌ನಿಂದ ಯಾವುದೇ ಸೋರಿಕೆ ಆಗದಿರುವುದನ್ನು ಖಚಿತಪಡಿಸಿಕೊಂಡರು. ಮುಂಜಾಗ್ರತಾ ಕ್ರಮವಾಗಿ ಎರಡು ಅಗ್ನಿಶಾಮಕ ವಾಹನಗಳೊಂದಿಗೆ ಸ್ಥಳದಲ್ಲೇ ಮೊಕ್ಕಾಂ ಹೂಡಿದ್ದರು.

ಬ್ರೇಕ್ ಫೇಲ್ ಆಗಿ ಈ ಘಟನೆ ಸಂಭವಿಸಿರಬಹುದು. ಸದ್ಯ ಯಾವುದೇ ಅನಾಹುತವಾಗಿಲ್ಲ. ಆದಾಗ್ಯೂ ನಾವು ಸ್ಥಳದಲ್ಲೇ ಇದ್ದು ಗಮನಿಸುತ್ತಿದ್ದೆವು ಎಂದು ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಗುರುರಾಜ್ ತಿಳಿಸಿದರು. ಮೈಸೂರು ದಕ್ಷಿಣ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಶೇಖರ್ ಹಾಗೂ ಸಿಬ್ಬಂದಿ ರಸ್ತೆ ಸಂಚಾರಕ್ಕೆ ತೊಂದರೆಯಾಗದಂತೆ ಕ್ರಮ ವಹಿಸಿದ್ದರು. ಕ್ರೇನ್ ಮೂಲಕ ಶುಕ್ರವಾರ ರಾತ್ರಿ ವಾಹನವನ್ನು ಮೇಲೆತ್ತಲಾಯಿತು ಎಂದು ತಿಳಿದುಬಂದಿದೆ.

ಮೈಸೂರು ಕೊಡವ ಸಮಾಜದಿಂದ ಕಾವೇರಿ ತೀರ್ಥ ವಿತರಣೆ

ಮೈಸೂರು, ಅ.18(ಜಿಎ)–ಮೈಸೂರಿನ ವಿಜಯನಗರದಲ್ಲಿರುವ ಕೊಡವ ಸಮಾಜದಲ್ಲಿ ಕಾವೇರಿ ಮಾತೆಗೆ ವಿಶೇಷ ಕಣಿ ಪೂಜೆ ಸಲ್ಲಿಸಿ ಮೈಸೂರಿನ ಕೊಡವ ಬಂಧುಗಳಿಗೆ ಕಾವೇರಿ ತೀರ್ಥ ವಿತರಿಸಲಾಯಿತು.

ಮೈಸೂರು ಕೊಡವ ಸಮಾಜದ ಐವರು ಸದಸ್ಯರ ತಂಡವು ಕಾವೇರಿ ತೀರ್ಥೋದ್ಭವ ಮುನ್ನ ದಿನ ಭಾಗಮಂಡಲಕ್ಕೆ ತೆರಳಿ ಅಲ್ಲಿ ವಿಶೇಷ ಪೂಜೆ ಸಲ್ಲಿಸಿ, ಅಲ್ಲಿಂದ ತಲಕಾವೇರಿಗೆ ಕಾಲ್ನಡಿಗೆ ಮೂಲಕ ತೆರಳಿ ತೀರ್ಥೋದ್ಭವದ ನಂತರ ಅಲ್ಲಿಂದ ಎರಡು ಸಾವಿರ ಲೀಟರ್ ತೀರ್ಥವನ್ನು ಮೈಸೂರಿಗೆ ತಂದು ವಿಶೇಷ ಕಣಿ ಪೂಜೆ, ಕಾವೇರಿ ಪೂಜೆ ಸಲ್ಲಿಸಿ, ವಿತರಿಸಿದರು. ಈ ವೇಳೆ ಶಾಸಕರಾದ ಟಿ.ಎಸ್.ಶ್ರೀವತ್ಸ, ಕೆ.ಹರೀಶ್ ಗೌಡ ತೀರ್ಥ ಸ್ವೀಕರಿಸಿದರು.

ನಂತರ ಎರಡು ಸಾವಿರ ಲೀಟರ್ ತೀರ್ಥವನ್ನು 250 ಎಂಎಲ್ ಬಾಟಲ್‌ಗಳಿಗೆ ತುಂಬಿಸಿ ವಿತರಿಸಿದರು. ಮೈಸೂರಿನಲ್ಲಿರುವ ಕೊಡವ ಸಮುದಾಯ ಹಾಗೂ ಸಾರ್ವಜನಿಕರು ಕಾವೇರಿ ಮಾತೆಗೆ ಅಕ್ಕಿ ಹಾಕಿ ಭಕ್ತಿ ಭಾವದಿಂದ ತೀರ್ಥ ಪಡೆದುಕೊಂಡರು.

ಈ ವೇಳೆ ಶಾಸಕ ಶ್ರೀವತ್ಸ ಮಾತನಾಡಿ, ಕಾವೇರಿ ತೀರ್ಥ ಸ್ವರೂಪಿಣಿಯಾಗಿ ನಾಡು ಸೇರಿದಂತೆ ದೇಶಕ್ಕೆ ಒಳಿತು ಮಾಡುತ್ತಾರೆ. ದೇವರು ಎಲ್ಲಾ ರೂಪದಲ್ಲಿ ಇರುತ್ತಾರೆ ಎನ್ನುವುದಕ್ಕೆ ಕಾವೇರಿ ಸಾಕ್ಷಿ. ತುಲಾ ಸಂಕ್ರಮಣ ಮಾಸವು ಅತ್ಯಂತ ಶ್ರೇಷ್ಠ ಮಾಸವಾಗಿದೆ. ನಾನು ಮೂಲತಃ ತಲಕಾವೇರಿ ಭಾಗದವನಾಗಿದ್ದು, ಅಲ್ಲಿ ಅವಿರೋಘವಾಗಿ ಆಚರಣೆಗಳು ನಡೆಯುತ್ತಿದ್ದವು ಎಂದು ಸ್ಮರಿಸಿದರು.

ಶಾಸಕ ಕೆ.ಹರೀಶ್‌ಗೌಡ ಮಾತನಾಡಿ, ಕಾವೇರಿ ಮಾತೆ ಕೋಟ್ಯಾಂತರ ಜನರ ಜೀವ ನದಿಯಾಗಿದೆ. ಇತ್ತೀಚೆಗೆ ರಾಜ್ಯ ಸರ್ಕಾರದ ಸೂಚನೆಯಂತೆ ಹರಿದ್ವಾರದಲ್ಲಿ ಗಂಗಾ ಆರತಿ ನೋಡಿಕೊಂಡು ಬಂದಿದ್ದೇವೆ ಅದನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಕಾವೇರಿ ಆರತಿ ಮಾಡಬೇಕು ಎಂಬ ಸೂಚನೆ ನೀಡಿದ್ದಾರೆ. ಅದರಂತೆ ಮುಂದಿನ ದಿನಗಳಲ್ಲಿ ತಲಕಾವೇರಿ ಅಥವಾ ಶ್ರೀರಂಗಪಟ್ಟಣದಲ್ಲಿ ಕಾವೇರಿ ಆರತಿ ನಡೆಯಲಿದೆ ಎಂದರು.

ಈ ವೇಳೆ ಕೊಡವ ಸಮಾಜದ ಅಧ್ಯಕ್ಷ ಪೊಂಜಂಡ ಎ. ಗಣಪತಿ, ಉಪಾಧ್ಯಕ್ಷ ಮಾಚಿಮಾಡ ಪಿ.ನಾಣಯ್ಯ, ಕಾರ್ಯದರ್ಶಿ ಕೆಟೋಳಿರ ಎ. ಬೆಳ್ಳಿಯಪ್ಪ ಖಜಾಂಚಿ ಇಟ್ಟೀರ ಜಿ. ಕಾಶಿಯಪ್ಪ, ಜಂಟಿ ಕಾರ್ಯದರ್ಶಿ ಅಜ್ಜಿಕುಟ್ಟೀರ ಡಯಾನಾ ಪೂವಯ್ಯ ಹಾಗೂ ಕಮಿಟಿ ಸದಸ್ಯರು ಉಪಸ್ಥಿತರಿದ್ದರು.



ಮೈಸೂರಿನ ವಿಜಯನಗರದಲ್ಲಿರುವ ಕೊಡವ ಸಮಾಜದಲ್ಲಿ ಕಾವೇರಿ ಮಾತೆಗೆ ವಿಶೇಷ ಕಣಿ ಪೂಜೆ ಸಲ್ಲಿಸಿ ಮೈಸೂರಿನ ಕೊಡವ ಬಂಧುಗಳಿಗೆ ಕಾವೇರಿ ತೀರ್ಥ ವಿತರಿಸಲಾಯಿತು. ಈ ವೇಳೆ ಶಾಸಕರಾದ ಕೆ.ಹರೀಶ್‌ಗೌಡ ಮತ್ತು ಟಿ.ಎಸ್.ಶ್ರೀವತ್ಸ ತೀರ್ಥ ಸ್ವೀಕರಿಸಿದರು.

ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆ



2023ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಪಡೆದ ಸರ್ಕಾರಿ ಶಾಲಾ ವಿದ್ಯಾರ್ಥಿಗಳಾದ ವೈದೇಶ್ ಕುಮಾರ್, ಹರಿ ಪ್ರಶಾಂತ್, ಸಮೀನ ಕೌಶರ್, ದೀಪಿಕಾ ಅವರಿಗೆ ಸರ್ಕಾರದ ವತಿಯಿಂದ ನೀಡಲಾಗುವ ಲ್ಯಾಪ್‌ಟಾಪ್ ಅನ್ನು ಶಾಸಕ ಕೆ. ಹರೀಶ್‌ಗೌಡ ವಿತರಣೆ ಮಾಡಿದರು. ಈ ವೇಳೆ ಉತ್ತರ ವಲಯ ಕ್ಷೇತ್ರ ಶಿಕ್ಷಣ ಅಧಿಕಾರಿಗಳು, ಶಿಕ್ಷಕ ವರ್ಗದವರು ಹಾಗೂ ವಿದ್ಯಾರ್ಥಿಗಳ ಪೋಷಕರು ಉಪಸ್ಥಿತರಿದ್ದರು.

ಹುಲಿ ಕಾರ್ಯಾಚರಣೆ ನೆಪದಲ್ಲಿ ಮತ್ತಿಗೋಡು ಕ್ಯಾಂಪ್‌ನಿಂದ 5 ಆನೆ ಸ್ಥಳಾಂತರ

ಕ್ಯಾಂಪ್‌ನಲ್ಲೀಗ 10 ಆನೆಗಳಿಗೆ ಮಾತ್ರ ಆಶ್ರಯ

● ಎಂ.ಟಿ.ಯೋಗೇಶ್ ಕುಮಾರ್

ಮೈಸೂರು, ಅ.18– ಪ್ರವಾಸಿಗರ ವೀಕ್ಷಣೆಗಾಗಿ ಲೋಕಾರ್ಪಣೆಗೊಂಡ ವರ್ಷಕ್ಕೂ ಮುನ್ನವೇ ಮತ್ತಿಗೋಡು ಆನೆ ಕ್ಯಾಂಪ್ ಬೆರಳೆಣಿಕೆಯಷ್ಟು ಆನೆಗಳನ್ನು ಮಾತ್ರ ಒಳಗೊಳ್ಳುವ ಸ್ಥಿತಿಗೆ ತಲುಪಿದ್ದು, ಹುಲಿ ಕಾರ್ಯಾಚರಣೆಗಾಗಿ ಬಳಸಿಕೊಳ್ಳುವ ಉದ್ದೇಶದಿಂದ ಮತ್ತಿಗೋಡು ಕ್ಯಾಂಪ್‌ನಿಂದ 5 ಆನೆಗಳನ್ನು ಬೇರೆ ಬೇರೆ ಕ್ಯಾಂಪ್‌ಗಳಿಗೆ ಸ್ಥಳಾಂತರಿಸಲಾಗಿದೆ.

ಪ್ರವಾಸಿಗರಿಗೆ ಹಾಗೂ ಜನರಿಗೆ ವನ್ಯಜೀವಿಗಳ ಸಂರಕ್ಷಣೆಯ ಬಗ್ಗೆ ಜಾಗೃತಿ ಮೂಡಿಸುವ ಸಲುವಾಗಿ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಆನೆಚೌಕೂರು ವನ್ಯಜೀವಿ ವಿಭಾಗ ವ್ಯಾಪ್ತಿಯ ಮತ್ತಿ ಗೋಡು ಆನೆ ಶಿಬಿರವನ್ನು ಅಭಿವೃದ್ಧಿ ಪಡಿಸಿ, ಫೆಬ್ರವರಿ ತಿಂಗಳಲ್ಲಿ ಪ್ರವಾಸಿಗರ ಪ್ರವೇಶಕ್ಕೆ ಅನುಮತಿ ನೀಡಲಾಗಿತ್ತು. 18ಕ್ಕೂ ಹೆಚ್ಚು ಆನೆಗಳಿದ್ದ ಮತ್ತಿಗೋಡು ಶಿಬಿರದಲ್ಲಿ ವಿವಿಧ ಕಾರಣದಿಂದ 2 ಆನೆಗಳು ಮೃತಪಟ್ಟು, ಪ್ರಸ್ತುತ 15 ಆನೆಗಳು ಮಾತ್ರ ಇದ್ದವು. ಆದರೆ, ಇದೀಗ ಹುಲಿ ಸೆರೆ ಕಾರ್ಯಾಚರಣೆಗೆ ಬಳಸಿಕೊಳ್ಳ ಬೇಕೆಂಬ ಉದ್ದೇಶದಿಂದ ಮತ್ತಿಗೋಡು ಕ್ಯಾಂಪ್‌ನಿಂದ ಐದು ಗಂಡಾನೆಗಳನ್ನು ವಿವಿಧ ಕ್ಯಾಂಪ್‌ಗಳಿಗೆ ರವಾನಿಸಲಾಗಿದೆ.

ಮುಚ್ಚುವ ಹಂತಕ್ಕೆ ತಲುಪಿದ್ದ ಕ್ಯಾಂಪ್‌ಗೆ ಆಸರೆಯಾದ ಮಹೇಂದ್ರ–ಲಕ್ಷ್ಮಿ ಜೋಡಿ: ಅಂಬಾರಿ ಆನೆ ಅರ್ಜುನ, ಕುಮ್ಕಿ ಆನೆ ದುರ್ಗಾಪರಮೇಶ್ವರಿ, ಸಾಕಾನೆ ಕುಮಾರಸ್ವಾಮಿ ಆನೆಯ ದುರಂತ ಅಂತ್ಯದಿಂದ ಹೆಚ್.ಡಿ.ಕೋಟೆ ತಾಲೂಕು ವ್ಯಾಪ್ತಿಯ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಡಿ.ಬಿ.ಕುಪ್ಪೆ ವಲಯದ ಬಳ್ಳೆ ಕ್ಯಾಂಪ್ ಮುಚ್ಚುವ ಹಂತಕ್ಕೆ ತಲುಪಿತ್ತು. 3 ದಶಕಗಳ ಹಿಂದೆ ಬಳ್ಳೆ ಕ್ಯಾಂಪ್‌ನಲ್ಲಿ ಆಶ್ರಯ ಪಡೆದಿದ್ದ ಅಂಬಾರಿ ಆನೆಗಳಾದ ದ್ರೋಣ ಹಾಗೂ ರಾಜೇಂದ್ರ ಆನೆಯೂ ದುರಂತದಲ್ಲಿ ಕೊನೆಯುಸಿರೆಳೆದಿದ್ದವು. ಈ ಹಿನ್ನೆಲೆಯಲ್ಲಿ ಬಳ್ಳೆ ಕ್ಯಾಂಪ್ ಆನೆಗಳಿಲ್ಲದೆ ಸೊರಗಿತ್ತು.

ಈ ಹಿನ್ನೆಲೆಯಲ್ಲಿ ಇದೀಗ ದಸರಾ ಮಹೋತ್ಸವದಲ್ಲಿ ಸತತ ಮೂರು ಬಾರಿ ಯಶಸ್ವಿಯಾಗಿ ಪಾಲ್ಗೊಂಡು ಭವಿಷ್ಯದ ಅಂಬಾರಿ ಆನೆ ಎಂದೇ ಭರವಸೆ ಮೂಡಿಸಿದ್ದ 41 ವರ್ಷದ ಮಹೇಂದ್ರ ಆನೆ, ದೊಡ್ಡ ಹರವೆ ಕ್ಯಾಂಪ್‌ನಲ್ಲಿದ್ದ ಲಕ್ಷ್ಮಿ ಆನೆಯನ್ನೂ ಬಳ್ಳೆ ಕ್ಯಾಂಪ್‌ಗೆ ಕಳುಹಿಸಲಾಗಿದೆ.

ನಾಲ್ಕು ಆನೆ ದೊಡ್ಡ ಹರವೆ ಕ್ಯಾಂಪ್‌ಗೆ: ಮತ್ತಿಗೋಡು ಕ್ಯಾಂಪ್‌ನಲ್ಲಿದ್ದ ಏಕಲವ್ಯ, ರಾಮಯ್ಯ, ರವಿ, ಮಾಸ್ತಿ ಗಂಡಾನೆಗಳನ್ನು ಪಿರಿಯಾಪಟ್ಟಣ ತಾಲೂಕು ವ್ಯಾಪ್ತಿಯ ದೊಡ್ಡ ಹರವೆ ಕ್ಯಾಂಪ್‌ಗೆ ಕಳುಹಿಸಲಾಗಿದೆ. ಕಾವೇರಿ ನದಿ ದಡದಲ್ಲಿರುವ ದೊಡ್ಡಹರವೆ ಕ್ಯಾಂಪ್‌ನಲ್ಲಿ ಆನೆಗಳ ಪಾಲನೆಗೆ ಸೌಲಭ್ಯವಿದ್ದು, ನಾಲ್ಕು ಗಂಡಾನೆಗಳನ್ನು ರವಾನಿಸಲಾಗಿದೆ.

ಮತ್ತಿಗೋಡು ಕ್ಯಾಂಪ್‌ನಲ್ಲಿ 10 ಆನೆ: ಐದು ಆನೆಗಳನ್ನು ಬೇರೆ ಕ್ಯಾಂಪ್‌ಗಳಿಗೆ ಕಳುಹಿಸಿದ ಹಿನ್ನೆಲೆಯಲ್ಲಿ ಇದೀಗ ಮತ್ತಿಗೋಡು ಕ್ಯಾಂಪ್‌ನಲ್ಲಿ ಅಂಬಾರಿ ಆನೆ ಅಭಿಮನ್ಯು, ಭೀಮ, ಶ್ರೀಕಂಠ, ಚಾಮುಂಡೇಶ್ವರಿ, ಭುವನೇಶ್ವರಿ, ಸೋಮಶೇಖರ್, ಶ್ರೀಕಂಠ, ಅಶೋಕ ಹಾಗೂ ಕ್ಯಾತ ಆನೆ ಸೇರಿದಂತೆ 10 ಆನೆಗಳಿವೆ. ಅದರಲ್ಲಿ ಕ್ಯಾತ ಆನೆಯನ್ನು ಕ್ಯಾಂಪ್‌ನಿಂದ ದೂರ ಕಟ್ಟಿ ಹಾಕಲಾಗುತ್ತದೆ ಉಳಿದ 9 ಆನೆಗಳನ್ನು ಮಾತ್ರ ಪ್ರವಾಸಿಗರು ವೀಕ್ಷಿಸಲು ಲಭ್ಯವಿರುತ್ತದೆ.

ಹೊಸ ಆನೆ ಸೆರೆಗೆ ಪ್ಲಾನ್: ಮೂಲಗಳ ಪ್ರಕಾರ ಹಾಸನ, ಚಿಕ್ಕಮಗಳೂರು ಸೇರಿದಂತೆ ವಿವಿಧೆಡೆ ಪದೇ ಪದೇ ಗ್ರಾಮಗಳಿಗೆ ಬಂದು ಉಪಟಳ ನೀಡುವ ಆನೆಗಳಲ್ಲಿ ಕೆಲವನ್ನು ಸೆರೆ ಹಿಡಿಯಲು ಗುರುತಿಸಲಾಗಿದ್ದು, ನವೆಂಬರ್ ನಂತರ ಸೆರೆ ಕಾರ್ಯಾಚರಣೆ ಆರಂಭಿಸಿ ಮತ್ತಿಗೋಡು ಹಾಗೂ ದೊಡ್ಡಹರವೆ ಕ್ಯಾಂಪ್‌ನಲ್ಲಿರುವ ಕ್ರಾಲ್‌ನಲ್ಲಿ ಪಳಗಿಸಲು ಉದ್ದೇಶಿಸಲಾಗಿದೆ ಎಂಬ ಲಭ್ಯವಾಗಿದೆ. ಈ ಕಾರಣದಿಂದಲೇ ಮತ್ತಿಗೋಡು ಕ್ಯಾಂಪ್‌ನಿಂದ ಐದು ಆನೆಗಳನ್ನು ಬೇರೆ ಕ್ಯಾಂಪ್‌ಗೆ ಸ್ಥಳಾಂತರಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.



ಮತ್ತಿಗೋಡು ಕ್ಯಾಂಪ್‌ನಲ್ಲಿ ಆನೆಗಳಿರುವ ಚಿತ್ರ.

ಹುಲಿ, ಆನೆಗಳ ಕಾರ್ಯಾಚರಣೆಗೆ ಬಳಸಿಕೊಳ್ಳಲು ಸ್ಥಳಾಂತರ

ಮತ್ತಿಗೋಡು ಕ್ಯಾಂಪ್‌ನಿಂದ ಬಳ್ಳೆ ಹಾಗೂ ದೊಡ್ಡ ಹರವೆ ಕ್ಯಾಂಪ್‌ಗೆ ಆನೆಗಳನ್ನು ಸ್ಥಳಾಂತರಿಸಲು ಈ ಹಿಂದೆಯೇ ಆದೇಶವಾಗಿತ್ತು. ಕಾಡಾನೆ ಮತ್ತು ಹುಲಿ ಹಾವಳಿ ಪೀಡಿತ ಪ್ರದೇಶವಾಗಿರುವುದರಿಂದ ಬಳ್ಳೆ ಹಾಡಿಗೆ ಮಹೇಂದ್ರ ಆನೆಯನ್ನು ಈ ಹಿಂದೆಯೇ ನಿರ್ಧರಿಸಿದ್ದಂತೆ ಈಗ ಕಳುಹಿಸಲಾಗಿದೆ. ಆದರೆ, ಯಾವುದೇ ಕಾರಣಕ್ಕೂ ಮಾವುತ ಮತ್ತು ಕಾವಾಡಿಯನ್ನು ಬದಲಿಸುವುದಿಲ್ಲ. ಈ ಹಿಂದೆ ಇದ್ದ ಮಾವುತ, ಕಾವಾಡಿಗಳೇ ಮಹೇಂದ್ರ ಆನೆಯನ್ನು ನೋಡಿಕೊಳ್ಳುತ್ತಾರೆ. ಹುಲಿ ಕಾರ್ಯಾಚರಣೆಗಾಗಿ ಕರೆದೊಯ್ಯಲು ಸುಲಭವಾಗಲೆಂದು ಸ್ಥಳಾಂತರಿಸಲಾಗಿದೆ.

– ಸೀಮಾ, ನಿರ್ದೇಶಕರು, ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ.

ಮೈಸೂರು ಚಿತ್ರಮಂದಿರಗಳಲ್ಲಿ

ಚಿತ್ರಮಂದಿರ / ಚಿತ್ರ	
ಪದ್ಮ ಚಿತ್ರಮಂದಿರ	(ದೂ: 2521923)
ವಿಶ್ವಂ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ವೆಟ್ಟೈಯನ್ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಜಿಗ್ರಾ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಮಾರ್ಟಿನ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಾರ್ಟಿನ್ (ಕ)	4 ಪ್ರದರ್ಶನಗಳು
ರಾಜಕಮಲ್	
ಭೈರಾದೇವಿ (ಕ)	4 ಪ್ರದರ್ಶನಗಳು
ಸಂಗಂ	
ಮಾರ್ಟಿನ್ (ಕ)	4 ಪ್ರದರ್ಶನಗಳು
ಲಿಡೋ	
ಕೃಷ್ಣಂ ಪ್ರಣಯ ಸಖಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಸಿಂಹರೂಪಿಣಿ (ಕ)	4 ಪ್ರದರ್ಶನಗಳು
ಪ್ರಭಾ	
ಭೀಮ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ವೆಟ್ಟೈಯನ್ (ತ): ಬೆ.9.55ಕ್ಕೆ, ಸಂ.4ಕ್ಕೆ, ರಾ.10.05ಕ್ಕೆ, ಮಾರ್ಟಿನ್ (ಕ): ಮ.1.05ಕ್ಕೆ, ರಾ.7.10ಕ್ಕೆ.
ಸ್ಕ್ರೀನ್ 2	ಜಿಗ್ರಾ (ಹಿಂ): ಬೆ.10.15ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಮಾರ್ಟಿನ್ (ಕ): ಮ.1.15ಕ್ಕೆ, ಬ್ಲ್ಯಾಕ್ (ತ): ಸಂ.4.30ಕ್ಕೆ.
ಸ್ಕ್ರೀನ್ 3	ಮಾರ್ಟಿನ್ (ಕ): ಬೆ.10.10ಕ್ಕೆ, ರಾ.7ಕ್ಕೆ, ಇಬ್ಬನಿ ತಬ್ಬಿದ ಇಳೆಯಲಿ (ಕ): ಮ.1.15ಕ್ಕೆ, ಅನ್ನ (ಕ): ಸಂ.4.30ಕ್ಕೆ, ವಿಕ್ಕಿ ವಿದ್ಯಾ ಕಾ ಹೂ ವಾಲ ವೀಡಿಯೋ (ಹಿಂ): ರಾ.10ಕ್ಕೆ.
ಸ್ಕ್ರೀನ್ 4	ಮಾರ್ಟಿನ್ (ಕ): ಬೆ.9ಕ್ಕೆ, ಸಂ.4ಕ್ಕೆ, ರಾ.10ಕ್ಕೆ, ವೆಟ್ಟೈಯನ್ (ತ): ಮ.12.50ಕ್ಕೆ, ಸಂ.6.55ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ದೇವರ 1 (ತೆ): ಮ.12.20ಕ್ಕೆ, ವೆಟ್ಟೈಯನ್ (ತ): ಮ.3.35ಕ್ಕೆ, ಸಂ.6.40ಕ್ಕೆ, ಮಾರ್ಟಿನ್ (ಕ): ರಾ.9.45ಕ್ಕೆ.
ಸ್ಕ್ರೀನ್ 2	ವೆಟ್ಟೈಯನ್ (ತ): ಬೆ.10ಕ್ಕೆ, ಮಾರ್ಟಿನ್ (ಕ): ಮ.1ಕ್ಕೆ, ಮ.3.30ಕ್ಕೆ, ಸಂ.6.40ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ಮಾರ್ಟಿನ್ (ಕ): ಬೆ.9ಕ್ಕೆ, ಬೆ.11.50ಕ್ಕೆ, ಮ.2.40ಕ್ಕೆ, ಸಂ.5.30ಕ್ಕೆ, ವೆಟ್ಟೈಯನ್ (ತ): ರಾ.8.20ಕ್ಕೆ.
ಸ್ಕ್ರೀನ್ 4	ವೆಟ್ಟೈಯನ್ (ಕ): ಮ.12.25ಕ್ಕೆ, ವೆಟ್ಟೈಯನ್ (ತ): ಮ.3.30ಕ್ಕೆ, ಸಂ.6.35ಕ್ಕೆ, ರಾ.9.40ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಇಬ್ಬರು ಭಾರತೀಯ ಉದ್ಯಮಿಗಳಿಗೆ ಅಮೆರಿಕ ಆರ್ಥಿಕ ನಿರ್ಬಂಧ

ನ್ಯೂಯಾರ್ಕ್ (ಅಮೆರಿಕ): ಯಮನ್ ದೇಶದ ಹೌತಿ ಉಗ್ರ ಸಂಘಟನೆ ಜೊತೆ ನಂಟು ಹೊಂದಿರುವ ಆರೋಪದ ಮೇಲೆ ಇಬ್ಬರು ಭಾರತೀಯರಿಗೆ ಅಮೆರಿಕ ನಿರ್ಬಂಧ ವಿಧಿಸಿದೆ. ಇರಾನ್‌ನಿಂದ ಪೆಟ್ರೋಲಿಯಂ ಕಚ್ಚಾ ತೈಲ ಖರೀದಿ ಮಾಡಿ, ಆ ಹಣವನ್ನು ಹೌತಿ ಉಗ್ರ ಸಂಘಟನೆಗೆ ನೀಡಲಾಗುತ್ತಿದೆ ಎಂದು ಅಮೆರಿಕ ಆಪಾದಿಸಿದೆ. ಅಮೆರಿಕದ ಖಜಾನೆ ಇಲಾಖೆ ನೀಡಿರುವ ಮಾಹಿತಿ ಪ್ರಕಾರ ಶಾರ್ಜಾ ಮೂಲದ ಇಂಡೋ ಗಲ್ಫ್ ಹಡಗು ನಿರ್ವಹಣೆ ಸಂಸ್ಥೆಯ ಉನ್ನತಾಧಿಕಾರಿಗಳು. ಐಸಿಎಸ್‌ಎಂ ಎಂಬ ಈ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ರಾಹುಲ್ ರತನ್ ಲಾಲ್ ವಾರಿಕೂ ರತನ್‌ಲಾಲ್ ಹಾಗೂ ಇದೇ ಸಂಸ್ಥೆಯ ತಾಂತ್ರಿಕ ಮ್ಯಾನೇಜರ್ ದೀಪಂಕರ್ ಮೋಹನ್ ಕಿಯೋಟ್ ಅವರಿಗೆ ಅಮೆರಿಕ ನಿರ್ಬಂಧ ಹೇರಿದೆ. ನಿರ್ಬಂಧದ ಅನ್ವಯ ಇಬ್ಬರೂ ಉದ್ಯಮಿಗಳು ಅಮೆರಿಕದಲ್ಲಿ ಹೊಂದಿದ್ದ ಎಲ್ಲಾ ಆಸ್ತಿಗಳನ್ನೂ ಸರ್ಕಾರ ತನ್ನ ವಶಕ್ಕೆ ತೆಗೆದುಕೊಂಡಿದೆ. ಜೊತೆಯಲ್ಲೇ ಇಬ್ಬರೂ ಉದ್ಯಮಿಗಳು ಶೇ. 50ಕ್ಕಿಂತಲೂ ಹೆಚ್ಚು ಪಾಲುದಾರಿಕೆ ಹೊಂದಿರುವ ಆಸ್ತಿಗಳನ್ನೂ ತನ್ನ ವಶಕ್ಕೆ ಪಡೆದಿದೆ.

ರೈತ ಸಂಘದ ಗ್ರಾಮ ಘಟಕದ ನಾಮಫಲಕ ಅನಾವರಣ



ಮೈಸೂರು ತಾಲೂಕು ಜಯಪುರ (ಹೊಸಕೆರೆ) ಗ್ರಾಮದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ (ರೈತ ಬಣ) ಗ್ರಾಮ ಘಟಕದ ನೂತನ ನಾಮಫಲಕವನ್ನು ರಾಜ್ಯಾಧ್ಯಕ್ಷ ಇಂಗಲಗುಪ್ಪೆ ಕೃಷ್ಣೇಗೌಡ ಅನಾವರಣಗೊಳಿಸಿದರು. ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹೊಸಕೆರೆ ಗ್ರಾಮ ಘಟಕ ಗೌರವಾಧ್ಯಕ್ಷ ಸಣ್ಣಪ್ಪ, ಅಧ್ಯಕ್ಷ ಕೆಲ್ಲಹಳ್ಳಿ ಪರಮೇಶ್, ಉಪಾಧ್ಯಕ್ಷ ಅಜ್ಜಪ್ಪ ಮಹೇಶ್, ಬಸಪ್ಪ, ಕಾರ್ಯದರ್ಶಿ ಭೈರೇಗೌಡ, ರೈತ ಮುಖಂಡರಾದ ಬಸನಗೌಡ ಪಾಟೀಲ್ ಯತ್ನಾಳ್, ಚಂದ್ರಶೇಖರ್, ವೀರಪ್ಪ ಜೋಷಿ, ಹುಣಸೂರು ನಿಂಗಮ್ಮ, ಜಯಪುರ ಗ್ರಾಮ ಪಂಚಾಯಿತಿ ಅಧ್ಯಕ್ಷ ಮಹಾದೇವಯ್ಯ, ಸದಸ್ಯರಾದ ಎಂ.ನಾಗರಾಜು, ಬಿ.ರೇಣುಕಾ, ಭೈರೇಶ್ ಹಾಗೂ ರೈತ ಮುಖಂಡರು ಭಾಗವಹಿಸಿದ್ದರು.

3ನೇ ವರ್ಷದ ಹುಟ್ಟುಹಬ್ಬದ ಶುಭಾಶಯಗಳು



ಚಾರ್ವಿಕ.ಎಂ.

ತಾಯಿ ಚಾಮುಂಡೇಶ್ವರಿ ಆಯಸ್ಸು ಆರೋಗ್ಯ ಕೊಟ್ಟು ಕಾಪಾಡಲಿ

ಶುಭಾಶಯ ಕೋರುವವರು: ತಂದೆ ಮಂಜುನಾಥ್ ತಾಯಿ ಆಶ್ವಿನಿ ಹಾಗೂ ಕುಟುಂಬವರ್ಗದವರು

ಶ್ರೀ ಕೃಷ್ಣರಾಜೇಂದ್ರ ಸಹಕಾರ ಬ್ಯಾಂಕ್ ನಿ.

ನಿರ್ದೇಶಕರ ಚುನಾವಣೆ 2024 – 2029

ದಿನಾಂಕ 20/10/2024 ರಂದು ಭಾನುವಾರ ನಡೆಯಲಿರುವ ಚುನಾವಣೆಯಲ್ಲಿ ಸ್ಪರ್ಧಿಸಿರುವ ನನ್ನ 'ತಕ್ಕಡಿ' ಗುರುತಿಗೆ ತಮ್ಮ ಅಮೂಲ್ಯವಾದ ಮತವನ್ನು ನೀಡಿ ಜಯಶೀಲರನ್ನಾಗಿ ಮಾಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ

ಕ್ರಮ. ಸಂಖ್ಯೆ.	ಅಭ್ಯರ್ಥಿಯ ಹೆಸರು	ಚಿಹ್ನೆ
16	ರೇಖಾಪ್ರಿಯದರ್ಶಿನಿ ಎಂ.ವಿ. (ಮಹಿಳಾ ಮೀಸಲು)	



ಇಂತಿ ತಮ್ಮ ವಿಶ್ವಾಸಿ

ರೇಖಾಪ್ರಿಯದರ್ಶಿನಿ ಎಂ.ವಿ.

ಖಜಾಂಚಿ ಅಖಿಲ ಭಾರತ ಮಹಿಳಾ ಪರಿಷತ್

ಸಮಯ : ಬೆಳಿಗ್ಗೆ 9.00 ರಿಂದ ಸಂಜೆ 4.00 ರವರೆಗೆ

ಸ್ಥಳ : ಹಾರ್ಡ್ವಿಕ್ ಶಾಲೆ,

ಝಾನ್ಸಿ ಲಕ್ಷ್ಮಿಬಾಯಿ ರಸ್ತೆ, 09 ಆರ್.ಟಿ.ಓ. ಹತ್ತಿರ, ಚಾಮರಾಜಪುರಂ, ಮೈಸೂರು

ವಧು ಬೇಕಾಗಿದ್ದಾರೆ

38 ವರ್ಷದ ವಿಚ್ಛೇದಿತ ಸುಂದರ ಅಯ್ಯಂಗಾರ್ ವರ

5.11" ಭಾರದ್ವಾಜ ಗೋತ್ರ, ಪುಬ್ಬ ನಕ್ಷತ್ರ ಎಂ.ಎಸ್ಸಿ, ಕೇಂದ್ರ ಸರ್ಕಾರಿ ನೌಕರ (ಬಲ ಭಾಗದಲ್ಲಿ ಸಣ್ಣ ತೊಂದರೆ ಇದೆ) ಯಾವುದೇ ವಿದ್ಯಾರ್ಹತೆಯ ಬ್ರಾಹ್ಮಣ ವಧು ಬೇಕಾಗಿದೆ.

ಸಂಪರ್ಕಿಸಿ : 70194 55168

HOUSE FOR SALE

KUVEMPUNAGAR

DIRECT OWNER

Meeting

Ph 94833 95638

HIRING

- **BIO MEDICAL ENGINEER** (B.E., in Biomedical Engineering)
- **STAFF NURSES** (B.Sc., (N) / GNM)


Send Your Resume to : hr@sjhmysuru.com

St. JOSEPH'S HOSPITAL

Bannimantap, Mysore.

Mob : 9606990713

4ನೇ ವರ್ಷದ ಸವಿನೆನಪು



ಕೆ.ವಿ.ಪ್ರಕಾಶ್‌ಗೌಡರು

ಇನ್‌ಫೋಸಿಸ್ ಗುತ್ತಿಗೆದಾರರು

ದುಃಖತಪ್ತರು : ಪತ್ನಿ ನಾಗರತ್ನ, ಹಾಗೂ ಕುಟುಂಬವರ್ಗದವರು, ಕುಂಬಾರಕೊಪ್ಪಲು

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ

ಪರಿಸರವನ್ನು ಕಾಪಾಡಿ

ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ತಕ್ಷಣ ಬೇಕಾಗಿದ್ದಾರೆ

ಮೈಸೂರು ನಗರದ ಬನ್ನೂರು ರಸ್ತೆಯಲ್ಲಿರುವ ಪ್ರತಿಷ್ಠಿತ ಶಾಲೆಗೆ **ಆಫೀಸ್ ಅಟೆಂಡರ್** (ಮಹಿಳಾ/ಪುರುಷ ಅಭ್ಯರ್ಥಿಗಳು), **ವಾಹನ ಚಾಲಕರು** ಹಾಗೂ **ಕ್ಯಾಂಟೀನ್‌ನಲ್ಲಿ ಕೆಲಸ** ಮಾಡಲು **ಹುಡುಗರು ಬೇಕಾಗಿದ್ದಾರೆ.**

ಆಸಕ್ತರು ನೇರ ಸಂದರ್ಶನಕ್ಕೆ ಆಧಾರ್ ಕಾರ್ಡ್‌ನೊಂದಿಗೆ ಹಾಜರಾಗಬೇಕಾದ ವಿಳಾಸ:

21–10–2024 ಸೋಮವಾರ.

ಸಮಯ: ಬೆಳಿಗ್ಗೆ 10.00 ರಿಂದ ಸಂಜೆ 4.00

ಜ್ಞಾನ ಸರೋವರ ಅಂತರರಾಷ್ಟ್ರೀಯ ವಸತಿ ಶಾಲೆ, ಭುಗತಹಳ್ಳಿ, ವಾಜಮಂಗಲ ಪೋಸ್ಟ್, ಬನ್ನೂರು ರಸ್ತೆ, ಮೈಸೂರು–28

ದೂರವಾಣಿ: 9343299998,9379399998

BIG Festive sale

SHOP NOW

BUY 2 GET 1 FREE

ON ALL IN HOUSE BRANDS *T&C Apply

2+1 OFFER WUSM ON GENTS & LADIES FOOTWEAR | PICK THE BEST FOR YOUR FEET

SHOE WORLD™ ESTD.1998 Celebrating 25+ YEAR

Best Brands at Your Feet...

Below Oxford, 100ft. Road, Ramaswamy Circle, Mysuru -04 | ✆ : 2424252 11-30am to 8-30pm

WE HAVE NO BRANCHES

COMMERCIAL NEW BUILDING FOR SALE

60X20 N-E Corner

J.P. Nagar Police Booth

Rent - 1.5 lakh

Price - 4.25 cr (Nego)

Contact

8971134052

ರತ್ನ ಪ್ಯಾರಾ ಮೆಡಿಕಲ್ ಕಾಲೇಜ್

ರಮಾವಿಲಾಸ್ ರಸ್ತೆ, ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ಹತ್ತಿರ

ಪ್ರವೇಶ ತೆರೆದಿದೆ

ಡಿಪ್ಲೋಮಾ ಇನ್ ಮೆಡಿಕಲ್ ಲ್ಯಾಬ್ ಟೆಕ್ನಾಲಜಿ (DMLT)

SSLC / PUC Pass / Fail

ಬ್ಯಾಚುಲರ್ಸ್ ಇನ್ ಮೆಡಿಕಲ್ ಲ್ಯಾಬ್ ಟೆಕ್ನಾಲಜಿ (B.Voc)

9886654463

WANTED FOR RENT

Ground floor : 1300Sq.ft

1st floor - 1300 Sqft

2nd floor - 1300 Sqft

3nd floor - 1300 Sqft

Parking cellar

Available 1300Sq.ft

Dhanush Arcade

Commercial Complex, Ramanuja Road, Near Akkamani, Govt Hospital, Mysuru

9741777424 | 9591820812

WANTED

Sales Executive Cum Store Manager for uniform Manufacturing Company also need Male/Female Workers

9880929574

ಮೈಸೂರಿನ ಕಂಪೆನಿಗೆ ಬೇಕಾಗಿದ್ದಾರೆ

- ಟ್ರಾಕ್ಟರ್ ಡ್ರೈವರ್
- ಕಾರ್ ಡ್ರೈವರ್ ಕನಿಷ್ಠ 5 ವರ್ಷದ ಅನುಭವ
- ಮನೆ ಕೆಲಸಕ್ಕೆ ಒಂದು ಫ್ಯಾಮಿಲಿ

ಸಂಪರ್ಕಿಸಿ: 8123450066

ಹಸಿರು ನಮ್ಮ ಉಸಿರು

FOR SALE

42x80, 3,360 SqFt

West Facing, Residential Plot @ Chamundipuram, Mysuru.

@ ₹ 8000 Per Sqft

₹ 2.7 Cr.

YEStates Property Management Services

9019 245 745

30X40 SITES FOR SALE

in BHAIRAVA ENCLAVE

Maratikyathanahalli

Rs. 3899/- sq.ft.,

30x40 & 20x40

EAST FACING SITE

near Hari Vidyalaya

Near Railway Layout SBM Bogadi.

Price Rs. 4600/- per sq.ft.,

Call : 87922 35466 / 88846 16461



SHOBA PROPERTIES

SITES FOR SALE

FULLY DEVELOPED

Attached to Govt. High School and College after YELWALA

MOB:98807 74395

ಸೋಫಾ ರಿಪೇರ್ಸ್ ಅಂಡ್ ವರ್ಕ್ಸ್

9591012944

ನಿವೇಶನಗಳು ಮಾರಾಟಕ್ಕಿವೆ

ಸೈನಿಕ ನಗರ ಬಡಾವಣೆ

ಡೆವಲಪರ್– ARAMANE NAGARA DEVELOPERS

ಇಲವಾಲದಿಂದ ಕೇವಲ 5 ಕಿ.ಮೀ., NH-275 ಗೆ ಹೊಂದಿಕೊಂಡಿದೆ.

ಪ್ರತಿ ಚದರ ಅಡಿಗೆ ಕೇವಲ **ರೂ.699/- & ರೂ.999/-**

ಉಚಿತ ನಿವೇಶನ ಭೇಟಿ ಲಭ್ಯವಿರುತ್ತದೆ.

ಆಸಕ್ತರು ಕರೆ ಮಾಡಿ : 95131 57993, 74062 84792

ಸಾರ್ವಜನಿಕ ಸೀರತ್ ಸಮಾವೇಶ

SEERATH CONFERENCE

ಪ್ರವಾದಿ ಮುಹಮ್ಮದ್(ಸ)ರ ಬದುಕಿನ ಚಿತ್ರಣವನ್ನು ಪ್ರಸ್ತುತಪಡಿಸುವ

ತಾವೂ ಬನ್ನಿ, ತಮ್ಮವರನ್ನೂ ಕರೆತನ್ನಿ...

ಸಾನಿಧ್ಯ

ಶ್ರೀ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಕಾರ್ಯದರ್ಶಿಗಳು, ಶ್ರೀ ಆದಿಚುಂಚನಗಿರಿ ಮಹಾ ಸಂಸ್ಥಾನ ಶಾಖಾ ಮಠ, ಮೈಸೂರು

ರೆ|ಫಾ| ಸ್ಟೇನಿ ಡಿ ಅಲ್ಮೇಡಾ ಧರ್ಮಗುರುಗಳು, ಸೇಂಟ್ ಫಿಲೋಮಿನಾ ಚರ್ಚ್, ಮೈಸೂರು

ಮೌಲಾನಾ ಮುಹಮ್ಮದ್ ಉಸ್ಮಾನ್ ಶರೀಫ್ ಸರ್ ಖಾಝಿ, ಮೈಸೂರು

ಜನಾಬ್ ಮುಹಮ್ಮದ್ ಕುಂಞ ವ್ಯವಸ್ಥಾಪಕರು, ಶಾಂತಿ ಪ್ರಕಾಶನ ಹಾಗೂ ರಾಜ್ಯ ಕಾರ್ಯದರ್ಶಿ, ಜ.ಇ.ಹಿಂದ್ ಕರ್ನಾಟಕ

ಕೃತಿ ಬಿಡುಗಡೆ : ಡಾ|| ಬಂಜಗೆರೆ ಜಯಪ್ರಕಾಶ್ ಲೇಖಕರು, ಚಿಂತಕರು ಹಾಗೂ ಮಾಜಿ ಅಧ್ಯಕ್ಷರು, ಕರ್ನಾಟಕ ಕನ್ನಡ ಪುಸ್ತಕ ಪ್ರಾಧಿಕಾರ

ಮುಖ್ಯ ಅತಿಥಿಗಳು

ಅಲ್ ಹಾಜ್ ತನ್ವೀರ್ ಸೇಠ್ ಶಾಸಕರು, ಎನ್.ಆರ್.ವಿಧಾನಸಭಾ ಕ್ಷೇತ್ರ, ಮೈಸೂರು

ಶ್ರೀ ಕೆ. ಹರೀಶ್ ಗೌಡ ಶಾಸಕರು, ಚಾಮರಾಜ ವಿಧಾನಸಭಾ ಕ್ಷೇತ್ರ, ಮೈಸೂರು

ಶ್ರೀಮತಿ ಸೀಮಾ ಲಾಟ್ಕರ್ IPS., ಪೋಲಿಸ್ ಆಯುಕ್ತರು, ಮೈಸೂರು

ಜನಾಬ್ ಅಷಾದುರ್ರಹ್ಮಾನ್ ಷರೀಫ್ ಆಯುಕ್ತರು, ಮಹಾನಗರ ಪಾಲಿಕೆ, ಮೈಸೂರು

ಜನಾಬ್ ಅಯ್ಯೂಬ್ ಖಾನ್ ಅಧ್ಯಕ್ಷರು, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ

ಜನಾಬ್ ಎ.ಬಿ. ಇಬ್ರಾಹೀಮ್ ಮಾಜಿ ಆಯುಕ್ತರು, ಮಹಾನಗರ ಪಾಲಿಕೆ, ಮೈಸೂರು

2024 **ಅಕ್ಟೋಬರ್ 20 ಭಾನುವಾರ**

ಸಮಯ: ಬೆಳಗ್ಗೆ 10.30 ರಿಂದ 1.30

ಕಲಾಮಂದಿರ, ಮೈಸೂರು.

ತಮಗೆಲ್ಲರಿಗೂ ಆದರದ ಸ್ವಾಗತ ಬಯಸುವ

ಸೀರತ್ ಸಮಾವೇಶ ಸ್ವಾಗತ ಸಮಿತಿ, ಮೈಸೂರು

ಜಮಾಅತೆ ಇಸ್ಲಾಮೀ ಹಿಂದ್, ಮೈಸೂರು ನಗರ ಶಾಖೆ.

ಬ್ರಾಂಡೆಡ್ ಗಾರ್ಮೆಂಟ್ಸ್ ಮತ್ತು ಫುಟ್‌ವೇರ್ ಮರಾಟ

ದೀಪಾವಳಿ ಹಬ್ಬದ ಪ್ರಯುಕ್ತ ಹೊಸಸ್ಟಾಕ್‌ನೊಂದಿಗೆ

ಇಂದಿನಿಂದ ಭಾರಿ ರಿಯಾಯಿತಿ ಮಾರಾಟ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್‌ನಲ್ಲಿ ಮಾತ್ರ

ಪುರುಷರ ಮತ್ತು ಮಹಿಳೆಯರ ಸಹಸ್ರಾರು ಬಗೆಯ ಬ್ರಾಂಡೆಡ್ ಸಿದ್ಧ ಉಡುಪುಗಳು, ಬ್ರಾಂಡೆಡ್ ಶೂಸ್, ಪಾದರಕ್ಷೆಗಳು, ಸೀರೆಗಳು, ಶಾರ್ಟ್ಸ್, ಟಿ–ಶರ್ಟ್ಸ್, ವೆಸ್ಟರ್ನ್ ಟಾಪ್ಸ್, ಟ್ರ್ಯಾಕ್ ಪ್ಯಾಂಟ್, ಪಾಲಜ಼ೋ, ಬಾಟಮ್ಸ್, ಕುರ್ತೀ, ಜೀನ್ಸ್, ಶರ್ಟ್, ಜಾಕೆಟ್ಸ್, ಜಿಪ್ಪರ್, ವುಡ್ಡೀಸ್, ಸ್ವೆಟ್‌ಶರ್ಟ್ ಇನ್ನೂ ಹಲವಾರು ಉಡುಪುಗಳು

adidas NIKE WOODLAND U.S. POLO ASSN. SINCE 1890 asics new balance SKECHERS LOUIS PHILIPPE ANTA CATIA PUMA campus cultsport RED CHIEF

And more Brands Shoes Flat 60% to 75% off Discount

Upto 90% OFF **ಬ್ರಾಂಡೆಡ್ ಸಿದ್ಧ ಉಡುಪುಗಳು & ಶೂಸ್ ಪಾದರಕ್ಷೆಗಳು, ಸೀರೆಗಳು ಮತ್ತು ಅಲಂಕಾರಿಕಾ ವಸ್ತುಗಳು**

ಪುರುಷರ ಟಿ–ಶರ್ಟ್ಸ್, ಮಹಿಳೆಯರ ಪಲಾಜ಼ೋ & ಬಾಟಮ್ಸ್ ರೂ. **199/-**

ಟ್ರ್ಯಾಕ್ ಪ್ಯಾಂಟ್, ಕುರ್ತೀಸ್, ಜೀನ್ಸ್ ಮತ್ತು ಸೀರೆಗಳು ರೂ. **299/-**

ಪುರುಷರ ಬಾಕ್ಸರ್ ಶಾರ್ಟ್ಸ್ ರೂ. **249/-** | ಪುರುಷರ ಶರ್ಟ್ ರೂ. **299/- to 699/-** | ಬ್ರಾಂಡೆಡ್ ಜೀನ್ಸ್ ರೂ. **399/- to 999/-**

ಮಹಿಳೆಯರ ಜಾಕೆಟ್‌ಗಳು, ವುಡ್ಡೀಸ್, ಜಿಪ್ಪರ್, ಸ್ವೆಟ್ ಶರ್ಟ್‌ಗಳು, ಸ್ವೆಟರ್‌ಗಳು ಯಾವುದನ್ನೇ ಕೊಂಡರೂ ರೂ. **499/-** ಮಾತ್ರ

ಪುರುಷರ ಜೀನ್ಸ್, ಪ್ಯೂಮಾ ಟ್ರ್ಯಾಕ್ ಪ್ಯಾಂಟ್, ಪುರುಷರ ಜಾಕೆಟ್‌ಗಳು, ಜಿಪ್ಪರ್, ವುಡ್ಡೀಸ್, ಸ್ವೆಟ್‌ಶರ್ಟ್‌ಗಳು ಎಂಆರ್‌ಪಿ ರೂ. 1999ರಿಂದ 4999 ಯಾವುದನ್ನೇ ಖರೀದಿಸಿದರೂ ರೂ. **599/-** ಮಾತ್ರ

ಮಹಿಳೆಯರ ಪ್ಯಾಂಟಿ ರೂ. 50/- to 90/- ಮಾತ್ರ | enamor **Bra Just Rs. 200/-**

ಆಫರ್ **5** ದಿನಗಳು ಮಾತ್ರ ಶನಿ **19** ಭಾನು **20** ಸೋಮ **21** ಮಂಗಳ **22** ಬುಧ **23** ಅಕ್ಟೋಬರ್ 2024

ಸ್ಥಳ : ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್

ಜೆ.ಎಲ್.ಬಿ. ರಸ್ತೆ, ಮುಡಾ ಕಛೇರಿ ಪಕ್ಕದಲ್ಲಿ, ಮೈಸೂರು

ಎಲ್ಲ ಪ್ರಮುಖ ಡೆಬಿಟ್/ಕ್ರೆಡಿಟ್ ಕಾರ್ಡ್‌ಗಳು, ಆನ್‌ಲೈನ್ ಪಾವತಿಗಳನ್ನು ಸ್ವೀಕರಿಸಲಾಗುವುದು | ಸಮಯ : ಬೆ.10 ರಿಂದ ರಾತ್ರಿ 10ರವರೆಗೆ ಸಂಪರ್ಕ : 8747869888 | ಉಚಿತ ಪ್ರವೇಶ & ಪಾರ್ಕಿಂಗ್

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಕೃಷ್ಣರಾಜನಗರ

ಜಿಲ್ಲೆ: ಮೈಸೂರು) ಪಿನ್ ಕೋಡ್–571 602 (ರಾಜ್ಯ: ಕರ್ನಾಟಕ

E-Mail ID: apmckrnagar@rediffmail.com

ದೂ.ಕಛೇರಿ:08223–262342–297312

ಸಂ:ಕೃಉಮಾಸ(ಕೃರಾನ)/283/2024–25 ದಿನಾಂಕ: 15.10.2024

ಪ್ರಕಟಣೆ

ಕೆ.ಆರ್.ನಗರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಮೆ/ ಪ್ರಭಾ ಅಂಡ್ ಕೋ, ಮಾಲೀಕರು, ಶ್ರೀ ವೈ.ಎಸ್.ಕುಮಾರ್ s/o ವೈ.ಎಸ್.ಶ್ರೀನಿವಾಸ್, ಅಂಜನೇಯ ಬ್ಲಾಕ್, ಕೆ.ಆರ್.ನಗರ ಇವರಿಗೆ ಹಂಚಿಕೆಯಾಗಿರುವ ನಿವೇಶನ ಸಂಖ್ಯೆ ಎ–04ರ ಗೋದಾಮು ಸಹಿತ ನಿವೇಶನವನ್ನು ಎಂ.ಆರ್.ಟ್ರೇಡರ್ಸ್, ಮಾ/ಶ್ರೀಮತಿ ಸುನೀತ ಕೋಂ ಮಂಜುನಾಥ. ಎಂ, ಬಸವೇಶ್ವರ ಬ್ಲಾಕ್, ಕೆ.ಆರ್.ನಗರ ಟೌನ್, ಕೆ.ಆರ್.ನಗರ ಇವರಿಗೆ ಮಾರಾಟ ಮಾಡಲು ಅನುಮತಿ ಕೋರಿ ಈ ಕಛೇರಿಗೆ ಮನವಿ ಸಲ್ಲಿಸಿರುತ್ತಾರೆ. ಪ್ರಯುಕ್ತ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ನಿವೇಶನ ಸಂಖ್ಯೆ ಎ–04ರ ಗೋದಾಮು ಸಹಿತ ನಿವೇಶನವನ್ನು ಎಂ.ಆರ್.ಟ್ರೇಡರ್ಸ್, ಮಾ/ಶ್ರೀಮತಿ ಸುನೀತ ಕೋಂ ಮಂಜುನಾಥ, ಎಂ.ಬಸವೇಶ್ವರ ಬ್ಲಾಕ್, ಕೆ.ಆರ್.ನಗರ ಟೌನ್, ಕೆ.ಆರ್.ನಗರ ಇವರಿಗೆ ಮಾರಾಟ ಮಾಡುವ ಸಂಬಂಧ ಸಾರ್ವಜನಿಕರು ಅಥವಾ ಸಂಬಂಧಿಕರಿಂದ ಮತ್ತು ಯಾರಿಂದಲಾದರೂ ಏನಾದರೂ ಆಕ್ಷೇಪಣೆಗಳಿದ್ದಲ್ಲಿ ಈ ಪ್ರಕಟಣೆ ದಿನಾಂಕದಿಂದ 15 ದಿವಸದೊಳಗೆ ಈ ಕಚೇರಿಗೆ ಲಿಖಿತ ರೂಪದಲ್ಲಿ ಸಲ್ಲಿಸುವಂತೆ ಈ ಮೂಲಕ ತಿಳಿಸಲಾಗಿದೆ. ನಿವೇಶನದ ಚೆಕ್ಕುಬಂದಿ ವಿವರ ಈ ಕೆಳಕಂಡಂತಿರುತ್ತದೆ.

"ಚೆಕ್ಕುಬಂದಿ" ಪೂರ್ವ: ನಿವೇಶನ ಸಂಖ್ಯೆ ಎ–03 **ಪಶ್ಚಿಮ:** ನಿವೇಶನ ಸಂಖ್ಯೆ ಎ–05 **ಉತ್ತರ:** ಎ.ಪಿ.ಎಂ.ಸಿ ರಸ್ತೆ. **ದಕ್ಷಿಣ:** ಮುಂದಿನ ಅಭಿವೃದ್ಧಿ ಜಾಗ & ರಸ್ತೆ

ಸಹಿ/– ಕಾರ್ಯದರ್ಶಿ ಕೃ.ಉ.ಮಾ.ಸ., ಕೆ.ಆರ್.ನಗರ

ಸಹಿ/– ಆಡಳಿತಾಧಿಕಾರಿ ಕೃ.ಉ.ಮಾ.ಸ., ಕೆ.ಆರ್.ನಗರ

DIPR/DDMYS-685/KSMCA-465/2024-25

Job Openings — FAME

Immediate Recruitment We are hiring for the following positions:

1. Site Engineers
2. Site Accountants
3. Surveyors (with Total Station Experience)
4. Site Supervisors
5. Drivers - Car/Pickup
6. Security guards
7. Housekeeping Managers
8. Cooks

Qualifications & Skills: Relevant qualifications and experience required for each position. For surveyors, prior experience with total station equipment is a must.

Location: Mysore/Yelwala, Salary: Competitive, based on experience.

Interested candidates please send your resume to rizwan@groupaccession.com

contact us **9743233255**